Digitized by Arya Samaj Foundation Chennai and eGangotri

L. 21
1000

SOURCES OF INDO-ARYAN LEXICOGRAPHY: 5

KĀŚAKṚTSNA-ŚABDAKALĀPA DHĀTUPĀṬHA

OF

CANNAVĪRAKAVI

Edited by

A. N. NARASIMHIA, M.A., L.T., Ph.D. (London)

११क
५

POONA

1952

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DECCAN COLLEGE MONOGRAPH SERIES

1. **Panipat: 1761** by T. S. SHEJWALKAR. Crown 4to, pp. 141 and 9 maps, 1946. Rs. 12. [M 1].
2. **Anthropometric Measurements of the Marathas** by IRAWATI KARVE. Crown 4to, pp. 71 and 4 plates. 1948. Rs. 8. [M 7].
3. **Studies in the Historical and Cultural Geography and Ethnography of Gujarat** by H. D. SANKALIA (being the Thakkar-Vassonji Madhavji Lectures for 1944 at the University of Bombay). Crown 4to, pp. xvi+245 and 3 maps. 1949. Rs. 15. [M 11].
4. **Etched Beads in India** by M. G. DIKSHIT. Crown 4to, pp. viii + 79 and 19 plates. 1949. Rs. 10. [M 13].
5. **Report on the Excavations at Brahmapuri in Kolhapur** by H. D. SANKALIA and M. G. DIKSHIT. Crown 4to. [M 15]. (*In press*).
6. **Stone Age and Pleistocene Chronology in Gujarat** by F. E. ZEUNER. Crown 4to, pp. 46 + 11 plates. 1950. Rs. 8. [M 17].
7. **Phonemics of Old Tamil** by C. R. SANKARAN. Crown 4to, pp. 71. 1951. Rs. 8. [M 18]
8. **Anthropometric Measurements of Maharastra** by I. KARVE and V. M. DANDEKAR. Crown 4to, pp. 134 + 24 plates. 1951. Rs. 12. [M 20].

DECCAN COLLEGE DISSERTATION SERIES

1. **Historical Grammar of Old Kannada** (based entirely on the Kannada Inscriptions of the 8th, 9th and 10th centuries A.D.) by G. S. GAI. Royal 8vo, pp. xvi + 232. 1946. Rs. 15. [D 2].
2. **Cultural History from Vayu Purana** by D. R. PATIL. Royal 8vo, pp. xviii + 348. 1946. Rs. 15. [D 3].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

स्टाक प्रमाणीकरण १९८४-१९८५

११क / ५ 25265

KĀŚAKṚTSNA-ŚABDAKALĀPA DHĀTUPĀṬHAḤ

OF

CANNAVĪRAKAVI

CHECKED 1973

Initial

ओ३म्

पुस्तक संख्या ११क / ५

पञ्जिका संख्या 25265

पुस्तक पर सर्व प्रकार की निशानियां लगाना वर्जित है। कोई सज्जन पन्द्रह दिन से अधिक देर तक पुस्तक अपने पास नहीं रख सकते। अधिक देर तक रखने के लिये पुनः आज्ञा प्राप्त करनी चाहिये।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

SOURCES OF INDO-ARYAN LEXICOGRAPHY : 5

KĀŚAKṚTSNA-ŚABDAKALĀPA DHĀTUPĀṬHAḤ

OF

CANNAVĪRAKAVI

Edited by
A. N. NARASIMHIA

DECCAN COLLEGE
POST-GRADUATE AND RESEARCH INSTITUTE
POONA

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

First Edition 1000 Copies March, 1952

Price Rs. 5

CODE NO. L. 21

All rights Reserved

PRINTED BY HUGH WARREN AT THE WESLEY PRESS AND PUBLISHING HOUSE MYSORE AND PUBLISHED BY DR. S. M. KATRE FOR THE DECCAN COLLEGE POST-GRADUATE AND RESEARCH INSTITUTE, YERAVDA, POONA 6

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

FOREWORD

The present edition of a new Dhātupāṭha based on two unique Kannada Mss. by Dr. A. N. Narasimhia constitutes the fifth of the series entitled *Sources of Indo-Aryan Lexicography* founded by this Institute as studies contributory to the compilation of a Dictionary of Sanskrit on historical principles. Though Dr. Narasimhia's interest in this work dates back to a period anterior to the foundation of the Scholars' Corner in the Maharaja's College, Mysore, intended to form a centre for the compilation of material for the proposed Dictionary, he readily agreed to let it form a part of the project which the Mysore Centre formulated within the Minimum Programme planned by this Institute, and it is with real pleasure that I welcome this first fruit of that collaboration.

This Dhātupāṭha has several unique features presented in the new verbal bases recorded therein which have no counter-parts in other systems. A study of the various Dhātupāṭhas is a real necessity and one of the research scholars working in this Institute is at present investigating problems arising from a comparative study of all the Dhātupāṭhas. The present work will add to that contribution, and also to our knowledge and history of these new vocables.

In conclusion I wish to record my personal thanks to Dr. Narasimhia for his edition of a unique lexical work and to the Mysore Centre for its part in carrying forward the work of the Institute on its major international and pan-Indian project.

Poona,
6th March 1952.

S. M. Katre

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೀಠಿಕೆ

"ಕಾಶಕೃತ್ಸ್ನಶಬ್ದಕಲಾಪಧಾತುಪಾಠಃ" ಎಂಬ ಈ ಗ್ರಂಥವನ್ನು ಅಚ್ಚುಹಾಕಿಸುವುದು ಅವಶ್ಯಕವೆಂದು ಹೇಳಿ ನನಗೆ ಪ್ರೋತ್ಸಾಹವನ್ನು ಕೊಟ್ಟವರು ನನ್ನ ಪೂಜ್ಯಗುರುಗಳಾದ ಶ್ರೀಮಾನ್ ಡಾ॥ ಎ. ವೆಂಕಟಸುಬ್ಬಯ್ಯ ಎಂ.ಎ., ಎಲ್‌ಎಲ್.ಬಿ., ಪಿಹೆಚ್.ಡಿ. ಅವರು.

ಈ ಗ್ರಂಥದ ಓಲೆಗರಿಯ ಪ್ರತಿಯು ನಮ್ಮ ತೀರ್ಥರೂಪರವರು ಸಂಗ್ರಹಿಸಿಟ್ಟಿದ್ದ ಗಂಟಿನಲ್ಲಿ ಸಿಕ್ಕಿತು. ಇದರ ಇನ್ನೊಂದು ಪ್ರತಿಯು ಮೈಸೂರು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿದೆ. ಇವುಗಳ ಆಧಾರದಮೇಲೆ ಈ ಗ್ರಂಥವನ್ನು ಅಚ್ಚುಹಾಕಿಸಿದೆ.

ಇದಕ್ಕೆ "ಕಾಶಕೃತ್ಸ್ನಶಬ್ದಕಲಾಪಧಾತುಪಾಠಃ" ಎಂಬ ಹೆಸರು ಬರಲು ಕಾರಣಗಳನ್ನು ಸ್ಪಷ್ಟವಾಗಿ ಗ್ರಂಥದಲ್ಲಿ ಹೇಳಿಲ್ಲ.

ಕಾಶಕೃತ್ಸ್ನನ ಹೆಸರು (ಕವಿಕಲ್ಪದ್ರುಮ ಮುಂತಾದವುಗಳಲ್ಲಿ ಹೇಳಿರುವಂತೆ) ಎಂಟು ಜನ ಆದಿ ಶಾಬ್ದಿಕರಲ್ಲಿ ಮೂರನೆಯದು.* ಎಂಟು ಮಂದಿ ಆದಿಶಾಬ್ದಿಕರು ವ್ಯಾಕರಣಗಳನ್ನು ರಚಿಸಿದ್ದಾರೆ. ಪ್ರತಿ ವ್ಯಾಕರಣಕ್ಕೂ ಒಂದು ಧಾತುಪಾಠವು ಸೇರಿದೆಯೆಂದು ಹೇಳುವುದು ಸಂಪ್ರದಾಯ. ಕೆಲವು ಧಾತುಪಾಠಗಳು ಸಿಕ್ಕಿವೆ, ಕೆಲವು ಸಿಕ್ಕಿಲ್ಲ.

ಈ ಗ್ರಂಥಕ್ಕೆ "ಕಾಶಕೃತ್ಸ್ನಶಬ್ದಕಲಾಪಧಾತುಪಾಠಃ" ಎಂಬ ಹೆಸರಿರುವುದರಿಂದ ಇದು "ಕಲಾಪ" ವ್ಯಾಕರಣಕ್ಕೆ ಸಂಬಂಧಪಟ್ಟಿದೆಯೆಂದು ಹೇಳುವುದೂ ಉಂಟು.

ಕಲಾಪ ವ್ಯಾಕರಣಕ್ಕೆ "ಕುಮಾರವ್ಯಾಕರಣ" ಮತ್ತು "ಕಾತನ್ತ್ರವ್ಯಾಕರಣ"ವೆಂಬ ಹೆಸರುಗಳೂ ಉಂಟು.

"ಕಲಾಪಚಂದ್ರ" ಎಂಬ ಸಂಸ್ಕೃತಗ್ರನ್ಥದಲ್ಲಿ ಈ ವ್ಯಾಕರಣದ ಉತ್ಪತ್ತಿವಿಚಾರವಾದ ಕಥೆಯು ಹೀಗಿದೆ:—

"ಶಾಲಿವಾಹನ ಮಹಾರಾಜನು ಹೆಂಡತಿಯೊಬ್ಬಳೊಡನೆ ಜಲಕ್ರೀಡೆಯಾಡುತ್ತಿದ್ದನು. ರಾಣಿಯು ನೀರೆರಚಿದ್ದರಿಂದ ಆಯಾಸಗೊಂಡು

---

* ಇನ್ದ್ರ ಚನ್ದ್ರ ಕಾಶಕೃತ್ಸ್ನಾಪಿಶಲಿ ಶಾಕಟಾಯನಾಃ ।
ಪಾಣಿನ್ಯಮರಜೈನೇನ್ದ್ರಾ ಜಯನ್ತ್ಯಷ್ಟಾದಿಶಾಬ್ದಿಕಾಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಮೋದಕಂ ದೇಹಿದೇವ!' ಎಂದರೆ 'ದೇವ, ನನಗೆ ನೀರನ್ನೆರಚಬೇಡ' ಎಂದು ಹೇಳಿದಳು. ಆ ಪದಗಳ ಅರ್ಥವನ್ನರಿಯಲಾರದೆ ಆ ರಾಜನು ಆ ರಾಣಿಗೆ ಒಂದು ಕಾಯಿಕಡುಬನ್ನು (ಮೋದಕವನ್ನು) ತರಿಸಿಕೊಟ್ಟನು. ಬುದ್ಧಿವಂತಳಾದ ಆಕೆಯು 'ನನ್ನ ಪತಿಯು ರಾಜನಾದರೂ ಅವಿದ್ಯಾವಂತ' ಎಂದು ತುಂಬಾ ತನ್ನನ್ನು ತಾನೇ ನಿಂದಿಸಿಕೊಂಡಳು. ಶಾಲಿವಾಹನನು ತನ್ನ ರಾಣಿಗೂ ತನಗೂ ನಡೆದ ಈ ಸಂಬಂಧದ ವಿಷಯವೆಲ್ಲವನ್ನೂ ತನ್ನ ಗುರುವಾದ ಶರ್ವವರ್ಮನಿಗೆ ತಿಳಿಸಿದನು. ಆಗ ಶರ್ವವರ್ಮನು ಶಾಲಿವಾಹನನಿಗೆ ಸುಲಭವಾಗಿ ವ್ಯಾಕರಣಶಾಸ್ತ್ರವನ್ನು ಬೋಧಿಸಲು ಕಾತನ್ತ್ರವ್ಯಾಕರಣವನ್ನು ರಚಿಸಿದನು."

ಕಾತನ್ತ್ರ ಅಥವಾ ಕಲಾಪವ್ಯಾಕರಣದ ರಚನೆಯ ವಿಷಯದಲ್ಲಿ ಇದೊಂದು ಪ್ರವಾದವಿದೆ:

"ಶಾಲಿವಾಹನನು ಸಂಸ್ಕೃತದಲ್ಲಿ ವ್ಯುತ್ಪನ್ನನಾಗುವಂತೆ ಮಾಡಲು ಶರ್ವವರ್ಮನು ಕುಮಾರನನ್ನು ಆರಾಧಿಸಿದನು. ಆಗ ಭಗವಾನ್ ಕಾರ್ತಿಕೇಯನು ಅವನ ಆರಾಧನೆಯಿಂದ ಸುಪ್ರೀತನಾಗಿ ವ್ಯಾಕರಣ ಜ್ಞಾನವು ಕೂಡಲೇ ಉಂಟಾಗಲೆಂದು 'ಸಿದ್ಧೋ ವರ್ಣಸಮಾಮ್ನಾಯಃ' ಎಂಬ ಪದ್ಯಪಾದರೂಪವಾದ ಸೂತ್ರವನ್ನು ಶರ್ವವರ್ಮನಿಗೆ ಉಪದೇಶಿಸಿದನು. ಶರ್ವವರ್ಮನು ಅದನ್ನೇ ಅವಲಂಬಿಸಿ ಕಲಾಪವ್ಯಾಕರಣವನ್ನು ರಚಿಸಿದನು. ಕುಮಾರಸ್ವಾಮಿಯಿಂದ ವ್ಯಾಕರಣದ ಪ್ರಥಮಸೂತ್ರವು ಅನುಗೃಹೀತವಾದ್ದರಿಂದ ಇದಕ್ಕೆ 'ಕುಮಾರವ್ಯಾಕರಣ' ವೆಂದು ಹೆಸರು ಬಂದಿದೆ."

ಇದೇ ವಿಷಯದಲ್ಲಿ ಮತ್ತೊಂದು ಪ್ರವಾದವೂ ಇದೆ:

ಶರ್ವವರ್ಮನು ಶಾಲಿವಾಹನನ್ನು ಪೂರ್ಣಪಂಡಿತನನ್ನಾಗಿ ಮಾಡುವೆನೆಂದು ಪ್ರತಿಜ್ಞೆಮಾಡಿ ಕುಮಾರಸ್ವಾಮಿಯನ್ನು ಆರಾಧನೆ ಮಾಡಿದಾಗ ಕುಮಾರಸ್ವಾಮಿ ಮಯೂರವಾಹನನಾಗಿ ಶರ್ವವರ್ಮನಿಗೆ ಪ್ರತ್ಯಕ್ಷನಾದನು. ಆಗ ಶರ್ವವರ್ಮನ ಕಣ್ಣಿಗೆ ಮಯೂರದ ಕಲಾಪದಮೇಲೆ 'ಸಿದ್ಧೋ ವರ್ಣಸಮಾಮ್ನಾಯಃ' ಎಂಬ ಸೂತ್ರವು ಗೋಚರವಾಯಿತು. ಅದು ಗೋಚರವಾದ ಕೂಡಲೆ ಶರ್ವವರ್ಮನಿಗೆ ವ್ಯಾಕರಣಶಾಸ್ತ್ರದ ಪೂರ್ಣಜ್ಞಾನವು ಉಂಟಾಯಿತು."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ ಸೂತ್ರವನ್ನೇ ಮೊದಲನೆಯದನ್ನಾಗಿಟ್ಟು ಸ್ವತನ್ತ್ರವ್ಯಾಕರಣವನ್ನು ಶರ್ವವರ್ಮನು ರಚಿಸಿದನು. ಮಯೂರದ ಕಲಾಪದಲ್ಲಿ ಈ ಪ್ರಥಮ ಸೂತ್ರವು ಬರೆಯಲ್ಪಟ್ಟಿದ್ದದ್ದರಿಂದ ಈ ವ್ಯಾಕರಣಕ್ಕೆ "ಕಲಾಪ"ವೆಂಬ ಹೆಸರೂ ಇದೆ.

ಈ ಕಲಾಪವ್ಯಾಕರಣದ ಟೀಕಾಕಾರರನೇಕರು ಶರ್ವವರ್ಮನು ಸ್ವಲ್ಪದಲ್ಲಿಯೇ ಬಹಳ ಕಡಿಮೆ ಸಂಖ್ಯೆಯ ಸೂತ್ರಗಳಿಂದಲೇ ಈ ವ್ಯಾಕರಣವನ್ನು ಮುಗಿಸಿರುವುದರಿಂದ ಇದಕ್ಕೆ "ಕಾತನ್ತ್ರ"*ವೆಂಬ ಹೆಸರು—ಎಂದು ಬರೆದಿದ್ದಾರೆ.

ವಂಗದೇಶದಲ್ಲಿ ಕಲಾಪವ್ಯಾಕರಣವು ಬಹಳ ಪ್ರಸಿದ್ಧವಾದದ್ದು. ಪೂರ್ವವಂಗದಲ್ಲಿ ಪ್ರತಿಯೊಬ್ಬ ಪಂಡಿತನೂ ಕಲಾಪವ್ಯಾಕರಣವನ್ನು ಚೆನ್ನಾಗಿ ವ್ಯಾಸಂಗಮಾಡಿರುತ್ತಾನೆ. ಪಾಣಿನಿಯನ್ನು ಬಿಟ್ಟರೆ ಕಲಾಪ ವ್ಯಾಕರಣದ ಶ್ರೇಷ್ಠತೆಯನ್ನು ಎಲ್ಲ ವೈಯಾಕರಣರೂ ಅಂಗೀಕರಿಸಿದ್ದಾರೆ. ಈ ವ್ಯಾಕರಣವನ್ನು ಆದ್ಯನ್ತವಾಗಿ ಸಾಂಗವಾಗಿ ವ್ಯಾಸಂಗ ಮಾಡಿದವರು ಪಂಡಿತರೆನ್ನಿಸಿಕೊಳ್ಳಲು ಅರ್ಹರಾಗುತ್ತಾರೆ.

ಶರ್ವವರ್ಮನು ಕಲಾಪವ್ಯಾಕರಣದಲ್ಲಿ ಸನ್ಧಿ, ಚತುಷ್ಟಯ ಮತ್ತು ಆಖ್ಯಾತ ಎಂಬ ಮೂರಂಶಗಳ ವಿಷಯವಾಗಿ ಸೂತ್ರಗಳನ್ನು ರಚಿಸಿದ್ದಾನೆ. ಅವನು ಕೃತ್ಸೂತ್ರಗಳನ್ನು ರಚಿಸಿಲ್ಲ. ಕೃತ್ಸೂತ್ರಗಳನ್ನು ರಚಿಸಿದವನು ಕಾತ್ಯಾಯನನೇ.

ದುರ್ಗಸಿಂಹನು ಕಲಾಪವ್ಯಾಕರಣಕ್ಕೆ ವೃತ್ತಿಯನ್ನು ಬರೆದಿದ್ದಾನೆ. ಅವನ ವೃತ್ತಿಯಿಲ್ಲದಿದ್ದರೆ ಈ ಕಲಾಪವ್ಯಾಕರಣವು ಸಂಪೂರ್ಣವಾಗಿಯೂ ಸುಲಭವಾಗಿಯೂ ಅರ್ಥವಾಗುತ್ತಿರಲಿಲ್ಲ. ಇದರಿಂದ ದುರ್ಗಸಿಂಹನ ಅಸಾಧಾರಣ ಪಾಂಡಿತ್ಯವು ತಾನಾಗಿಯೇ ಸ್ಪಷ್ಟವಾಗುತ್ತಿದೆ.

---

* (೧) ಕಾತನ್ತ್ರಸ್ಯೇತಿ ತತ್ರಿ ಕುಟುಂಬಧಾರಣೇ ಚುರಾದವಿಣನ್ತಃ | ತನ್ತ್ರ್ಯನ್ತೇ ವ್ಯುತ್ಪಾದ್ಯನ್ತೇ ಶಬ್ದಾ ಅನೇನೇತಿ ಸ್ವರವೃದೃಗಯಿಗ್ರಹಾಮಲ್ (ಕಲಾ. ೪, ೫-೪೧) ಇತಿ ಕರಣೇಽಲ್ ಪ್ರತ್ಯಯಃ | ಸಚಾನೇಕಾರ್ಥತ್ವಾದ್ಧಾತೂನಾಂ ವ್ಯುತ್ಪಾದನೇಽಪಿ ವರ್ತತೇ | ತೇನ ತನ್ತ್ರಮಿಹ ಸೂತ್ರಮುಚ್ಯತೇ | ಈಷತ್ತನ್ತ್ರಮ್ ಕಾತನ್ತ್ರಮ್ | ಕುಶಬ್ದಸ್ಯ ತನ್ತ್ರಶಬ್ದೇ ಪರೇ | ಕಾತ್ವೀಷದರ್ಥೇಽಕ್ಷ ಇ ಈಷದರ್ಥೇ ಕಾದೇಶಃ" ತ್ರಿಲೋಚನಕೃತ "ಕಾತನ್ತ್ರಪಂಜಿಕಾಯಾಮ್"

(೨) "ಈಷತ್ತನ್ತ್ರಮ್ ಕಾತನ್ತ್ರಮ್ ಈಷಚ್ಛಬ್ದೋಽಲ್ಪಾರ್ಥವಾಚಕಃ ||" ಕವಿರಾಜಕಲಾಪವೃತ್ತಿ ಟೀಕಾ ಮತ್ತು ಕಾತನ್ತ್ರಚಂದ್ರಿಕಾ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಂಗದೇಶದಲ್ಲಿ ಈ ಕಲಾಪವ್ಯಾಕರಣಕ್ಕೆ ಅನೇಕ ಟೀಕೆಗಳು ಸಿಕ್ಕುತ್ತವೆ. ಅವುಗಳಲ್ಲಿ—

೧. ಶ್ರೀಪತಿ ವಿರಚಿತ—“ಕಾತನ್ತ್ರವೃತ್ತಿಟೀಕಾ”
೨. ತ್ರಿಲೋಚನ ವಿರಚಿತ—“ಪಂಜಿಕಾ”
೩. ಕವಿರಾಜಕೃತ—“ಕಲಾಪವೃತ್ತಿಟೀಕಾ”
೪. ಹರಿರಾಮಕೃತ—“ವ್ಯಾಖ್ಯಾಸಾರ”
೫. ರಘುನಾಥಶಿರೋಮಣಿಕೃತ—“ವ್ಯಾಖ್ಯಾ”
೬. ಕಾತನ್ತ್ರಚನ್ದ್ರಿಕಾ, ಮುಂತಾದವು ಬಹಳ ಪ್ರಸಿದ್ಧವಾಗಿವೆ.

ಆದಿಶಾಬ್ದಿಕ ಋಷಿಗಳ ಗುಂಪಿಗೆ ಕಾಶಕೃತ್ಸ್ನ (ಪು). ಸೇರಿದವನು. ಕವಿಕಲ್ಪ ದ್ರುಮದಲ್ಲಿ

> ಇನ್ದ್ರಃಚನ್ದ್ರಃಕಾಶಕೃತ್ಸ್ನಃ ಆಪಿಶಲೀ ಶಾಕಟಾಯನಃ |
> ಪಾಣಿನ್ಯಮರಜೈನೇನ್ದ್ರಾಜಯನ್ತ್ಯಷ್ಟಾದಿಶಾಬ್ದಿಕಾಃ ||

ಎಂದು ಹೇಳಿದೆ. ಪಾಣಿನಿಗಿಂತ ಹಿಂದಿದ್ದ ವ್ಯಾಕರಣಕಾರರು ಆಪಿಶಲಿ ಮತ್ತು ಕಾಶಕೃತ್ಸ್ನ ಎಂಬವರು. ಇದು ಪಾಣಿನಿಯ VI. 1. 92 ಸೂತ್ರದಲ್ಲಿ ಸೂಚಿತವಾಗಿದೆ. ಕಾಶಿಕಾವೃತ್ತಿಯಲ್ಲಿ (VII. 3. 95) ಆಪಿಶಲಿಯ ವ್ಯಾಕರಣದ ಸೂತ್ರವನ್ನು ಕೊಟ್ಟಿದೆ.* ಕಾಶಿಕಾವೃತ್ತಿಯಲ್ಲಿಯೇ (V. 1. 58) ಕಾಶಕೃತ್ಸ್ನನ ವ್ಯಾಕರಣವು ಸೂತ್ರರೂಪದಲ್ಲಿ (IV. 2. 65) ಮೂರು ಅಧ್ಯಾಯಗಳೂ ಇದ್ದವೆಂಬುದು

> ತ್ರಿಕಂ ಕಾಶಕೃತ್ಸ್ನಮ್ | ತ್ರಿಕಾಃ ಕಾಶಕೃತ್ಸ್ನಾಃ ||

ಇವುಗಳಿಂದ ವ್ಯಕ್ತವಾಗುತ್ತವೆ. ಕೈಯ್ಯಟನು V. 1. 21 ಆಪಿಶಲಿ, ಕಾಶಕೃತ್ಸ್ನ ಇವರಿಬ್ಬರ ವ್ಯಾಕರಣಗಳ ಭಾಗಗಳನ್ನು ಕೊಟ್ಟು

> “ಆಪಿಶಲಕಾಶಕೃತ್ಸ್ನಯೋಸ್ತ್ವಗ್ರನ್ಥ ಇತಿ
> ವಚನಾದನ್ಯತ್ರಪ್ರತಿಷೇಧಾಭಾವಃ |

ಎಂದು ಹೇಳಿದ್ದಾನೆ. ಈ ಕಾಶಕೃತ್ಸ್ನನ ವಿಷಯವಾಗಿ ಹೆಚ್ಚು ವಿಷಯಗಳಿನ್ನಾವುವೂ ದೊರೆತಿಲ್ಲ.

---

* BELVALKER: *Systems of Sanskrit Grammar*, pp. 9 and 10.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಶಕೃತ್ಸ್ನವ್ಯಾಕರಣವೇ ಕಾಲಾಪವ್ಯಾಕರಣವೆಂದೂ ಇದು ಐಂದ್ರ ವ್ಯಾಕರಣದ ಗುಂಪಿಗೇ ಸೇರಿದ್ದೆಂದೂ ಅನೇಕರು ಹೇಳುತ್ತಾರೆ*.

ಇನ್ನು ಈ ಧಾತುಪಾಠಕ್ಕೆ ಕನ್ನಡ ಟೀಕೆಯನ್ನು ಬರೆದಿರುವ ಕವಿಯ ವಿಚಾರ.

"ಭ್ವಾದಿಃ" ಮೊದಲನೆಯ ಭಾಗದ ಕೊನೆಯಲ್ಲಿ

"ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತೈತ್ತಿರಯಜುಃಶಾಖಾಧ್ಯಯನಸ್ಯ ವಾಮದೇವ
ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ
ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ
ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯನಂಬ್ಯಣಗುರುಕರಜಾ
ತಸ್ಯ ಸಹ್ಯಾದ್ರಿಕಟಕಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ
ಚನ್ನವೀರಕವಿಕೃತೌ ಕಾಶಕೃತ್ಸ್ನಧಾತುಕರ್ಣಾಟ ಟೀಕಾ
ಯಾಂ ಆತ್ಮನೇಪದಿನಃ ಲೇಖಕ ಪಾಠಕ ಶ್ರೋತೃ
ಣಾಂ ಸಂಸ್ಕೃತಾರ್ಥಪ್ರಕಾಶಿಕಾ ಭೂಯಾತ್"

ಎಂದು ಕವಿಯು ಹೇಳಿದ್ದಾನೆ. ಹೀಗೆಯೇ ಪ್ರತಿಯೊಂದು ವಿಭಾಗದ ಕೊನೆಯಲ್ಲಿಯೂ ಇದೇ ರೀತಿಯ ಆನುಪೂರ್ವಿಯಿದೆ. ಇದರಿಂದ ಈ ಧಾತುಪಾಠದ ಕರ್ಣಾಟ ಟೀಕೆಯನ್ನು ಬರೆದವನು ಕಾಶೀಕಾಂಡ ಚನ್ನ ವೀರಕವಿಯೆಂಬುದು ವ್ಯಕ್ತವಾಗುತ್ತದೆ.

ಈ ಕವಿಯ ವಿಷಯವಾಗಿ ಶ್ರೀ ಆರ್. ನರಸಿಂಹಾಚಾರ್ಯರ ಕವಿ ಚರಿತ್ರೆಯ ಎರಡನೆಯ ಸಂಪುಟದ ೧೬೯ ನೇ ಪುಟದಲ್ಲಿ ಹೀಗೆ ಬರೆದಿದ್ದಾರೆ:—

"ಚೆನ್ನವೀರ ಸು. ೧೫೦೦.

ಈತನು ಸಾರಸ್ವತವ್ಯಾಕರಣ, ಪುರುಷಸೂಕ್ತ, ನಮಕಚಮಕ ಇವುಗಳಿಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಯಾಗಂಟಿ ಶರಭಲಿಂಗಭಕ್ತನು, ತೈತ್ತಿರೀಯ ಯಜುಶ್ಶಾಖಾಧ್ಯಾಯಿ, ಅತ್ರಿಗೋತ್ರದವನು, ವೀರಮಾಹೇಶ್ವರ ತಂತ್ರಸೂತ್ರದವನು, ಶಿವಲೆಂಕ

* ಈ ವಿಷಯಗಳನ್ನೆಲ್ಲಾ ಎರಡನೆಯ ಸಂಪುಟದಲ್ಲಿ ವಿಶದವಾಗಿ ವಿಮರ್ಶಿಸಿದೆ. ಅದು ಶೀಘ್ರದಲ್ಲಿಯೇ ಪ್ರಕಟವಾಗುವ ಸಂಭವವಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂಚಣಪಂಡಿತಾರಾಧ್ಯವಂಶೋದ್ಭವನು; ಇವನ ತಂದೆ ಕೋಕಿಲಾಕುಂಡ ಸಂಗನ ಗುರುಲಿಂಗ, ತಾಯಿ ಸಂಧ್ಯಂಬೆ, ಗುರುಪಿತೃವ್ಯ ಸಂಬ್ಯಣ್ಣ, ಸ್ಥಳ ಸಹ್ಯಾದ್ರಿಯ ತಪ್ಪಲಲ್ಲಿರುವ ಕುಂಟಿಕಾಪುರ. ಇವನಿಗೆ ಕಾಶೀಕಾಂಡ ಚನ್ನವೀರಕವಿ ಎಂದೂ ಹೆಸರಿರುವಂತೆ ತೋರುತ್ತದೆ. ಇವನ ಕಾಲವು ಸುಮಾರು ೧೫೦೦ ಆಗಿರಬಹುದು. ಈ ವ್ಯಾಖ್ಯಾನಗಳನ್ನು ನೋಡಿದರೆ ಈತನು ದೊಡ್ಡ ಪಂಡಿತನು ಎಂಬುದಕ್ಕೆ ಅಡ್ಡಿಯಿಲ್ಲ. ಇವನ ಸಾರಸ್ವತ ವ್ಯಾಕರಣ ಟೀಕೆಗೆ ಶಬ್ದಮಣಿ ಎಂದು ಹೆಸರು."

ಪುರುಷಸೂಕ್ತಕ್ಕೆ ಈ ಕವಿಯು ರಚಿಸಿರುವ ಕರ್ಣಾಟಕ ಟೀಕೆಯು ೧೮೯೮ನೆಯ ಇಸವಿಯಲ್ಲಿ ಕ್ಲಾರ್ಕ್ ಪ್ರೆಸ್ಸಿನಲ್ಲಿ ಅಚ್ಚಾಗಿದೆ. ಈ ಗ್ರಂಥದ ಆದಿಯಲ್ಲಿ "ಶ್ರೀ ಚನ್ನವೀರ ಮಾಹೇಶ್ವರ ವಿರಚಿತ ಕರ್ಣಾಟಕ ಟೀಕಾ ಸಮೇತಂ ಪುರುಷಸೂಕ್ತಂ" ಎಂದೂ, ಅಂತ್ಯದಲ್ಲಿ "ಇತಿ ಸಹ್ಯಾದ್ರಿಕೆಳದೀ ಷಡ್ದೇಶಕುಂಟಿಕಾಪುರಸ್ಯ ಕಾಶೀಕಾಂಡ ಚನ್ನವೀರಮಾಹೇಶ್ವರೇಣ ಕೃತಾ ಪುರುಷಸೂಕ್ತಸ್ಯ ಟೀಕಾ ಸಮಾಪ್ತಾ" ಎಂದಿದೆ.

ಈ ಪುರುಷಸೂಕ್ತದ ಟೀಕೆಯಲ್ಲಿ ಕೆಲವು ಧಾತುಗಳ ವಿಷಯವನ್ನು ಕೊಟ್ಟಿದೆ:—

(೧) ಪುಟ. ೪. ಅಜಾಯತ=ಪುಟ್ಟಿದನು. "ಜನಿ—ಪ್ರಾದುರ್ಭಾವೇ (ಜನನದೊಳ್) ಎಂಬ ಧಾತುವಿನ ಮೇಲೆ ಲಙಾತ್ಮನೇ ಪದದ ಪ್ರಥಮ ಪುರುಷೈಕವಚನಂ." (ಧಾ. ಪಾ. ಪುಟ ೧೮೮)

(೨) ಪುಟ ೫. ಅತ್ಯರಿಚ್ಯತ=ಮಹೇಶ್ವರ ರುದ್ರ ವಿಷ್ಣು ಬ್ರಹ್ಮ ಸ್ವರೂಪದಿಂ ಪರಿಣಮಿಸಿದಂ. 'ಅತಿ ಎಂಬ ಉಪಸರ್ಗ ಪೂರ್ವಕವಾದ ರಿಚರೇಚನೇ ಎಂಬ ಧಾತುವಿನ ಮೇಲೆ ಲಙಾತ್ಮನೇ ಪದದ ಪ್ರಥಮ ಪುರುಷೈಕವಚನಂ; (ಧಾ. ಪಾ. ಪುಟ ೨೩೩)

(೩) ಪುಟ ೫. ಆಸೀತ್ =ಆಯಿತು. ಅಸಭುವಿ (ವಿದ್ಯಮಾನದೊಳ್) ಎಂಬ ಧಾತುವಿನ ಮೇಲೆ ಲುಙ್ಪರಸ್ಮೈ ಪದದ ಪ್ರಥಮಪುರುಷೈಕವಚನಂ." (ಧಾ. ಪಾ. ಪುಟ ೧೬೭)

(೪) ಪುಟ ೬. ಪ್ರೋಕ್ಷನ್—ಪ್ರ ಎಂಬ ಉಪಸರ್ಗವೇ ಪೂರ್ವದಲ್ಲುಳ್ಳ ಉಕ್ಷಸೇಚನೇ ಎಂಬ ಧಾತುವಿನ ಮೇಲೆ ಲಙ್ಪರಸ್ಮೈ ಪದದ ಪ್ರಥಮಪುರುಷದ ಬಹುವಚನಂ (ಧಾ. ಪಾ. ಪುಟ ೫೮)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(೫) ಪುಟ. ೭. ಅಯುಜಂತ. ಯಜ—ದೇವಪೂಜಾ ಸಂಗತಿ ಕರಣ (ಣಾ) ದಾನೇಷು—ಈ ಅರ್ಥಂಗಳಲ್ಲಿ ವರ್ತಿಪಧಾತುವಿನ ಲಙಾತ್ಮನೇ ಪದದ ಪ್ರಥಮಪುರುಷ ಬಹುವಚನಂ. (ಧಾ. ಪಾ. ಪುಟ ೧೫೯)

(೬) ಪುಟ ೮. ಜಜ್ಞಿರೇ= ಹುಟ್ಟಿದವು. ಜನಿಪ್ರಾದುರ್ಭಾವೇ (ಜನನದೊಳ್) ಎಂಬ ಧಾತುವಿನ ಮೇಲೆ ಲಿಡಾತ್ಮನೇಪದದ ಪ್ರಥಮ ಪುರುಷ ಬಹುವಚನಂ. (ಧಾ. ಪಾ. ಪುಟ ೧೯೯)

(೭) ಪುಟ ೯. ವ್ಯದಧುಃ = ಮಾಡಿದರು. ಡುಧಾಞಧಾರಣ ಪೋಷಣಯೋಃ (ತಳೆತದೊಳ್ ಪೊರೆತದೊಳಂ) ಎಂಬ ಧಾತುವಿನಮೇಲೆ ಕರ್ತೃವಿನ ಲಙ್ಪರಸ್ಮೈ ಪದದ ಪ್ರಥಮಪುರುಷ ಬಹುವಚನಂ. (ಧಾ. ಪಾ. ಪುಟ. ೧೭೯)

(೮) ಪುಟ ೧೧. ಸಮವರ್ತತ = ಆಯಿತು. ಸಂ ಎಂಬ ಉಪಸರ್ಗವೇ ಪೂರ್ವದಲ್ಲುಳ್ಳ ವೃತುವರ್ತನೇ (ವರ್ತನೆಯೊಳ್ ವ್ಯವಹಾರದೊಳ್) ಎಂಬ ಧಾತುವಿನ ಮೇಲೆ ಕರ್ತೃವಿನ ಲಙಾತ್ಮನೇ ಪದದ ಪ್ರಥಮ ಪುರುಷೈಕವಚನಂ. (ಧಾ. ಪಾ. ಪುಟ ೧೩೩)

(೯) ಪುಟ ೧೩. ವೇದ=ತಿಳಿದೆಂ. ವಿದಜ್ಞಾನೇ (ತಿಳುವಿನೊಳ್) ಎಂಬ ಧಾತುವಿನಲಿಟ್ಪರಸ್ಮೈಪದದ ಉತ್ತಮ ಪುರುಷದೈಕವಚನಂ. (ಧಾ. ಪಾ. ಪುಟ ೧೬೭)

(೧೦) ಪುಟ ೧೩. ಉದಾಜಹಾರ = ಕರ್ತಾರನೆಂದು ನಿರೂಪಿಸಿದಂ. ಉತ್. ಆಙ್ ಎಂಬ ಉಪಸರ್ಗಗಳೇ ಪೂರ್ವದಲ್ಲುಳ್ಳ ಹೃಙ್ ಹರಣೇ ಎಂಬ ಧಾತುವಿನ ಮೇಲೆ ಲಿಟ್ಪರಸ್ಮೈಪದದ ಪ್ರಥಮ ಪುರುಷೈಕವಚನಂ. (ಧಾ. ಪಾ. ಪುಟ ೧೫೬)

(೧೧) ಪುಟ ೧೪. ಸಚಂತೇ = ಪಡೆದಪರು. ಷಚ. ಗತೌ (ನಡೆಯೊಳ್) ಎಂಬ ಧಾತುವಿನ ಮೇಲೆ ಕರ್ತೃವಿನ ಲಡಾತ್ಮನೇ ಪದದ ಪ್ರಥಮಪುರುಷದ ಬಹುವಚನಂ. (ಧಾ. ಪಾ. ಪುಟ ೧೩.)

(೧೨) ಪುಟ ೧೫. ಏತಿ=ಎಯ್ದಿದಪಂ. ಇಣ್—ಗತೌ (ನಡೆಯೊಳ್) ಎಂಬ ಧಾತುವಿನ ಮೇಲೆ ಕರ್ತೃವಿನ ಲಟ್ಪರಸ್ಮೈಪದದ ಪ್ರಥಮ ಪುರುಷೈಕವಚನಂ. (ಧಾ. ಪಾ. ಪುಟ ೧೬೪)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(೧೩) ಪುಟ ೧೬. ಪರಿಜಾನಂತಿ=ತಿಳಿದವರು. ಪರಿ ಎಂಬ ಉಪಸರ್ಗವೇ ಮೊದಲಲ್ಲುಳ್ಳ ಜ್ಞಾ—ಅವಬೋಧನೇ (ಅರವಿನೋೞ್) ಎಂಬ ಧಾತುವಿನ ಮೇಲೆ ಕರ್ತೃವಿನ ಲಟ್ಪರಸ್ಮೈಪದದ ಪ್ರಥಮಪುರುಷೈಕವಚನಂ. (ಧಾ. ಪಾ. ಪುಟ ೨೪೮)

(೧೪) ಪುಟ ೧೬. ಇಚ್ಛಂತಿ=ಬಯಸುವರು. ಇಷು—ಇಚ್ಛಾಯಾಂ—ಲಟ್ಪರಸ್ಮೈಪದ ಪ್ರಥಮಪುರುಷ ಬಹುವಚನಂ. (ಧಾ. ಪಾ. ಪುಟ ೨೨೫)

(೧೫) ಪುಟ ೧೭. ಬ್ರಾಹ್ಮಯೇ=ನಿರಂಜನಜಂಗಮಕ್ಕೋಸ್ಕರ. ನಮಃ=ನಮಸ್ಕಾರವು. ಬೃಹಬೃಹಿವೃದ್ಧೌ (ಹಿರಿಯತನದಲ್ಲಿ) ಋತ್ವಕ್ಕೆರತ್ವಂ ಸಂಪ್ರಸಾರಣಂ. ಬೃಹೊಮನ್ನಲೋಪಶ್ಚ ಮಣಿಶ್ಚ—ಬೃಹ ಎಂಬ ಧಾತುವಿನತ್ತಣಂ ಮನ್ನಲೋಪ ಮಣಿ ಎಂಬ ಪ್ರತ್ಯಯಂಗಳಕ್ಕುಂ. ಬ್ರಹ್ಮಬ್ರಹ್ಮನ್ ವೃದ್ಧಿರಾದೈಚ್ ಎಂಬ ಸೂತ್ರದಿಂ ಪೂರ್ವವೃದ್ಧಿಯಾಗಿ ಬ್ರಾಹ್ಮಯೇ ಎಂದಾಯ್ತೆಂದು ಕೌಶಿಕೃತ್ಸನ (ಕಾಶಕೃತ್ಸ್ನನ) ದಶಪಾದಿಯುಣಾದಿಯಲ್ಲಿ ಪೇೞಲ್ಪಡುಗುಂ. (ಧಾ. ಪಾ. ಪುಟ ೬೭)

(೧೬) ಪುಟ ೧೯. ಮನಿಷಾಣ=ತಿಳಿಯಿಸು. ಮನು ಅವಬೋಧನೇ (ಅರಿವಿನೋೞ್) ಎಂಬ ಧಾತುವಿನ ಮೇಲೆ ಕರ್ತೃವಿನ ಪರಸ್ಮೈಪದದ ಲೋಟಿನ ಪ್ರಥಮಪುರುಷೈಕವಚನಂ. (ಧಾ. ಪಾ. ಪುಟ ೨೪೧)

ಈ ಧಾತುಗಳೆಲ್ಲವೂ ಪುರುಷಸೂಕ್ತ ಟೀಕೆಯಲ್ಲಿ ಕೊಟ್ಟಿರುವಂತೆಯೇ ಅದೇ ಅರ್ಥದೊಡನೆ ಈ ಧಾತುಪಾಠದಲ್ಲಿ ಸಿಕ್ಕುತ್ತವೆ. ಆ ಧಾತುಗಳಿರುವ ಪುಟಸಂಖ್ಯೆಯನ್ನು ಅಲ್ಲಿಯೇ ಸೂಚಿಸಿದೆ. ಇದರಿಂದ ಪುರುಷಸೂಕ್ತ ಟೀಕೆಯನ್ನು ಬರೆದ "ಶ್ರೀ ಚನ್ನವೀರಮಾಹೇಶ್ವರನೂ" ಈ ಧಾತುಪಾಠದ ಕನ್ನಡಟೀಕೆಯನ್ನು ಬರೆದ ಕಾಶೀಕಾಂಡ ಚನ್ನವೀರಕವಿಯೂ ಒಬ್ಬನೇ ಎಂಬುದು ಸ್ಪಷ್ಟವಾಗುತ್ತದೆ.

ಈ ಧಾತುಪಾಠದ ಕನ್ನಡ ಟೀಕೆಯನ್ನು ಬರೆದ ಚನ್ನವೀರಕವಿಯು ಅಧ್ಯಾಯಾಂತ್ಯದಲ್ಲಿ ಕೊಟ್ಟಿರುವ ತನ್ನ ವಿಷಯಕ್ಕೂ ಪುರುಷಸೂಕ್ತದ ಟೀಕೆಯ ೨೩ ನೇ ಋಕ್ಕಿನ ಕನ್ನಡಟೀಕೆಗೂ ಹೋಲಿಕೆಯಿದೆ: ಧಾತುಪಾಠದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತಿತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ
ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ
ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ
ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯನಂಬ್ಯಣಗುರುಕರಜಾ
ತಸ್ಯ ಸಹ್ಯಾದ್ರಿಕಟಕಷಡ್ಡೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ
ಚನ್ನವೀರಕವಿಕೃತಾ ಕಾಶಕೃತ್ಸ್ನಧಾತುಕರ್ಣಾಟ ಟೀಕಾ
ಯಾಂ ಪರಸ್ಮೈಭಾಷಾ, ಆತ್ಮನೇಪದಿನಃ, ಉಭಯಪ
ದಿನಶ್ಚ ಲೇಖಕ ಪಾಠಕಶ್ರೋತೃಣಾಂ ಸಂಸ್ಕೃ
ತಾರ್ಥ ಪ್ರಕಾಶಿಕಾ ಭೂಯಾತ್

ಹೀಗಿದೆ.

ಪುರುಷಸೂಕ್ತದ ಟೀಕೆಯಲ್ಲಿ.

ಋಚಂಬ್ರಾಹ್ಮಂ ಜನಯಂತಃ
ದೇವಾ ಅಗ್ರೇತದಬ್ರುವರ್
ಯಸ್ತ್ವೈವಂ ಬ್ರಾಹ್ಮಣೋ ವಿದ್ವಾನ್
ತಸ್ಯದೇವಾ ಅಸನ್ವಶೇ ॥ ೨೩ ॥

ಟೀ॥ ಜನಯಂತಃ—ಭೂಜಲಾಗ್ನಿ ಮರುದ್ವ್ಯೋಮಾತ್ಮರಂ ಪುಟ್ಟಿಸುತ್ತಿರ್ದ, ದೇವಾಃ—ಬ್ರಹ್ಮ ವಿಷ್ಣು ರುದ್ರ ಮಹೇಶ್ವರ ಸದಾಶಿವರು, ಅಗ್ರೇ=ಪ್ರಥಮದಲ್ಲಿ, ತತ್—ಆ ನಿರಂಜನ ಜಂಗಮವನ್ನು, ರುಚಂಸತ್—ಲೀಲೆಯಾದೊಡುಮಾಪತಿಯನ್ನಾಗಿ, ಬ್ರಾಹ್ಮಂ—ಲೀಲೆ ತಪ್ಪಿದೊಡೆ ಸ್ವಯಂಭುವನ್ನಾಗಿ, ಅಬ್ರುವರ್=ಪೇಳ್ದರು, ಯಃ—ಯಾವ, ಬ್ರಾಹ್ಮಣಃ =ಪಡುವಣದಿಕ್ಕಿನ ಕಲಶದ ಸದ್ಯೋಜಾತ ಮುಖದ ಭೂತಿಯ ಹಕ್ಕಳೆ ಘಂಟೆಯ ಕಿವಿಯಂತೆ ನೆಲಕೆ ಬೀಳ್ದು ಹುಟ್ಟಿದ ಘಂಟಾಕರ್ಣಗೋತ್ರದ ಏಕೋ ರಾಮದೇವರ ಬಗೆಯ ವಿರಕ್ತನಾದೊಡಂ, ಬಡಗಣಕಲಶದ ವಾಮದೇವಮುಖದ ಭಸಿತದ ಹಕ್ಕಳೆಯಾನೆಕಿವಿಯಂತೆ ಬೀಳ್ದು ಪುಟ್ಟಿದ ಗಜಕರ್ಣನ ಗೋತ್ರದ ಶಿವಲೆಂಕಮಂಚಣ್ಣ ಪಂಡಿತಾರಾಧ್ಯನಬಗೆಯಾರಾಧ್ಯನಾದೊಡಂ, ತೆಂಕಣದಿಕ್ಕಿನ ಕಲಶದ ಅಘೋರಮುಖದ ಭಸ್ಮದ ಹಕ್ಕಳೆದಾರುವಿನಂತೆ ನೆಲಕೆಬೀಳ್ದು ಹುಟ್ಟಿದ ದಾರುಕಗೋತ್ರದ ಮರುಳಸಿದ್ಧನಬಗೆಯ ಅತಿಥಿಯಾದೊಡಂ, ಮೂಡಣದಿಕ್ಕಿನ ಕಲಶದ ತತ್ಪುರುಷ ಮುಖದ ಕ್ಷಾರದ ಹಕ್ಕಳೆನೆಲಕೆ ಬೀಳ್ದು ಹುಟ್ಟಿದ ರೇಣುಕಗೋತ್ರದ ರೇವಣಸಿದ್ಧನ ಬಗೆಯ ಘನಲಿಂಗಿಯಾದೊಡಂ. ಷಟ್ಸ್ಥಲಜ್ಞಾನಿಯಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏವಂ—ಈ ಪೂರ್ವೋಕ್ತ ಪ್ರಕಾರವಾಗಿ, ವಿದ್ವಾನ್—ತಿಳಿದವನೋ, ತಸ್ಯ—ಅವನ, ವಶೇ—ಅಧೀನದಲ್ಲಿ, ದೇವಾಃ=ಬ್ರಹ್ಮಾದಿಗಳು, ಆಸನ್—ಇದ್ದರು ||೨೩||—ಎಂದಿದೆ.

ಈ ಹೋಲಿಕೆಯಿಂದಲೂ ಇವೆರಡು ಟೀಕೆಗಳನ್ನು ರಚಿಸಿದವನೂ ಒಬ್ಬನೇ ಎಂಬುದು ಸ್ಪಷ್ಟಪಡುತ್ತದೆ. ಕವಿಚರಿತ್ರೆಕಾರರು ಹೇಳಿರುವುದಕ್ಕೂ ಇವೆರಡು ಟೀಕೆಗಳಲ್ಲಿ ಕಂಡುಬರುವುದಕ್ಕೂ ಏನೂ ವ್ಯತ್ಯಾಸವೇ ಇಲ್ಲ.

ಈ ಧಾತುಪಾಠದ ಕರ್ಣಾಟಕ ಟೀಕೆಯನ್ನು "ಬಾಲವ್ಯುತ್ಪತ್ತಿಸಿದ್ಧಯೇ" "ವ್ಯಾಕರಣವನರಿಯದ ವ್ಯಾಕರಣಜ್ಞಾನದ ಶಿಕ್ಷೆಗೆ" ಬರೆದುದಾಗಿ ಈತನು ಗ್ರಂಥಾದಿಯಲ್ಲಿ ಹೇಳಿದ್ದಾನೆ.—

ಕವಿಚರಿತೆಕಾರರು "ಸಾರಸ್ವತವ್ಯಾಕರಣ" "ನಮಕಚಮಕ"—ಇವಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆಂದು ಹೇಳಿದ್ದಾರೆ. ಆದರೆ ಅವುಗಳ ಪ್ರತಿಗಳಿನ್ನೂ ದೊರೆಕಿಲ್ಲ. ಆದರೆ ಕವಿಚರಿತೆಕಾರರು "ಕಾಶಕೃತ್ಸ್ನಶಬ್ಧಕಲಾಪಧಾತುಪಾಠ"ದ ವಿಷಯವನ್ನು ಸೂಚಿಸಿಯೇ ಇಲ್ಲ.

ಈತನು "ತುಮುಕೂರ ಮಹಾಮಠ ಕಂಥಾಚಾರ್ಯ" ಎಂದು ಹೇಳಿರುವುದನ್ನು ವಿಚಾರಮಾಡಿದ್ದರಲ್ಲಿ ಸಿದ್ಧಗಂಗಾಮಠಾಧ್ಯಕ್ಷರಾದ ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರು ತಮ್ಮ ೧೯೫೧ ನೇ ಇಸವಿಯ ೨ ನೇ ಜನವರಿಯ ತಾರೀಖಿನ ಕಾಗದದಲ್ಲಿ "ತುಮುಕೂರಿನಲ್ಲಿ ಗಂಡೀದೇವರ ಮಠ, ಕೊಪ್ಪಲು ಮುತ್ತಿನಕಂತೇ ರುದ್ರಮಠ ಎಂಬುವು ಇದ್ದವೆಂದೂ ತುಮುಕೂರಿಗೆ ಐದುಮೈಲಿ ದೂರದಲ್ಲಿ ಗೂಳೂರಿನ ಹತ್ತಿರ ಕೊಂಡಾಪುರವೆಂಬ ಗ್ರಾಮವಿದೆಯೆಂದೂ ತಿಳಿಸಿದ್ದಾರೆ.

ಇನ್ನು "ಶಿವ ಲೆಂಕಮಂಚಣ್ಣ ಪಂಡಿತಾರಾಧ್ಯಪ್ರವರಸ್ಯ"—ಇವನ ವಿಷಯ. (ಕವಿ ಚರಿತೆಯ ಮೊದಲನೆಯ ಸಂಪುಟದ ೨೧೨ ನೇ ಪುಟದಲ್ಲಿ) "ಶಿವಲೆಂಕ ಮಂಚಣ್ಣ : ಸು. ೧೧೬೦.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಇವನ ಅಜ್ಜನು ಸೋಮಶಂಭು ದೇಶಿಕ; ತಂದೆ "ಕಾಮಿಕಾದ್ಯಖಿಳ ಶಿವಕಥಿತ ತಂತ್ರಾವಳಿಗೆ ವೃತ್ತಿದೀಪಿಕೆಗಳಂಬಿತ್ತರಿಸಿ| ಸೋಮಧರಸಮಯಮಂ ಧರಣಿಯೊಳ್ ನಿಱುಸಿದ" ಸಕಲಾಗಮಾಚಾರ್ಯ. ಈತನು ಕಾಶೀಕ್ಷೇತ್ರದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿವನೇ ಸರ್ವದೇವತೆಗಳಿಗೂ ಪೂಜ್ಯನೆಂದು ಸ್ಥಾಪಿಸಿ ಬಿಂದುಮಾಧವನನ್ನು ವಿಶ್ವೇಶ್ವರನ ಸ್ಥಾನವನ್ನೈದಿಸಿ ಶತ್ರುಪಕ್ಷವನ್ನು ಮುರಿದಂತೆಯೂ[1] ತನ್ನ ಹತ್ತು ಬೆರಳುಗಳನ್ನು ಕಡಿದು ಕಾಶಿಯ ವಿಶ್ವೇಶ್ವರನಿಗರ್ಪಿಸಿ ಮರಳಿ ಪಡೆದಂತೆಯೂ[2] ಕಲ್ಯಾಣಕ್ಕೆ ಬಂದು ಬಸವನನ್ನು ನೋಡಿದಂತೆಯೂ[3] ಗ್ರಂಥಗಳಲ್ಲಿ ಹೇಳಿದೆ. ಇವನ ವಚನಗಳ ಸಂಖ್ಯೆ ೧೩೧. ಇವುಗಳಲ್ಲಿ "ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ" ಎಂಬ ಅಂಕಿತವಿದೆ. ಭೀಮಕವಿಯು ಬಸವಪುರಾಣದಲ್ಲಿ ಸಿರಿಪಂಡಿತ, ಶಿವಲೆಂಕಮಂಚಣಪಂಡಿತ, ಮಲ್ಲಿಕಾರ್ಜುನಪಂಡಿತ ಇವರ ಸ್ತುತಿಯಿದೆ (ಬಸವಪುರಾಣ ೧-೧೦.)

ಪದ್ಮಣಾಂಕನು ಪದ್ಮರಾಜಪುರಾಣದಲ್ಲಿ ಶಿವಲೆಂಕಮಂಚಣ್ಣನನ್ನು ಹೊಗಳಿದ್ದಾನೆ.

"ಖಂಡಿತ ಪ್ರತಿಪಕ್ಷ ಶಿವಲೆಂಕಮಂಚಣ್ಣಪಂಡಿತರ" ಸಂಧಿ ೧—ಪದ್ಯ ೧೩*

ಆದರೆ ಪಾಲ್ಕುರಿಕಿ ಸೋಮನಾಥಕವಿಯು ತನ್ನ ತೆಲುಗಿನ "ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತ್ರ" ದಲ್ಲಿ "ಪಂಡಿತತ್ರಯಮನಿ ಚೆಪ್ಪಬಡೇ ಶ್ರೀಪತಿ ಪಂಡಿತುಡು, ಪಂಡಿತಾರಾಧ್ಯುಡು, ಶಿವಲೆಂಕ ಮಂಚಣ್ಣ—ಅನೇವಾರು ಬಸವನಿಕಿ ಸಮಕಾಲಿಕುಲನಿ ಚರಿತ್ರಕಾರುಲು ಅಂದರುನ್ನು ಅಂಟುನ್ನಾರು. ವಾರಿಲೋ ಶ್ರೀಪತಿ ಪಂಡಿತುಡು ಪಂಡಿತಾರಾಧ್ಯುನಿಕಂಟೆ ಚಾಲಪೂರ್ವುಡನಿ ಯಿಂತಕಮುಂದು ಸೂಚಿಂಚಿನಾನು. ಶಿವಲೆಂಕ ಮಂಚಣ್ಣನು ಗುರಿಂಚಿ ಸೋಮನಾಥುಡು ಬಸವಪುರಾಣಮು ಲೋಸ್ಮರಿಂಚನೇಲೇದು: ವಿಷಪುವಿಂದುಲೋ ಪಾಲ್ಗೊನ್ನವಾರಿಲೋ ಲೆಂಕಮಂಚಯ್ಯ ಪೇರುನ್ನದಿಗಾನಿ, ಅತಡು ಶಿವಲೆಂಕಮಂಚಣ ಪಂಡಿತುಡಯಿ ಉಂಡಡು..." ಹೀಗೆ ಉಕ್ತವಾಗಿದೆ. ಆದರೂ ಶಿವಲೆಂಕ ಮಂಚಣ್ಣನ ಹೆಸರು ಗಣಸಹಸ್ರನಾಮದಲ್ಲಿ ಸೇರಿದೆ. ಇದು ಹೇಗಾ

---

[1] ಆನಯಿತ್ವಾಹಠಾದ್ವಿಷ್ಣುಂ ಕಾಶ್ಯಾಂ ವಿಶ್ವೇಶಸನ್ನಿಧಿಂ। ಬಭಂಜ ವಿದ್ವಿಷೋ ಯಸ್ತಂ ಮನ್ಯೇಮಂಚಣ ಪಂಡಿತಂ॥ ಶಂಕರಾರಾಧ್ಯನ ಬಸವೇಶವಿಜಯ.

[2] ಬಸವಪುರಾಣ—ಸಂಧಿ ೫೩.

[3] ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

* ಶಿವಲೆಂಕಮಂಚಣ್ಣನಿಗೆ ಸಂಬಂಧಪಟ್ಟ ಕೆಲವು ವಿಶೇಷ ವಿಷಯಗಳನ್ನು ನನಗೆ ತಿಳಿಸಿಕೊಟ್ಟ ಶ್ರೀಮಾನ್ ಡಿ. ಎಲ್ ನರಸಿಂಹಾಚಾರ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದರೂ ಇರಲಿ: ಶಿವಲೆಂಕಮಂಚಣ್ಣನ ವಂಶವೃಕ್ಷವು ಪಂಡಿತಾರಾಧ್ಯ ಚರಿತ್ರದ ಉಪೋದ್ಘಾತದ ೭೧ ನೇ ಪುಟದಲ್ಲಿದೆ. ಅದರಲ್ಲಿ ಕಾಶೀಕಾಂಡ ಚನ್ನವೀರಕವಿಯ ಹೆಸರಿಲ್ಲ. ಶಿಷ್ಯಪರಂಪರೆಗೆ ಸೇರಿದ್ದರಿಂದಲೇ "ಶಿವಲೆಂಕಮಂಚಣ ಪಂಡಿತಾರಾಧ್ಯಪ್ರವರಸ್ಯ" ಎಂದು ಹೇಳಿಕೊಂಡಿರಬಹುದು—ಕವಿಚರಿತೆಕಾರರು ಹೇಳಿರುವಂತೆ ಈತನು ಶಿವಲೆಂಕ ಮಂಚಣ್ಣ ವಂಶೋದ್ಭವನಲ್ಲದಿರಬಹುದು.

ಪ್ರಧಾನವ್ಯಾಕರಣಗಳಲ್ಲಿ ಒಂದಾದ ಕಾಶಕೃತ್ಸ್ನರ ಈ ಕಾಶಕೃತ್ಸ್ನ ಶಬ್ದ ಕಲಾಪಧಾತುಪಾಠದಲ್ಲಿ ಪಾಣಿನಿಯ ಧಾತುಪಾಠದಲ್ಲಿಲ್ಲದ ಅಪೂರ್ವವಾದ ಧಾತುಗಳೂ, ಎರಡು ಧಾತುಪಾಠಗಳಿಗೂ ಸಾಮಾನ್ಯವಾದ ಧಾತುಗಳಲ್ಲಿ ಅರ್ಥವ್ಯತ್ಯಾಸವೂ ರೂಪವ್ಯತ್ಯಾಸವೂ, ಕಂಡು ಬರುತ್ತವೆ. ಈ ಧಾತುಪಾಠದಲ್ಲಿರುವ ಸುಮಾರು ೩೦೦ ಧಾತುಗಳು ಇನ್ನಾವ ಧಾತು ಪಾಠದಲ್ಲಿಯೂ ಇಲ್ಲ.

ಆತ್ಮನೇಪದಿ, ಪರಸ್ಮೈಪದಿ, ಉಭಯಪದಿ ಎಂಬ ವಿಭಾಗವು ಪಾಣಿನಿಯ ಧಾತು ಪಾಠದಲ್ಲಿ ನಿಯತವಾಗಿಲ್ಲ. ಕ್ರಮವಿಲ್ಲದೆ ಆಯಾಯ ಪದವುಳ್ಳವುಗಳನ್ನು ಮಧ್ಯೆಮಧ್ಯೆ ಕೆಲವು ಸಮೂಹಗಳಿಂದ ನಿರ್ದೇಶಿಸಿರುವರು. ಕಾಶಕೃತ್ಸ್ನರ ಧಾತುಪಾಠದಲ್ಲಿ ಗಣವು ನಿಯಮಿತವಾದಂತೆ ಆಯಾ ಗಣದಲ್ಲಿ ಪದಗಳನ್ನೂ ನಿಯತಕ್ರಮದಿಂದಲೇ ಹೇಳಲಾಗಿದೆ. ಆಮೇಲೆ ಆಯಾಗಣದ ಣಿಜಂತಸ್ವರೂಪಗಳನ್ನೂ ಹೇಳಿದೆ. ಒಂದೇ ಕ್ರಮವನ್ನು ಹತ್ತು ಗಣಗಳ ವಿಭಾಗದಲ್ಲಿಯೂ ಅನುಸರಿಸಲಾಗಿದೆ.

ಈ ಧಾತು ಪಾಠ, ಅದರ ಕರ್ಣಾಟಕ ಟೀಕಾ, ಕವಿಯಕಾಲ, ಮುಂತಾದ ವಿಶೇಷ ವಿಷಯಗಳ ಸಂಪೂರ್ಣ ವಿಮರ್ಶೆಯನ್ನು ಇನ್ನೊಂದು ಸಂಪುಟದಲ್ಲಿ ಕೊಡಲಾಗಿದೆ. ಅದೂ ಶೀಘ್ರದಲ್ಲಿಯೇ ಪ್ರಕಟವಾಗಲಿದೆ.

ಈ ಧಾತುಪಾಠವನ್ನು ತಮ್ಮ "*Sources of Indo-Aryan Lexicography*" ಗ್ರಂಥಮಾಲೆಯಲ್ಲಿ ಸೇರಿಸಿ ಪ್ರಕಟಿಸಲು ತಾವಾಗಿಯೇ ಮುಂದೆ ಬಂದ ಶ್ರೀಮಾನ್ ಡಾ|| ಎಸ್. ಎಮ್. ಕತ್ರೆ, ಎಂ.ಎ., ಪಿಹೆಚ್.ಡಿ. ಯವರ ಅಭಿಮಾನವೂ ಉಪಕಾರವೂ ಚಿರಸ್ಮರಣೀಯವಾದವು. ಅವರಿಗೆ ನಾನು ಅತ್ಯಂತ ಕೃತಜ್ಞನಾಗಿರಬೇಕಾದದ್ದು ನನ್ನ ಕರ್ತವ್ಯ.

ಎ. ಎನ್. ನರಸಿಂಹಯ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯ ಸೂಚೀ

		ಪುಟ
	Foreword	v
೧.	ಪೀಠಿಕೆ	vii—xviii
೨.	ಭ್ವಾದಿಃ—೧. ಪರಸ್ಮೈಪದಭಾಷಾ	೧—೮೦
೩.	ಭ್ವಾದಿಃ—೨. ಆತ್ಮನೇಪದಿನಃ	೮೧—೧೩೪
೪.	ಣಿಜನ್ತಾಶ್ಚ	೧೩೫—೧೬೧
೫.	ಅದಾದಿಃ—ಲುಗ್ವಿಕರಣಂ	೧೬೨—೧೮೦
೬.	ದಿವಾದಿಃ	೧೮೧—೨೦೫
೭.	ಸ್ವಾದಿಃ	೨೦೬—೨೧೧
೮.	ತುದಾದಿಃ	೨೧೨—೨೩೨
೯.	ರುಧಾದಿಃ	೨೩೩—೨೩೭
೧೦.	ತನಾದಿಃ	೨೩೮—೨೪೧
೧೧.	ಕ್ರ್ಯಾದಿಃ	೨೪೨—೨೫೧
೧೨.	ಚುರಾದಿಃ	೨೫೨—೨೯೯
೧೩.	ಅಥ ಣಿಜನ್ತಾಃ	೩೦೦—೩೦೨
೧೪.	ಧಾತುಪಾಠಃ—ಪಟ್ಟಿ	೩೦೩—೩೩೯
೧೫.	ಸೂತ್ರಗಳು	೩೪೦—೩೪೪
೧೬.	ಸೂಚಿತಪುರಾಣಾಂಶಗಳು	೩೪೫—೩೪೯
೧೭.	ಪದಕೋಶ	೩೫೦—೪೪೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

॥ श्रीगणेशायनमः ॥

ಶ್ರೀಯಾಗಂಟಿಶರಭಾಯನಮಃ

ಕಾಶಕೃತ್ಸ್ನಶಬ್ದಕಲಾಪಧಾತುಪಾಠಃ

ಭ್ವಾದಿಃ

೧. ಪರಸ್ಮೈಪದಭಾಷಾ

ಪ್ರಕೃತಿಪ್ರತ್ಯಯಾಂಗಾಯ ಪರಸ್ಮಾಯಾತ್ಮನೇಪದೇ |
ನಮೋ ಯಾಗಂಟಿಶರಭಲಿಂಗೇಶಾಯ ಚರಂತಿನೇ ||

ಧಾತುಪಾಠಃ ಕೃತೋಯೇನ ಬಾಲವ್ಯುತ್ಪತ್ತಿಸಿದ್ಧಯೇ |
ನಮಸ್ತಸ್ಮೈಕಾಶಕೃತ್ಸ್ನಗುರವೇ ಶಿವರೂಪಿಣೇ ||

ಟೀಕು—ಬಾಲ = ವ್ಯಾಕರಣವನರಿಯದರ; ವ್ಯುತ್ಪತ್ತಿ = ವ್ಯಾಕರಣಜ್ಞಾನದ; ಸಿದ್ಧಯೇ = ಶಿಕ್ಷೆಗೆ; ಯೇನ = ಆವನಿಂದೆ; ಧಾತು = ಕ್ರಿಯಾಭಾವಂಗಳ; ಪಾಠಃ = ಓದು; ಕೃತಃ = ಮಾಡಲ್ಪಟ್ಟುದೋ; ತಸ್ಮೈ = ಆ; ಶಿವರೂಪಿಣೆ = ಶಿವಯೋಗಿಯಾದ; ಕಾಶಕೃತ್ಸ್ನ = ಕಾಶಕೃತ್ಸ್ನನೆಂಬ; ಗುರವೆ = ಆರಾಧ್ಯಂಗೆ; ನಮಃ = ಶರಣಾರ್ಥಿ.

ನಿಪಾತಾಶ್ಚೋಪಸರ್ಗಾಶ್ಚ ಧಾತವಶ್ಚ ತ್ರಯೋಽಪ್ಯಮೀ |
ಅನೇಕಾರ್ಥಾಃ ಸ್ಮೃತಾಃ ಸದ್ಭಿಃ ಪಾಠಸ್ತೇಷಾಂ ನಿದರ್ಶನಂ ||

ಟೀಕು—ನಿಪಾತಾಃ ಚ = ಅವ್ಯಯಂಗಳುಂ; ಉಪಸರ್ಗಾಃ ಚ = ಪ್ರಾದಿಗಳುಂ; ಧಾತವಃ ಚ = ಕ್ರಿಯಾ ಭಾವಂಗಳುಂ; ಅಮೀ = ಈ; ತ್ರಯಃ ಅಪಿ = ಮೂರು; ಅನೇಕಾರ್ಥಾಃ = ಪಲವು ಪುರುಳುಳ್ಳುವಾಗಿ; ಸದ್ಭಿಃ = ಇಂದ್ರಚಂದ್ರಾಪಿಶಾಲಿ ಗಾರ್ಗ್ಯಗಾಲವ ಪೌಷ್ಕರಸಾದಿಗಳಿಂ; ಸ್ಮೃತಾಃ = ಪೇಳಲ್ಪಟ್ಟುವು; ತೇಷಾಂ = ಅವರ; ಪಾಠಃ = ಓದು; ನಿದರ್ಶನಂ = ಕಾಣಲ್ಪಟ್ಟುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸತ್ತಾಯಾಂ ಮಂಗಳೇ ವೃದ್ಧೌ ನಿವಾಸೇ ವ್ಯಾಪ್ತಿಸಂಪದೋಃ |
ಅಭಿಪ್ರಾಯೇ ಚ ಶಕ್ತೌ ಚ ಪ್ರಾದುರ್ಭಾವೇ ಗತೌ ಚ ಭೂಃ ||

ಟೀಕು—ಸತ್ತಾಯಾಂ = ಉಂಟೆಂಬಲ್ಲಿ ; ಮಂಗಳೇ = ಲೇಸಿನಲಿ ; ವೃದ್ಧೌ = ಪೆರ್ಚುಗೆಯಲಿ; ನಿವಾಸೆ = ಮನೆಯಲಿ; ವ್ಯಾಪ್ತಿಸಂಪದೋಃ = ವ್ಯಾಪಾರ ಸಂಪತ್ತುಗಳಲಿ; ಅಭಿಪ್ರಾಯೇ ಚ = ಗುಟ್ಟಿನಲ್ಲಿಯುಂ; ಶಕ್ತೌ ಚ = ಶಕ್ತಿಯಲ್ಲಿಯುಂ ; ಪ್ರಾದುರ್ಭಾವೆ = ಒಡೆದು ಮೂಡುವಲ್ಲಿಯುಂ ; ಗತೌ ಚ = ನಡೆಯಲ್ಲಿಯುಂ ; ಭೂಃ = ಭೂ ಯೆಂಬುದು ವರ್ತಿಪುದು.

ಭೂ ಸತ್ತಾಯಾಂ = ಭೂ ಎಂಬುದು ಉಂಟೆಂಬಲ್ಲಿ ವರ್ತಿಪುದು: ಸಾ ಭವತಿ = ಅವಳಾದಪಳು ; ಸ ಭವತಿ = ಅವನಾದಪಂ ; ತದ್ಭವತಿ = ಅದಾದಪುದು. ಸತ್ತಾಯಾಂ ಯಥಾ = ವಿದ್ಯಮಾನದೊಳೆಂತೆಂದೊಡೆ : ವಿರಳಾಭವಂತಿಸಂತಃ = ಸಂತೀತ್ಯರ್ಥಃ = ಬೇರ್ ಪಡಿಸಲ್ಪಟ್ಟರು, ಆದ ಪರು, ಬಲ್ಲಿದರ್, ಇರ್ದಪನೆಂಬುದು ಪುರುಳ್; ಮಂಗಳೇ ಯಥಾ = ಲೇಸಿ ನೊಳೆಂತೆದೊಡೆ: ಪುತ್ರಸ್ಯಭೂತಿಃ ಕಾರ್ಯಾ = ಮಗನ ಮಂಗಳಂ ಮಾಡ ಲ್ತಕ್ಕುದು ; ಮಂಗಳಮಿತ್ಯರ್ಥಃ = ಲೇಸೆಂಬುದು ಪುರುಳ್ ; ವೃದ್ಧೌ = ಪೆರ್ಚುಗೆಯಲ್ಲಿ : ಗೋತ್ರಸ್ಯ ಭೂತಿಃ = ಬಗೆಯ ಪೆರ್ಚುಗೆ ; ವೃದ್ಧಿ ರಿತ್ಯರ್ಥಃ = ಪೆರ್ಚುಗೆಯೆಂಬುದು ಪುರುಳ್ ; ನಿವಾಸೆ = ಮನೆಯಲ್ಲಿ : ಭವ ನಂ = ಮನೆ; ವ್ಯಾಪ್ತೌ = ವ್ಯಾಪಾರದೊಳ್: ವಿಶ್ವಂಭವತಿ = ಸರ್ವವುಂ ಆದಪುದು; ಪ್ರಾಪ್ನೋತೀತ್ಯರ್ಥಃ= ಪಡೆದಪನೆಂಬುದು ಪುರುಳ್; ಸಕರ್ಮ ಕತ್ವಂ ಚ= ದ್ವಿತೀಯೆಯಿಂ ಕೂಡುಹಣವುಂ; ಸಂಪದ್ಯರ್ಥೇ = ಸಂಪತ್ತಿನ ಪುರುಳಲ್ಲಿ : ಅದೀರ್ಘೋ ದೀರ್ಘೋಭವತಿ = ಇಳಿಯಿಲ್ಲದುದು, ಇಳಿ ಯಾದಪುದು ; ಸಂಪದ್ಯತ ಇತ್ಯರ್ಥಃ = ಆದಪುದೆಂಬುದು ಪುರುಳ್ ; ಅಭಿ ಪ್ರಾಯೇ= ಗುಟ್ಟಿನಲ್ಲಿ: ಇತ್ಯಯಂಭಾವಃ = ಎಂದಿದುಬಗೆ; ಅಭಿಪ್ರಾಯ ಇತ್ಯರ್ಥಃ = ಗುಟ್ಟೆಂಬುದು ಪುರುಳ್ ; ಶಕ್ತೌ = ಬಲ್ಮೆಯಲ್ಲಿ : ತಂತುರ್ ಭವತಿ = ನೂಲಾದುಪುದು ; ಶಕ್ನೋತಿ ಇತ್ಯರ್ಥಃ = ಬಲಿದಪುದೆಂಬುದು ಪುರುಳ್; ಪ್ರಾದುರ್ಭಾವೇ= ಒಡೆದು ಮೂಡುವಲ್ಲಿ: ಅಕ್ರೂರೋಭವತಿ= ಶಾಂತನಾದಪಂ; ಜಾಯತ ಇತ್ಯರ್ಥಃ = ಜನಿಸಿದಪನೆಂಬುದು ಪುರುಳ್; ಗತೌ = ನಡೆಯೊಳ್: ಭೂತಾ= ಪೋದಳ್; ಗತಾ ಇತ್ಯರ್ಥಃ = ಪೋದ ಳೆಂಬುದು ಪುರುಳ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭ್ವಾದಿಃ

೧. ಪರಸ್ಮೈಪದಭಾಷಾ

ಧಾತುಪಾಠಃ ಕೃತೋಯೇನ ಬಾಲವ್ಯುತ್ಪತ್ತಿಸಿದ್ಧಯೇ |
ನಮಸ್ತಸ್ಮೈಕಾಶಕೃತ್ಸ್ನಗುರವೇ ಶಿವರೂಪಿಣೆ ||

ಸತ್ತಾಯಾಂ ಮಂಗಳೇ ವೃದ್ಧೌ ನಿವಾಸೇ ವ್ಯಾಪ್ತಿಸಂಪದೋಃ |
ಅಭಿಪ್ರಾಯೇ ಚ ಶಬ್ದೇ ಚ ಪ್ರಾದುರ್ಭಾವೇ ಗತೌ ಚ ಭೂಃ ||

ಭೂ ಸತ್ತಾಯಾಂ ; **ಚಿತೀ** ಸಂಜ್ಞಾನೇ ; **ಅತ** ಸಾತತ್ಯಗಮನೇ ; **ಚ್ಯುತಿರ್** ಆಸೇಚನೇ ; **ಶ್ಚ್ಯುತಿರ್** ಕ್ಷರಣೇ ; **ಮಂಥ** ವಿಲೋಡನೇ ; **ಕುಥಿ, ಪುಥಿ, ಲುಥಿ** ಹಿಂಸಾ ಸಂಕ್ಲೇಶನಯೋಃ ; **ಷಿಧು** ಗತ್ಯಾಂ ; **ಷಿಧೂ** ಶಾಸ್ತ್ರೇ ಮಾಂಗಳ್ಯೇಚ ; **ಖಾದೃ** ಭಕ್ಷಣೇ ; **ಬದ** ಸ್ಥೈರ್ಯೇ ; **ಖದ** ಹಿಂಸಾಯಾಂಚ ; **ಗದ** ವ್ಯಕ್ತಾಯಾಂ ವಾಚಿ ; **ರದ** ವಿಲೇಖನೇ ; **ಣದ** ಅವ್ಯಕ್ತೇಶಬ್ದೇ ; **ಅರ್ದ** ಗತೌ ಯಾಚನೇಚ ; **ಣದ, ಗರ್ದ** ಶಬ್ದೇ ; **ತರ್ದ** ಹಿಂಸಾಯಾಂ ; **ಕರ್ದ** ಕುತ್ಸಿತೇ ಶಬ್ದೇ ; **ಖರ್ದ** ದಂಶನೇ ; **ಅತಿ, ಅದಿ** ಬಂಧನೇ ; **ಇದಿ** ಪರಮೈಶ್ವರ್ಯೇ ; **ಬಿದಿ** ಅವಯವೇ ; **ಣಿದಿ** ಕುತ್ಸಾಯಾಂ ; **ಟುನದಿ** ಸಮೃದ್ಧೌ ; **ಚದಿ** ಆಹ್ಲಾದನೇ ದೀಪ್ತೌ ಚ ; **ತ್ರದಿ** ಚೇಷ್ಟಾಯಾಂ ; **ಕದಿ, ಕ್ರದಿ, ಕ್ಲದಿ** ಆಹ್ಲಾದನೇ ರೋದನೇಚ; **ಕ್ಲಿದಿ** ಪರಿದೇವನೇ; **ಶುಂಧ** ಶುದ್ಧೌ ; **ಫಕ್ಕ** ನೀಚೈರ್ಗತೌ; **ತಕ, ತಕ್ಕ, ಥಗ್ಗ** ಹಸನೇ ; **ತಕಿ** ಕೃಚ್ಛ್ರಜೀವನೇ ; **ಶುಕ** ಗತೌ ; **ಬುಕ್ಕ, ಬುಷ್ಕ** ಭಾಷಣೇ ಭಷಣೇ ಚ ; **ಓಖೃ, ರಾಖೃ, ಲಾಖೃ, ದ್ರಾಖೃ, ಧ್ರಾಖೃ** ಶೋಷಣಾಲಮರ್ಥಯೋಃ ; **ಶ್ರಾಖೃ, ಶಾಖೃ** ವ್ಯಾಪ್ತೌ ; **ಅಖ, ಣಖ, ವಖ, ಮಖ, ಮುಖ, ರಖ, ರಿಖ, ಲಖ, ಲಿಖ, ಉಖಿ, ಲಖಿ, ವಖಿ, ಲಗಿ, ರಗಿ, ಅಗಿ, ವಗಿ, ಮಗಿ, ಖಗಿ, ಇಗಿ, ಷಿಗಿ, ಲಿಗಿ,** ಗತೌ ; **ತ್ವಗಿ** ಕಂಪನೇ ; **ಯುಗಿ, ಕುಗಿ, ಬುಗಿ** ವರ್ಜನೇ ; **ಅಘಿ** ಪಾಲನೇ ; **ಲಘಿ** ಶೋಷಣೇ ; **ಶಿಘಿ** ಆಘ್ರಾಣೇ ; **ಶುಚ** ಶೋಕೇ ; **ಕುಚ** ಶಬ್ದೋತ್ತರೇ ; **ಕುಂಚ, ಕ್ಲುಂಚ** ಕೌಟಿಲ್ಯಾಲ್ಪೀಭಾವಯೋಃ ; **ಲುಂಚ** ಅಪನಯನೇ ; **ಅಂಚು**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗತಿಪೂಜನಯೋಃ ; **ವಚಿ, ವಂಚಿ, ತಂಚಿ, ತ್ವಂಚಿ, ಮ್ರುಚಿ, ಕ್ಲುಚಿ, ಮ್ಲುಚಿ, ಮ್ಲುಂಚಿ, ಷ್ರುಚಿ, ಷ್ಲುಚಿ, ಪುಷ್ಲ** ಗತೌ ; **ಗ್ರುಚು, ಗ್ಲುಚು, ಗುಜು, ಘುಜು, ಕುಚು, ಖುಚು** ಸ್ತೇಯಕರಣೇ ; **ಅರ್ಚ** ಪೂಜಾಯಾಂ ; **ಮ್ಲೇಚ್ಛ** ಅವ್ಯಕ್ತಾಯಾಂ ವಾಚಿ ; **ಲಛಿ, ಲಾಛಿ** ಲಕ್ಷಣೇ ; **ವಾಛಿ** ಇಚ್ಛಾಯಾಂ ; **ಆಛಿ** ಆಯಾಮೇ ; **ಹ್ರೀಚ್ಛ** ಲಜ್ಜಾಯಾಂ ; **ಹೂರ್ಚ್ಛಾ** ಕೌಟಿಲ್ಯೇ ; **ಮೂರ್ಚ್ಛಾ** ಮೋಹಸಮುಚ್ಛ್ರಾಯಯೋಃ ; **ಸ್ಫೂರ್ಚ್ಛಾ** ವಿಸ್ಮೃತೌ ; **ಯುಛಿ** ಪ್ರಮಾದೇ ; **ಉಛಿ** ಉಂಛೇ ; **ಉಚ್ಛೀ** ವಿವಾಸೇ ; **ಧೃಜ, ಧುಜ, ಧಜ, ಧ್ರಜ, ಧ್ವಜ, ವಜ, ವ್ರಜ, ಷಜ** ಗತೌ ; **ಅಜ** ಕ್ಷೇಪಣೇ ಚ ; **ಅರ್ಜ, ಷರ್ಜ** ಅರ್ಜನೇ ; **ತರ್ಜ** ವ್ಯಥನೇ ; **ಖರ್ಜ** ಮಾರ್ಜನೇಚ ; **ಖಜ** ಮಂಥೇ ; **ಖಜಿ** ಗತಿವೈಕಲ್ಯೇ ; **ಏಜೃ** ಕಂಪನೇ ; **ಸ್ಫೂರ್ಜಾ** ವಜ್ರನಿರ್ಘೋಷೇ ; **ಕ್ಷೀ** ಕ್ಷಯೇ ; **ಕೀಜ, ಕೂಜ, ಕುಜಿ** ಅವ್ಯಕ್ತೇ ಶಬ್ದೇ ; **ಲಜ, ಲಜಿ, ಲಾಜ, ಲಾಜಿ** ತರ್ಜ ಭರ್ತ್ಸನೇ ; **ಜಜಿ, ಜಜ** ಯುದ್ಧೇ ; **ತುಜ** ಹಿಂಸಾಯಾಂ ; **ತುಜಿ** ಚಲನೇ ಚ ; **ಗಜ, ಗಜಿ, ಗುಜ, ಗುಜಿ, ಗೃಜ, ಗೃಜಿ, ಮೃಜ, ಮೃಜಿ, ಗರ್ಜ** ಭರ್ತ್ಸನೇ ಶಬ್ದೇ ; **ಶೌಂಡೃ** ಗರ್ವೇ ; **ಯೌಂಡೃ** ಸಂಬಂಧೇ ; **ಮೇಡೃ, ಮ್ರೇಡೃ** ಉನ್ಮಾದನೇ ; **ಮ್ರುಡೃ, ಮ್ಲುಡೃ** ಅನಾದರೇ ; **ಕಟೆ** ವರ್ಷಾವರಣಯೋಃ ; **ರಟೆ** ಪರಿಭಾಷಣೇ ; **ಲಟೆ** ಬಾಲ್ಯೇಚ ; **ಶಟೆ** ರುಜಾವಿಶರಣ ಗತ್ಯವಸಾದನೇಷು ; **ವಟೆ** ವೇಷ್ಟನೇ ; **ಖಿಟೆ** ಉತ್ರಾಸನೇ ; **ಷಿಟೆ, ಶಿಟೆ** ಅನಾದರೇ ; **ಜಟೆ, ಮಟೆ, ಷಟೆ** ಸಂಘಾತೇ ; **ತಟೆ, ಭಟೆ, ಭಟ್ಟೆ** ಉಚ್ಛ್ರಾಯೇ ; **ಬಟೆ** ಸೇವಾಯಾಂ ; **ಭಾಂಡೃ** ಅವ್ಯಕ್ತಾಯಾಂ ವಾಚಿ ; **ತುಟೆ** ಸ್ತೇಯೇ ; **ಕುಟೆ** ಗತಿವೈಕಲ್ಯೇ ; **ಮಟೆ** ದಾಹೇ ; **ಸುಟೆ** ವಕ್ರೇ ; **ಕಟೆ** ವೇದನಾಯಾಂ ; **ಹಿಡಿ** ಶೋಷಣೇ ; **ಖಟೆ** ಕಾಂಕ್ಷಾಯಾಂ ; **ನಟೆ** ನೃತ್ತೌ ; **ಪಿಟೆ** ಶಬ್ದಸಂಘಾತಯೋಃ ; **ಹಟೆ** ದೀಪ್ತೌ ; **ವಟೆ** ಅವಯವೇ ; **ರುಟೆ, ಲುಟೆ** ವಿಲೋಡನೇ ; **ಚಟೆ, ಚಿಟೆ, ಚುಟೆ** ಪ್ರೈಷ್ಯೇ ಮಾನೇಚ ; **ವಿಟೆ** ಶಬ್ದೇ ; **ಬಿಟೆ, ಬಿಡ** ಆಕ್ರೋಶೇಚ ; **ಅಟೆ, ಪಟೆ, ಇಟೆ, ಈಟೆ, ಕಿಟೆ, ಕೀಟೆ, ಕುಟೆ, ಕೂಟೆ, ಗುಟೆ, ಉಟೆ, ಈ** ಗತೌ ; **ಮಡಿ** ಭೂಷಾಯಾಂ ; **ಕುಡಿ** ವೈಕಲ್ಯೇ ; **ಮುಟ್ಟೆ** ಪ್ರಮರ್ದನೇ ; **ಚುಟೆ** ಅಲ್ಪೀಭಾವೇ ; **ಮುಡಿ** ಖಂಡನೇ ; **ವಟೆ** ವಿಭಾಜನೇ ; **ರುಟೆ, ಲುಟೆ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ತ್ರೇಯೇ ; **ಸ್ಫುಟಿರ್** ವಿಶರಣೇ ; **ಪಠ** ವ್ಯಕ್ತಾಯಾಂ ವಾಚಿ ; **ವಠ** ಸ್ಥೌಲ್ಯೇ ; **ಮಠ** ನಿವಾಸೇ ; **ಕಠ** ಕೃಚ್ಛ್ರಜೀವನೇ ; **ರಟ** ಪರಿಭಾಷಣೇ ; **ಹಠ** ಬಲಾತ್ಕಾರೇ ; **ರುಠ, ಲುಠ** ಉಪಘಾತೇ.

ಭೂ—ಸತ್ತಾಯಾಂ, ಭೂಕ್ವಿಪ್ ಎಂಬಲ್ಲಿ ಕ್ವಿಪ್ ಪೋಗೆ ಭೂಃ ಎಂಬ ಕೃಲ್ಲಿಂಗವಾಯ್ತು.

ಕ್ವಿಪ್ | ಕ್ವಿಪ್ರತ್ಯಯಂ, ಸರ್ವಾಪಹಾರಿ | ಸಮಸ್ತದ ಹೋಕಿನ ಶೀಲದಲ್ಲೂ, ಲೋಪಃ | ಅದರ್ಶನಮಕ್ಕು.

ಭೂಃ = ನೆಲಂ ; ಭೂತಿಃ = ಸಿರಿ ; ಭೂತಃ = ಪ್ರಮಥಂ ; ಭುವನಂ = ನಾಡು ; ಭವಿಃ = ಜನನಂ ; ಭವಃ = ಶಿವಂ ; ಭಾವಃ = ಬಗೆ ; ಭಾವನಂ = ವಿಶ್ವಾಸಂ ; ಭಾವ್ಯಂ = ಬಗೆಯಲ್ತಕ್ಕುದು ; ಭಾವುಕಂ, ಭವಿಕಂ, ಭವ್ಯಂ = ಲೇಸು; ಭಾವಿ = ಆಗುವುದು; ಭಾವಿ = ಆಗುವಂ; ಭಾವಿನೀ = ಆಗುವಳ್; ಭೂಮ= ದೇವತಾರಾಧನಂ; ಭೂಮಿಃ = ನೆಲಂ; ಭವಾನ್ = ನೀನು; ಭವಿತಾ = ಆಗುವಂ ; ಭವಿತವ್ಯಂ = ಆಗಬೇಕು ; ಭವನೀಯಂ = ಆಗತಕ್ಕುದು; ಪ್ರಭವಃ = ಹುಟ್ಟಿದಂ; ವಿಭವಃ = ದೊರೆಕೊಂಡಂ; ಪರಾಭವಃ = ಸೋಲ್ತಂ ; ಪ್ರಭುಃ = ದೇಶಾಯಿ ; ವಿಭುಃ = ಅರಸು ; ಶಂಭುಃ = ಆನಂದರೂಪಂ; ಶಂಭೂಃ = ಸುಖಸ್ಥಾನಂ; ಮಯೋಭೂಃ = ವೇದಜನಕಂ ; ಸ್ವಯಂಭೂಃ = ನಿರಂಜನಂ ; ಭೂಯೆಂಬುದರಿಂದಾಖ್ಯಾತ ಕೃತ್ತದ್ಧಿತಸಮಾಸಂಗಳಿಂದುಳಿದರೂಪಂಗಳಂ ತಿಳಿದುಕೊಂಬುದು.

ಚಿತೀ—ಸಂಜ್ಞಾನೇ, ಅರಿವಿನೊಳ್ :

ಚೇತತಿ = ಅರಿದಪಂ.

ಧಾತೋಃ ಕ್ವಿಪ್ ; ಧಾತೋಃ = ಧಾತುವಿನತ್ತಣಿಂದೆ ; ಕ್ವಿಪ್ = ಕ್ವಿಪ್ಪ್ರತ್ಯಯಂ ಬರ್ಪುದು.

ಚಿತ್ = ಅರಿವು ; ಚಿತ್ತಿಃ = ಅರಿವು ; ಚಿತ್ತಂ = ಅರಿವು ; ಚೇತಃ = ಮನಂ ; ಚಿತ್ತವಾನ್ = ಅರಿದಂ.

ಅತ—ಸಾತತ್ಯಗಮನೇ, ಎಡವಿಡದ ನಡೆಯಲ್ಲಿ :

ಅತತಿ = ನಡೆದಪಂ ; ಆತ್ಮಾ = ಸರ್ವತ್ರ ಸಂಚಾರೀ.

ಚ್ಯುತಿರ್—ಆಸೇಚನೇ, ತಡೆತದೊಳ್ :

ಚ್ಯೋತತಿ = ಇನಿತಂತಡೆದಪಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ಚ್ಯುತಿರ್—ಕ್ಷರಣೇ, ಒರಸುಹಣದೊಳ್ :
ಶ್ಚ್ಯೋತತಿ = ಒರಸಿದಪಂ.

ಮಂಥ—ವಿಲೋಡನೇ, ಕಡೆತದೊಳ್ :
ಮಂಥತಿ, ಮಥತಿ = ಕಡೆದಪಂ ; ಮಂಥಾ = ಕಡೆಗೋಲ್.

ಅನುನಾಸಿಕೋಽನುಷಂಗಃ । ಧಾತುಪ್ರತ್ಯಯಂಗಳನುಬಂಧವಾದಪಂಚಮವನುಷಂಗವೆನಿಕುಂ | ಅನುಷಂಗಸ್ಯಲೋಪಃ | ಅನುಷಂಗದಹೋಕು.

ಕುಥಿ, ಮಥಿ, ಲುಥಿ, ಕಥಿ, ಬುಥಿ, ಕಿಥಿ—ಹಿಂಸಾಸಂಕ್ಲೇಶಯೋಃ, ಕೊಲೆ ಕುಟ್ಟುಗಳೊಳ್ :
ಕಂಥತೀತಿ ಒತ್ತರಿಸಿದಪುದೆಂಬುದು ; ಕಂಥತೀತಿ ಹೊಲಿದಪನೆಂಬುದು ; ಕಂಥಾ = ಕಂತೆ.
ಬುಂಥತೀತಿ ತಳೆದಪುದೆಂಬುದು ; ಬುಂಥಾ = ಬೊಂತೆ.
ಸಂಥತೀತಿ ಒತ್ತರಿಸಿದಪುದೆಂಬುದು ; ಸಂಥಾ = ಸಂತೆ.
ಕುಂಥತಿ, ಮಂಥತಿ, ಲುಂಥತಿ = ಕೊಂದಪಂ, ಕುಟ್ಟಿದಪಂ, ಮಿಡಿಕಿದಪಂ, ಅಳ್ತಪಂ.
ಕುಂಥಾ, ಮಂಥಾ, ಲುಂಥಾ = ಬವರ.

ಇದನುಬಂಧಾನ್ನುಃ—ಇಕಾರಾನುಬಂಧದ ಧಾತುವಿಂಗೆ ನುವೆಂಬಾಗಮುಮಕ್ಕುಂ.

ಅತಿ, ಅದಿ—ಬಂಧನೇ, ಕಟ್ಟಿಸೊಳ್ :
ಅಂತತಿ = ಕಟ್ಟಿದಪಂ ; ಅಂತಕಃ = ಜವಂ.
ಅಂದತಿ = ಬಂಧಿಸಿದಪುದು ; ಅಂದೂಃ = ಬಾವಿ.

ಇದಿ—ಪರಮೈಶ್ವರ್ಯೇ, ಸಿರಿತನದೊಳ್ :
ಇಂದತಿ = ಆಳ್ದಪಂ ; ಇಂದ್ರಃ = ಒಡೆಯಂ.

ಷಿಧು—ಗತ್ಯಾಂ, ನಡೆಯೊಳ್ :
ಸೇಧತಿ = ನಡೆದಪಂ ; ಸಿದ್ಧಂ = ಸಿದ್ಧಿ.

ಧಾತ್ವಾದೇಃ ಷಃ ಸಃ | ಧಾತುವಿನ ಮೊದಲ ಷತ್ವಕ್ಕೆ ಸತ್ವಮಕ್ಕುಂ | ಣೋ ನಃ | ಧಾತುವಿನ ಮೊದಲ ಣತ್ವಂ ನತ್ವಮಕ್ಕುಂ.

ಷಿಧೂ—ಶಾಸ್ತ್ರೇ, ಮಾಂಗಲ್ಯೇಚ :
ಸೇಧತಿ = ಕಲ್ತಪಂ, ಲೇಸಾದಪಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಾದೃ—ಭಕ್ಷಣೇ, ತೀನಿಯೊಳ್ :
ಖಾದತಿ = ಮೆಲ್ದಪಂ ; ಖಾದನಂ = ಮೆಲ್ವು.

ಬದ—ಸ್ಥೈರ್ಯೇ, ತಿರದೊಳ್ :
ಬದತಿ = ತಿರವಾದುದು ; ಬದರೀ = ಬೋರೆ.

ಖದ—ಹಿಂಸಾಯಾಂ ಚ, ಹಿಂಸೆಯೊಳಂ, ಸ್ಥೈರ್ಯದೊಳಂ :
ಖದತಿ = ಕೊಂದಪುದು ; ಖದಿರಃ = ಕಡಿಯುಂ.

ಗದ—ವ್ಯಕ್ತಾಯಾಂ ವಾಚಿ, ತಡೆಯಿಲ್ಲದ ನುಡಿಯೊಳ್ :
ಗದತಿ = ನುಡಿದಪಂ ; ಗದಾ = ಕಬ್ಬಿನದ ಗುದಿಗೆ.

ರದ—ವಿಲೇಖನೇ, ಬರೆಯೊಳ್ :
ರದತಿ = ಬರೆದಪಂ ; ರದನಃ = ಹಲ್.

ಣದ—ಅವ್ಯಕ್ತೇಶಬ್ದೇ, ಬಿಕ್ಕಿನ ನುಡಿಯೊಳ್ :
ನದತಿ = ಕೂಗಿದಪುದು ; ನದೀ = ಹೊಳೆ.

ಅರ್ದ—ಗತೌ ಯಾಚನೇ ಚ, ಗತಿಯೊಳ್ ತಿರಿಕೆಯೊಳಂ :
ಅರ್ದತಿ = ನಡೆದಪಂ, ತಿರಿದಪಂ ; ಅರ್ದನಂ = ಬಿಕ್ಕೆ.

ಣರ್ದ, ಗರ್ದ—ಶಬ್ದೇ, ಕೂಗಿನೊಳ್ :
ನರ್ದತಿ = ಕೂಗಿದಪಂ ; ನರ್ದನಂ = ಕೂಗು.
ಗರ್ದತಿ = ಕೂಗಿದಪುದು ; ಗರ್ದಭಃ = ಕತ್ತೆ.

ತರ್ದ—ಹಿಂಸಾಯಾಂ, ಕೊಲೆಯೊಳ್ :
ತರ್ದತಿ = ಕೊಂದಪುದು ; ತರ್ದುಃ = ತದ್ದು.

ಕರ್ದ—ಕುತ್ಸಿತೇ ಶಬ್ದೇ, ಗೊಗ್ಗರ ದನಿಯೊಳ್ :
ಕರ್ದತಿ = ಒರಲಿದಪುದು ; ಕರ್ದಃ = ಪದ್ದುರ.

ಖರ್ದ—ದಂಶನೇ, ಕಡಿತದೊಳ್ :
ಖರ್ದತಿ = ಕಡಿದಪುದು, ಖರ್ದಃ = ನಾಯ್.

ಬಿದಿ—ಅವಯುವೇ, ಮೈಯ್ಯೊಳ್ :
ಬಿಂದತಿ = ರೂಪಿಸಿದಪುದು ; ಬಿಂದುಃ = ಹನಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಣಿದಿ—ಕುತ್ಸಾಯಾಂ, ಹಳಿತದೊಳ್ :
ನಿಂದತಿ = ಹಳಿದಪಂ ; ನಿಂದಾ = ಹಳಿತಂ.

ಟುನದಿ—ಸಮೃದ್ಧೌ, ಒದವಿಸಲ್ಲಿ :
ನಂದತಿ = ಒದಗಿದಪಂ ; ನಂದನಃ = ಮಗಂ.

ಚದಿ—ಆಹ್ಲಾದನೇ, ದೀಪ್ತೌ ಚ, ಕುಸಿಯೊಳ್, ಬೆಳಕಿನೊಳಂ :
ಚಂದತಿ = ಕುಸಿಯಾದಪಂ, ತಳತಳಿಸಿದಪಂ ; ಚಂದ್ರಃ = ತಿಂಗಳ್.

ತ್ರದಿ—ಚೇಷ್ಟಾಯಾಂ, ಚಲನೆಯೊಳ್ :
ತ್ರಂದತಿ = ಚಲಿಸಿದಪುದು ; ತ್ರಂದೀ = ತೆರೆ.

ಕದಿ, ಕ್ರದಿ, ಕ್ಲದಿ—ಆಹ್ಲಾದನೇ ರೋದನೇಚ, ಮೋಜಿನೊಳಳ್ಕೆಯೊಳಂ :
ಕಂದತಿ = ಅಳ್ದಪಂ ; ಕಂದಃ = ಮಗಂ.
ಕ್ರಂದತಿ = ಅಳ್ದಪಂ ; ಕ್ರಂದಃ = ಅಳ್ಕೆ.
ಕ್ಲಂದತಿ = ಬಾಡಿದಪಂ ; ಕ್ಲಂದನಂ = ಬಾಡು.

ಕ್ಲಿದಿ—ಪರಿವೇದನೇ,[1] ಅಳ್ಕೆಯೊಳ್ :
ಕ್ಲಿಂದತಿ = ಅಳ್ತಪಂ ; ಕ್ಲಿಂದಾ = ಅಳ್ಕೆ.

ಶುಂಧ—ಶುದ್ಧೌ, ಶುದ್ಧದೊಳೆ :
ಶೋಧತಿ = ಶೋಧಿಸಿದಪಂ ; ಶುಧಾ = ಪಾಲ್ ; ಶುದ್ಧಂ = ಸುದ್ದ.

ಫಕ್ಕ—ನೀಚೈರ್ಗತೌ, ಹಾದರದೊಳ್ :
ಫಕ್ಕತಿ = ಪಾದರವಾಡಿದಪಂ ; ಫಕ್ಕಾ = ಹಾದರಂ.

ತಕ, ತಕ್ಕ, ಗಗ್ಘ—ಹಸನೇ, ನಗೆಯೊಳ್ :
ತಕ್ಕತಿ = ನಕ್ಕಪಂ.
ತಕತಿ = ನಕ್ಕಪಂ.
ಗಗ್ಘತಿ = ನಕ್ಕಪಂ ; ತಕ್ಕಃ, ತಕಃ, ಗಗ್ಘಃ = ನಗೆ.

ತಕಿ—ಕೃಚ್ಛ್ರಜೀವನೇ, ಕಷ್ಟದ ಸಂಬಳದೊಳ್ :
ತಂಕತಿ = ದುಡಿದಪಂ ; ತಂಕಃ = ದುಡಿಮೆ.

---

[1] ಕ್ಲಿದಿ-ಪರಿದೇವನೇ ಪುಟ ೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶುಕ—ಗತೌ, ನಡೆಯೊಳ್ :
ಶೋಕಃ = ನಡೆದಪಂ ; ಶುಕಃ = ವ್ಯಾಸನ ಮಗಂ.

ಬುಕ್ಕ, ಬುಷ್ಕ—ಭಾಷಣೇ, ಭಷಣೇ ಚ, ಬೊಗುಳ್ಕೆಯೊಳ್ :
ಬುಕ್ಕತಿ, ಬುಷ್ಕತಿ = ಬೊಗುಳ್ದಪುದು ; ಬುಕ್ಕಃ, ಬುಷ್ಕಃ = ನಾಯಿ.

ಒಖೃ, ರಾಖೃ, ಲಾಖೃ, ದ್ರಾಖೃ, ಧ್ರಾಖೃ—ಶೋಷಣಾಲಮರ್ಥಯೋಃ, ಒಣಗಿಸೊಳಂ, ಸಿಂಗಾರದೊಳಂ :
ಒಖತಿ = ಒಣಗಿದಪಂ, ಸಿಂಗರಿಸಿದಪಂ.
ರಾಖತಿ = ಕಂಡಿದಪಂ, ಸಹಗತಿಸಿದಪಂ.
ಲಾಖತಿ = ಬಾಡಿದಪಂ, ಮೆರೆದಪಂ.
ದ್ರಾಖತಿ = ಕುಂದಿದಪಂ, ಪೊಣ್ಮಿದಪಂ.
ಧ್ರಾಖತಿ = ಸುರ್ಕ್ಕಿದಪಂ, ಲವಲವಿಸಿದಪಂ ; ಒಖನಂ, ರಾಖನಂ, ಲಾಖನಂ, ದ್ರಾಖನಂ, ಧ್ರಾಖನಂ = ಒಣಗುಂ, ಸಿಂಗಾರವುಂ.

ಶಾಖೃ, ಶ್ರಾಖೃ, ಶ್ಲಾಖೃ—ವ್ಯಾಪ್ತೌ, ಆವರಿಸುಹಣದೊಳ್ :
ಶಾಖತಿ = ಪರ್ಬ್ಬಿದಪುದು ;
ಶ್ರಾಖತಿ, ಶ್ಲಾಖತಿ = ಚಿಗುರ್ತಪುದು; ಶಾಖಾ = ಕೊಂಬೆ; ಶ್ಲಾಖಾ = ಮರದ ಹರೆ.

ಅಖ, ಉಖ, ಣಖ, ವಖ, ಮಯೂಖ, ಮಖ, ಮುಖ, ರಖ, ರಿಖ, ಲಿಖ, ರಖಿ, ಲಖಿ, ಇಖಿ, ವಖಿ, ರಗಿ, ರಿಗಿ, ಲಗಿ, ರಿಗಿ, ವಗಿ, ಮಗಿ, ಖಗಿ, ಇಗಿ, ಷಿಗಿ, ಲಿಗಿ—ಗತೌ, ನಡೆಯೊಳ್ :
ಅಖತಿ = ತೋಡಿದಪುದು ; ಆಖುಃ = ಇಲಿ.
ಒಖತಿ = ಉರಿದಪುದು ; ಉಖಾ = ಒಲೆ.
ನಖತಿ = ಮೊಳೆದಪುದು ; ನಖಃ = ಉಗುರ್.
ವಖತಿ = ನಡೆದಪುದು ; ವಖಃ = ಬಿಸಿಲವಡಿ.
ಮಯೂಖತಿ = ಹರಿದಪುದು ; ಮಯೂಖಃ = ಬಿಸಿಲ್.
ಮಖತಿ = ಧಗಧಗಿಸಿದಪುದು ; ಮಖಃ = ಯಜ್ಞಂ.
ಮೊಖತಿ = ನುಂಗಿದಪುದು ; ಮುಖಂ = ಬಾಯ್.
ರಖತಿ = ಚರಿಸಿದಪುದು ; ರಖಃ = ಎರಳೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೇಖತಿ = ಯೆಯಿದಿಪುದು ; ರೇಖಾ = ಗೆರೆ.
ಲಖತಿ = ಪೋದಪುದು ; ಲಖಃ = ಪೋಕು.
ಲೇಖತಿ = ಬರೆದಪಂ ; ಲೇಖಃ = ದೇವಂ.
ರಂಖತಿ = ಹತ್ತಿದಪುದು ; ರಂಖಃ = ಅಲತಿಗೆ.
ಲಂಖತಿ = ಹೊಲಿದಪುದು ; ಲಂಖಃ = ಜೂಜಿ.
ಇಂಖತಿ = ಹೊಕ್ಕಪುದು ; ಇಂಖಃ = ಹೊಗುತೆ.
ವಂಖತಿ = ಪೋಣಿಸಿದಪುದು ; ವಂಖಿ = ವಂಕಿ.
ರಂಗತಿ = ಬಣ್ಣಿಸಿದಪುದು ; ರಂಗಃ = ರಂಗವಲ್ಲಿ.
ಲಂಗತಿ = ಅಲುಗಿದಪುದು ; ಲಂಗಃ = ಸಂಚಲಂ.
ಅಂಗತಿ = ಬೆಳೆದಪುದು ; ಅಂಗಂ = ಮಯ್.
ವಂಗತಿ = ಬಾಗಿದಪುದು ; ವಂಗಃ = ನಾಡು.
ಮಂಗತಿ = ಹಾರಿದಪುದು ; ಮಂಗಃ = ಕೋತಿ.
ಖಂಗತಿ = ಏಡಿಸಿದಪುದು ; ಖಂಗಃ = ಮುಸುವಂ.
ಇಂಗತಿ = ನಿಗುರ್ದಪುದು ; ಇಂಗಃ = ಬಳ್ಳಿ.
ಸಿಂಗತಿ = ಅಣಕಿಸಿದಪುದು ; ಸಿಂಗಃ = ಸಿಂಗಲೀಕಂ.
ಲಿಂಗತಿ = ಗಮನಿಸಿದಪುದು ; ಲಿಂಗಂ = ಗುರುತು, ಮಾಣಿ.

ತ್ವಗಿ—ಕಂಪನೇ, ನಡುಕದೊಳ್ :
ತ್ವಂಗತಿ = ನಡುಗಿದಪಂ ; ತ್ವಂಗಃ = ನಡುಕಂ.

ಯುಗಿ, ತುಗಿ, ಬುಗಿ—ವರ್ಜನೇ, ತೊಲಗಿಕೆಯೊಳ್ :
ಯುಂಗತಿ = ತೊಲಗಿದಪುದು.
ಜುಂಗತಿ = ಜಾರಿದಪುದು ; ಜುಂಗಃ = ತೊಡೆವಾಳೆ, ಜಾರಿದಂ.
ಬುಂಗತಿ = ಡೊಗ್ಗಿದಪಂ ; ಬುಂಗಃ = ಡೊಗ್ಗಿದಂ, ಚುಂಗಿ.

ಇಘಿ—ಪಾಲನೇ, ಹೊರೆತದೊಳ್ :
ಇಂಘತಿ = ಹೊರೆದಪಂ ; ಇಂಘಃ = ಹೊರೆದಂ.

ಲಘಿ—ಶೋಷಣೇ, ಉತ್ಪವನೇಚ, ಒಣಗಿನೊಳಂ, ಪಾರ್ಕೆಯೊಳಂ :
ಲಂಘತಿ = ಒಣಗಿದಪಂ ; ಲಂಘನಂ = ಒಣಗುಂ, ಪಾರ್ಕೆಯುಂ.

ಶಿಘಿ—ಅಘ್ರಾಣೇ, ಉತ್ಪವನೇಚ, ಮೂಸುಹಣದೊಳ್ :
ಶಿಂಘತಿ = ಮೂಸಿದಪಂ ; ಶಿಂಘಾಣಃ = ನಾತಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶುಚ—ಶೋಕೇ, ಅಳ್ಕೆಯೊಳ್ :

ಶೋಚತಿ = ಅಳ್ತಪಂ ; ಶೋಕಃ = ಅಳ್ಕೆ.

ಕುಚ—ಶಬ್ದೇತ್ತರೇ, ಮಾರ್ದನಿಯೊಳ್ :

ಕೋಚತಿ = ಮಾರ್ದನಿಗೊಟ್ಟಂ.

ಕ್ರುಂಚ, ಕ್ಲುಂಚ—ಕೌಟಿಲ್ಯಾಲ್ಪೀಭಾವಯೋಃ, ಡೊಂಕಿನೊಳಂ, ಕಿರಿದಿನೊಳಂ :

ಕ್ರುಂಚತಿ = ಡೊಂಕಿದಪಂ, ಮುದುಡಿದಪಂ ; ಕ್ರುಂಚಾ = ಡೊಂಕು, ಮುದುಡು.

ಕ್ಲುಂಚತಿ = ಸುಕ್ಕಿರ್ದಪಂ, ಮುದುಡಿದಪಂ ; ಕ್ಲುಂಚಾ = ಕುಂಚಿಗೆ.

ಲುಂಚ—ಅಪನಯನೇ, ಕೀಳ್ಕೆಯೊಳ್ :

ಲುಂಚತಿ = ಕಿಳ್ತಪಂ ; ಲುಂಚನಂ = ಕೀಳ್ಕೆ.

ಅಂಚು—ಗತಿಪೂಜನಯೋಃ, ನಡೆಯೊಳಂ, ಹಿರಿಯತನದೊಳಂ :

ಅಂಚತಿ = ನಡೆದಪಂ, ಪೂಜಿಸಿದಪಂ ; ಅಂಚುಃ = ಅರುಗು.

ವಚಿ, ಚಚಿ, ತಚಿ, ತ್ವಚಿ, ಮ್ರುಚಿ, ಮ್ಲುಚಿ, ಗ್ರುಚಿ, ಗ್ಲುಚಿ, ಷ್ರುಚಿ, ಷ್ಲುಚಿ, ಪುಷ್ಪ—ಗತೌ, ನಡೆಯೊಳ್ :

ವಂಚತಿ = ಮಾಜಿದಪಂ ; ವಂಚನಂ = ಮಾಜು.

ಚಂಚತಿ = ಅಪಲಾಪಿಸಿದಪಂ ; ಚಂಚಾ = ಯೂನಾಡಿ.

ತಂಚತಿ = ಠಕ್ಕಿಸಿದಪಂ ; ತಂಚಃ = ಠಕ್ಕು.

ತ್ವಂಚತಿ = ಅಟಮಟಿಸಿದಪಂ ; ತ್ವಂಚಃ = ಅಟಮಟಂ.

ಮ್ರುಂಚತಿ = ಜೂಜುವಾಡಿದಪಂ ; ಮ್ರುಂಚಃ = ಜೂದು.

ಮ್ಲುಂಚತಿ = ತಪ್ಪಿಸಿದಪಂ ; ಮ್ಲುಂಚಃ = ತಪ್ಪು.

ಗ್ರುಂಚತಿ = ಮೋಸಿಸಿದಪಂ ; ಗ್ರುಂಚಃ = ಮೋಸಂ.

ಗ್ಲುಂಚತಿ = ಅಡಗಿಸಿದಪಂ ; ಗ್ಲುಂಚಃ = ಅಡಗು.

ಸ್ರುಂಚತಿ = ತಿರುಗಿಸಿದಪಂ ; ಸ್ರುಂಚಃ = ತಿರುಗು.

ಸ್ಲುಂಚತಿ = ಠವಾಳಿಸಿದಪಂ ; ಸ್ಲುಂಚಃ = ಠವಾಳಿ.

ಪುಷ್ಪತಿ = ಪೂತಪುದು ; ಪುಷ್ಪಂ = ಪುಷ್ಪಂ.

ಗ್ರುಚು, ಗ್ಲುಚು, ಗುಜು, ಘುಜು, ಕುಚು, ಖುಚು—ಸ್ತೇಯಕರಣೇ, ಕಳವಿನ ಮಾಟದೊಳ್ :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರೋ೦ಚತಿ = ಕಳ್ದಪಂ ; ಗ್ರೋ೦ಚಃ = ಕಳವು.
ಗ್ಲೋ೦ಚತಿ = ಲಾಗಿಸಿದಪಂ ; ಗ್ಲೋ೦ಚಃ = ಲಾಗು.
ಗೋ೦ಜತಿ = ಅಪಹರಿಸಿದಪಂ ; ಗೋ೦ಜುಃ = ಅಪಹರಣಂ.
ಘೋ೦ಜತಿ = ಅಂಕಿಸಿದಪಂ ; ಘೋ೦ಜುಃ = ಅಂಕೆ.
ಕೋ೦ಚತಿ = ತಸ್ಕರಿಸದಪಂ ; ಕೋ೦ಚಾ = ಕೋ೦ಚೆ.
ಖೋ೦ಚತಿ = ಚೋರಿಸಿದಪಂ ; ಖೋ೦ಚಾ = ಚೋರಣಂ.

ಅರ್ಚ—ಪೂಜಾಯಾಂ, ಪೂಜೆಯೊಳ್ :
ಅರ್ಚತಿ = ಪೂಜಿಸಿದಪಂ ; ಅರ್ಚಕಃ = ಪೂಜಕಂ.

ಮ್ಲೇಚ್ಛ—ಅವ್ಯಕ್ತಾಯಾಂ ವಾಚಿ, ಅಟಮುಟದ ಮಾತಿನೊಳ್ :
ಮ್ಲೇಚ್ಛತಿ = ತೊದಳಿಸಿದಪಂ ; ಮ್ಲೇಛಃ = ಮೇಚು.

ಲಛಿ, ಲಾಛಿ—ಲಕ್ಷಣೇ, ಗುರುತಿನೊಳ್ :
ಲಂಛತಿ = ಗುರುತಾದಪುದು ; ಲಂಛನಂ = ಗುರುತು.
ಲಾಂಛತಿ = ಗುರುತಾದಪುದು ; ಲಾಂಛನಂ = ಕುರುಹು.

ವಾಛಿ—ಇಚ್ಛಾಯಾಂ, ಬಯಕೆಯೊಳ್ :
ವಾಂಛತಿ = ಬಯಸಿದಪಂ ; ವಾಂಛಾ = ಬಯಕೆ.

ಆಛಿ—ಆಯಾಮೆ, ಕಾಲಂ ನೀಡಿಕೊಂಬಲ್ಲಿ :
ಆಂಛತಿ = ಕಾಲಂ ನೀಡಿಕೊಂಡಪಂ ; ಆಂಛಾ = ನೀಟಂ.

ಹ್ರೀಚ್ಛ—ಲಜ್ಜಾಯಾಂ, ನಾಣ್ಚಿಕೆಯೊಳ್ :
ಹ್ರೀಚ್ಛತಿ = ನಾಣ್ಚಿದಪಂ ; ಹ್ರೀಚ್ಛಾ = ನಾಣ್ಚಿಕೆ.

ಹೂಚ್ಛಾರ್—ಕೌಟಿಲ್ಯೇ, ಕವಡಿನೊಳ್ :
ಹೂರ್ಚ್ಛತಿ = ಕವಡಿಸಿದಪಂ ; ಹೂರ್ಚ್ಛಾ = ಕವಡು.

ಮೂರ್ಛಾ—ಮೋಹಸಮುಚ್ಛ್ರಾಯಯೋಃ, ಮರವೆಯೊಳಂ, ಪೆರ್ಮೆಯೊಳಂ :
ಮೂರ್ಛತಿ = ಮರೆದಪಂ ; ಮೂರ್ಛಾ = ಮರವೆ.

ಕಚ್ಛ—ಧಾರಣೇ, ತಾಳ್ಕೆಯೊಳ್ :
ಕಚ್ಛತೀತಿ ತಾಳ್ದಪನೆಂಬುದು ; ಕಚ್ಛಾ = ಕಚ್ಚೆ ; ಕಚ್ಛಪಃ = ಆವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಫೂರ್ಚ್ಛಾ—ವಿಸ್ಮೃತೌ, ಮರವೆಯೊಳ್ :
ಸ್ಫೂರ್ಚ್ಛತಿ = ಮರೆತಪಂ ; ಸ್ಫೂರ್ಚ್ಛಾ = ಮರವೆ.

ಯುಭಿ—ಪ್ರಮಾದೇ, ಮೋಸದೊಳ್ :
ಯುಂಭತಿ = ಮೋಸಪೋದಪಂ ; ಯುಂಭಾ = ಮೋಸಂ.

ಉಭಿ—ಉಂಛೇ, ಆಯ್ವಲ್ಲಿ :
ಉಂಛತಿ = ಆಯ್ದಪಂ ; ಉಂಛಾ = ಆಯ್ಕುಳಿ.

ಉಚ್ಛೀ—ವಿವಾಸೇ, ಹಗ್ಗದ ಹರಿತದೊಳ್ :
ಉಚ್ಛತಿ = ಹರಿದಪಂ ; ಉಚ್ಛಾ = ಹರುಕು.

ಧ್ರಜ, ಧ್ರಜ, ಧ್ರಜ, ಧಜ, ಧ್ವಜ, ವಜ, ವ್ರಜ, ಷಜ—
ಗತೌ, ನಡೆಯೊಳ್ :
ಧ್ರುಜತಿ = ನಡೆದಪಂ.
ಧೃಜತಿ = ನಡೆವಂ.
ಧ್ರಜತಿ = ನಡೆದಪಂ.
ಧಜತಿ = ನಡೆದಪಂ.
ವಜತಿ = ನಡೆದಪಂ.
ವ್ರಜತಿ = ನಡೆದಪಂ.
ಸಜತಿ = ನಡೆದಪಂ ; ಧೃಜಃ, ಧ್ರುಜಃ, ಧಜಃ, ಧ್ರಜಃ, ಧ್ವಜಃ, ವಜಃ,
ವ್ರಜಃ, ಸಜಃ, ಈ ಲ ನಡೆ.

ಅಜ—ಕ್ಷೇಪಣೇಚ, ಇಡಿತದೊಳ್, ನಡೆತದೊಳಂ :
ಅಜತಿ = ಇಟ್ಟಪಂ, ನಡೆದಪಂ ; ಅಜಃ = ಆಡು.

ಅರ್ಜ, ಷರ್ಜ—ಅರ್ಜನೇ, ಗಳಿಕೆಯೊಳ್ :
ಅರ್ಜತಿ = ಗಳಿಸಿದಪಂ ; ಅರ್ಜನಂ = ಗಳಿಕೆ.
ಸರ್ಜತಿ = ಪಡೆದಪಂ ; ಸರ್ಜನಂ = ಪಡೆವು.

ತರ್ಜ—ವ್ಯಥನೇ, ನೋವಿನೊಳ್ :
ತರ್ಜತಿ = ನೊಂದಪಂ ; ತರ್ಜಃ = ಕಜ್ಜಿ.

ಖರ್ಜ—ಮಾರ್ಜನೇಚ, ಬಳಿತದೊಳ್, ನೋವಿನೊಳಂ :
ಖರ್ಜತಿ = ಬಳಿದಪಂ, ನೊಂದಪಂ ; ಖರ್ಜೂಃ = ವುತ್ತುತ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಜ—ಮಂಥೇ, ಕಡೆತದೊಳ್ :
ಖಜತಿ = ಕಡೆದಪಂ ; ಖಜಿಃ = ಕಡೆತಂ.

ಖಜಿ—ಗತಿವೈಕಲ್ಯೇ, ಹೆಳವಿನೋಳ್ :
ಖಂಜತಿ = ಹೆಳವಿದಪಂ ; ಖಂಜಃ = ಹೆಳವಂ.

ಏಜೃ—ಕಂಪನೇ, ನಡುಕದೊಳ್ :
ಏಜತಿ = ನಡುಗಿದಪಂ ; ಏಜನಂ = ನಡುಕಂ.

ಸ್ಫೂರ್ಜಾ—ವಜ್ರನಿರ್ಘೋಷೇ, ಸಿಡಿಲದನಿಯೊಳ್ :
ಸ್ಫೂರ್ಜತಿ = ಗುಡುಗಿದಪುದು ; ಸ್ಫೂರ್ಜಥುಃ = ಸಿಡಿಲದನಿ.

ಕ್ಷೀ—ಕ್ಷಯೇ, ನವೆತದೊಳ್ :
ಕ್ಷಯತಿ = ನವೆದಪಂ ; ಕ್ಷಯಃ = ನವೆತಂ.

ಕೀಜ, ಕೂಜ, ಕುಜಿ—ಅವ್ಯಕ್ತೇಶಬ್ದೇ, ನಿಡುದನಿಯೊಳ್ :
ಕೀಜತಿ = ನಿಡುದನಿಗೆಯ್ದಪುದು ; ಕೀಜಕಃ = ಗೀಜಿಗಂ.
ಕೂಜತಿ = ಕರೆದಪುದು ; ಕೂಜಕಃ = ಕೋಗಿಲೆ.
ಕುಂಜತಿ = ನುಡಿಸಿದಪುದು ; ಕುಂಜರಃ = ಆನೆ.

ಲಜ, ಲಜಿ, ಲಾಜ, ಲಾಜಿ, ತರ್ಜ—ಭರ್ತ್ಸನೇ, ಬೈಯ್ಯುಲೊಳ್ :
ಲಜತಿ = ಬಯ್ದಪಂ ; ಲಜಾ = ಬಯಿಲ್.
ಲಂಜತಿ = ಸೆಳೆದಪಳ್ ; ಲಂಜಾ = ಸೂಳೆ.
ಲಾಜತಿ = ಹುರಿದಪಂ ; ಲಾಜಾ = ಹರಳ್.
ಲಾಂಜತಿ = ಠಕ್ಕಿಸಿದಪಂ ; ಲಾಂಜಃ = ಮಿಂಡಂ.
ತರ್ಜತಿ = ಸೆಳೆದಪಂ ; ತರ್ಜನಂ = ಸೆಳೆತಂ.

ಜಜ, ಜಜಿ—ಯುದ್ಧೇ, ಜಗಳದೊಳ್ :
ಜಜತಿ = ಕೆಣಕಿದಪುದು ; ಜಾಜಿಃ = ಜಾಜಿಕಾಯಿ.
ಜಂಜತಿ = ತಿರುಗಿಸಿದಪುದು ; ಜಂಜಾ = ಬಂಗಿ.

ತುಜ—ಹಿಂಸಾಯಾಂ, ಕೊಲೆಯೊಳ್ :
ತೋಜತಿ = ಕೊಂದಪುದು ; ತೋಜಾ = ಮಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಜಿ—ಬಲನೇಚ, ಕೊಲೆಯೊಳಂ, ಕುಟ್ಟಿನೊಳಂ :
ತುಂಜತಿ = ಕೊಂದಪುದು, ಕುಟ್ಟಿದಪುದು; ತುಂಜಾ = ಇಡುಗಟ್ಟಿಗೆ.

ಗಜ, ಗಜಿ, ಗುಜ, ಗುಜಿ, ಗೃಜ, ಗೃಜಿ, ಮುಜ, ಮುಜಿ, ಮ್ರುಜ, ಮ್ರುಜಿ, ಗರ್ಜ—ಶಬ್ದೇ, ಕೂಗಿನೊಳ್ :
ಗಜತಿ = ಕೂಗಿದಪುದು ; ಗಾಜುಃ = ಪರಜು.
ಗಂಜತಿ = ತಿರುಗಿಸಿದಪುದು ; ಗಂಜಾ = ಕಳ್.
ಗೋಜತಿ = ತೊಡಕಿದಪುದು ; ಗೋಜುಃ = ತೊಡಕು.
ಗುಂಜತಿ = ಸೆಳದಪುದು ; ಗುಂಜಾ = ಗುಲುಗಂಜಿ.
ಗೃಜತಿ = ಸಿಳ್ಳಿಸಿದಪುದು ; ಗೃಂಜಃ = ಸಿಳ್ಳಹಕ್ಕಿ.
ಗೃಂಜತಿ = ಗಳವಂ ಮಾಡಿದಪುದು ; ಗೃಜಃ = ಕೊಳರ್ವಕ್ಕಿ.
ಮೋಜತಿ = ಲವಲವಿಸಿದಪಂ ; ಮೋಜುಃ = ಕುಸಿ.
ಮ್ರುಂಜತಿ = ಅಗುಳ್ದಪುದು ; ಮುಂಜಃ = ಮಾಣಿ.
ಮ್ರುಜತಿ = ಬಯ್ದಪುದು ; ಮ್ರೂಜಾ = ಬಯಿಲ್.
ಮುಂಜತಿ = ಮೂದಲಿಸಿದಪುದು ; ಮುಂಜಾ = ಮೂದಲೆ.
ಗರ್ಜತಿ = ಕೂಗಿದಪುದು ಗರ್ಜನಂ = ಕೂಗು.

ಶೌಂಡೃ—ಗರ್ವೇ, ಗರುವದೊಳ್ :
ಶೌಂಡತಿ = ಗರುವಿಸಿದಪಂ ; ಶೌಂಡೀರಃ = ಗರ್ವಿ.

ಯೌಂಡೃ—ಸಂಬಂಧೇ, ತಗುಲೋಳ್ :
ಯೌಂಡತಿ = ತಗುಲ್ದಪಂ ; ಯೌಂಡೀರಃ = ತಗುಲುಗಂ.

ಮೇಡೃ, ಮ್ರೇಡೃ—ಉನ್ಮಾದನೇ, ಮರುಳ್ತನದೊಳ್ :
ಮೇಡತಿ = ಮರುಳ್ಗೊಂಡಪಂ ; ಮೇಡೀರಃ = ಮರುಳಂ.
ಮ್ರೇಡತಿ = ಹುಚ್ಚುಗೊಂಡಪಂ ; ಮ್ರೇಡೀರಃ = ಹುಚ್ಚಂ.

ಮ್ರುಡೃ, ಮ್ಲುಡೃ—ಅನಾದರೇ, ವಗಡಿನೊಳ್ :
ಮ್ರುಡತಿ = ವಗಡಿಸಿದಪಂ ; ಮ್ರುಡೀರಃ = ವಗಡುಗಂ.
ಮ್ಲುಡತಿ = ಬೆಗಡಿಸಿದಪಂ ; ಮ್ಲುಡೀರಃ = ಬೆಗಡುಗಂ.

ಕಟೆ—ವರ್ಷಾವರಣಯೋಃ, ಮಳೆಯೊಳಂ, ಸುತ್ತಿನೊಳಂ :
ಕಟತಿ = ಸುರಿದಪುದು, ಸುತ್ತಿದಪುದು ; ಕಟಾಹಃ = ಕೊಪ್ಪರಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಟ—ಪರಿಭಾಷಣೇ, ಕೂಗಿಸೊಳ್ :
ರಟತಿ = ಕೂಗಿದಪುದು ; ರಾಟಾ = ತಂತುಯಂತ್ರಂ ; ರಾಟಾಳಃ = ಜಲಾಕರ್ಷಣಯಂತ್ರಂ.

ಲಟ—ಬಾಲ್ಯೇಚ, ಪಸುಳೆತನದೊಳಂ, ತೊದಳೊಳಂ :
ಲಟತಿ = ಆಡಿದಪಂ, ತುದಳಿಸಿದಪಂ; ಲಾಟಂ = ಬಾಲ್ಯಮುಂ, ತೊದಳುಂ ; ಲಾಟಃ = ಲಾಳಂ, ನಾಡು.

ಶಟ—ನಿವಾಸೇ, ಹೊದೆಪಿಸೊಳ್ :
ಶಟತಿ = ಹೊದೆದಪುದು ; ಶಾಟೀ = ಹೊದಕೆ ; ಶಾಟಃ = ಸಪ್ಪಂ.

ರುಟ—ವಿಶರಣೇ, ಗತ್ಯವಸಾದನೇಷು, ಸೀಳ್ಕೆಯೊಳಂ, ನಡೆಯೊಳಂ, ದುಃಖದೊಳಂ :
ರುಟತಿ = ಅಳ್ದಪದು ; ರೋಟಃ = ಕೊಕ್ಕೆ ; ರುಟ್ಟಿಃ = ರೊಟ್ಟಿ ; ರುಟ್ಟುಃ = ದುಃಖಂ.

ವಟ—ವೇಷ್ಟನೇ, ಸುತ್ತಿಸೊಳ್ :
ವಟತಿ = ಸುತ್ತಿದಪುದು ; ವಟಃ = ಆಲಮರಂ; ವಟುಃ = ಹುಡುಗಂ; ವಾಟಃ = ಸುತ್ತು ; ವಾಟೀ = ಬೀದಿ.

ಖಿಟ—ಉತ್ರಾಸನೇ, ಅಂಜಿಕೆಯೊಳ್ :
ಖೇಟತಿ = ಅಂಜಿದಪುದು ; ಖೇಟಕಃ = ಹರಿಗೆ.

ಷಿಟ, ಶಿಟ—ಅನಾದರೇ, ಚಾಲಿವರಿಕೆಯೊಳ್ :
ಸೇಟತಿ = ಚಾಲವಡಿದಪಂ ; ಸೇಟಃ = ಚಾಲಿವರಿಕೆ.
ಶಿಟತಿ = ಮಿಡಿಕಿದಪಂ ; ಶೇಟಃ = ಮಿಡುಕು.

ಜಟ, ಮಟ, ಷಟ—ಸಂಘಾತೇ, ಹೆಣೆತದೊಳ್ :
ಜಟತಿ = ಹೆಣೆದಪಂ ; ಜಟಾ = ಜಡೆ.
ಮಟತಿ = ತೊಡಕಿದಪುದು ; ಮಟಾ = ಜಡೆ.
ಸಟತಿ = ನುಗುಳ್ದಪುದು ; ಸಟಾ = ಜಡೆ.

ತಟ, ಭಟ, ಭಟ್ಟ—ಉಚ್ಛ್ರಾಯೇ, ಕೂಲಿಯೊಳ್ :
ತಟತಿ = ತೆರೆವಾದಪುದು ; ತಟಾಕಃ = ಕೆರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಟತಿ = ಕೂಲಿಯಂ ಮಾಡಿದಪಂ; ಭಟಃ = ಭಂಟಂ.
ಭಟತಿ = ಕೊಂಡಾಡಿದಪಂ ; ಭಟಃ= ವಂದಿ.

ಬಟಿ—ಸೇವಾಯಾಂ, ಚಾಕರಿಯೊಳ್ :
ಬಂಟತಿ = ಸೇವಿಸಿದಪಂ ; ಬಂಟಃ = ಆಳು.

ಭಾಂಡೃ—ಅವ್ಯಕ್ತಾಯಾಂ ವಾಚಿ, ಸಂಸ್ಕೃತಾಭಾಸವಾಕ್ಯದೊಳ್ :
ಭಾಂಡತೀತಿ ತೊದಲಿಸಿದಪುದು ; ಭಾಂಡೀರಃ = ಸಂಸ್ಕೃತಾಭಾಸ ವಾಕ್ಯಂ.

ತುಟಿ—ಸ್ತೇಯೇ, ಕಳವಿನೊಳ್ :
ತುಂಟತಿ = ಕಳ್ದಪಂ ; ತುಂಟಃ = ಕಳ್ಳಂ.

ಕುಟಿ—ಗತಿವೈಕಲ್ಯೇ, ಕಾಲಸೆಳೆತದೊಳ್ :
ಕುಂಟತಿ = ಕುಂಟಿದಪಂ ; ಕುಂಟಃ = ಸೆಳೆಗಾಲಂ.

ಮುಟಿ—ದಾಹೆ, ಉರಿಯೊಳ್ :
ಮುಂಟತಿ = ಉರಿದಪುದು ; ಮುಂಟಃ = ಉರಿ.

ಸುಟಿ—ವಕ್ರೇ, ಡೊಂಕಿನೊಳ್ :
ಸುಂಟತಿ = ಡೊಂಕಿದಪುದು ; ಸುಂಟಂ = ನಡು.

ಕಟಿ—ವೇದನಾಯಾಂ, ಬೇನೆಯೊಳ್ :
ಕಂಟತಿ = ನೊಂದಪುದು ; ಕಂಟಕಃ = ಮುಳ್.

ಹಿಟಿ—ಶೋಷಣೇ, ಒಣಗಿನೊಳ್ :
ಹಿಂಟತಿ = ಒಣಗಿದಪುದು ; ಹಿಂಟಾ = ಹೆಂಟೆ.

ಖಟ—ಕಾಂಕ್ಷಾಯಾಂ, ಬಯಕೆಯೊಳ್ :
ಖಟತಿ = ಬಯಸಿದಪಂ ; ಖಟಾ = ಬಯಕೆ ; ಖಟ್ವಾ = ಹೊರಸು.

ಮಿಟಿ—ಪ್ರಹರಣೇ, ಮಿಡಿತದೊಳ್ :
ಮಿಂಟತಿ = ಮಿಡಿದಪಂ ; ಮಿಂಟಾ = ಮಿಂಟೇ.

ನಟ—ನೃತ್ತೌ, ಕುಣಿತದೊಳ್ :
ನಟತಿ = ಕುಣಿದಪಂ ; ನಟಕಃ = ಕುಣಿವಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಿಟ—ಶಬ್ದ ಸಂಘಾತಯೋಃ, ದನಿಯೊಳ್, ಮೊತ್ತದೊಳಂ :
ಪೇಟತಿ = ಹಾಡಿದಪಂ ; ಪೇಟಕಃ = ಹಾಡುವಂ ; ಪೇಟಿ = ಪೆಟ್ಟಿಗೆ.

ಹಟ—ದೀಪ್ತೌ, ಬೆಳಕಿನೊಳ್ :
ಹಟತಿ = ತಳತಳಿಸಿದಪುದು; ಹಾಟಕಂ = ಚಿನ್ನಂ ; ಹಾಟುಃ = ವೀರ್ಯಂ.

ವಟ—ಅವಯವೇ, ಅಂಗದೊಳ್ :
ವಟತಿ = ಹೆಣೆದಪುದು ; ವಟಾ = ಜೆಡೆ.

ಲುಟ—ವಿಲೋಡನೇ, ಕದಡಿನೊಳ್ :
ಲೋಟುಃ = ಸಂದಳಿ.

ಚಟ, ಚಿಟ, ಚುಟ—ಪ್ರೈಷ್ಯೇ, ಮಾನೇಚ, ಕಳುಹಣದೊಳಂ, ಅಳತೆಯೊಳಂ :
ಚಟತಿ = ಕಳುಪಿದಪಂ ; ಚಾಟುಃ = ಮಾತಾಳಿ ; ಚಾಟಿಕಃ = ಗುಪ್ಪಿ.
ಚೋಟತಿ = ಅಳೆದಪುದು; ಚೋಟುಃ = ಬೊಟ್ಟಿನಪೆರ್ಬೊಟ್ಟಿನ ನಿಗುರ್ದಳತೆ.
ಚೇಟತೀತಿ ಕೇರಿದಪುದೆಂಬುದು ; ಚೇಟಃ = ಮೊರಂ ; ಚೇಟೀ = ತೊಳ್ತು.

ವಿಟ—ಶಬ್ದೇ, ಲಲ್ಲೆಗಾರಿಕೆಯ ಮಾತಿನೊಳ್ :
ವೆಟತೀತಿ ಲಲ್ಲಗಾರಿಕೆಯನಾಡಿದಪನೆಂಬುದು; ವಿಟಃ = ಬೆಡಗುಗಾರಂ.

ಬಿಟ, ಬಿಡ—ಆಕ್ರೋಶೇ, ರತಿಸಂಭ್ರಮಧ್ವನಿಯೊಳ್ :
ಬೇಟತೀತಿ ರತಿಗೆ ಸಡಗರಿಸಿದಪನೆಂಬುದು, ರತಿಸಂಭ್ರಮಧ್ವನಿ.
ಬೇಡತಿ = ಆಡಿದಪಂ ; ಬಿಡಾಲಃ = ಬೆಕ್ಕು.

ಘುಟಿ—ನಿರ್ಣಯೇ, ಆಗಿನೊಳ್ :
ಘುಂಟತೀತಿ ನಿರ್ಣಯಿಸಿದಪುದೆಂಬುದು, ನಿಘುಂಟುಃ = ನಿರ್ಣಯಂ ;
ಘಂಟಾ = ಗಂಟೆ ; ಘಂಟಿಃ = ಕರ್ಣಾಭರಣಂ.

ಅಟ, ಪಟ, ಇಟ, ಈಟ, ಕಿಟ, ಕೀಟ, ಕುಟ, ಕೂಟ, ಗುಟ, ಉಟ, ಇ—ಗತೌ, ನಡೆಯೊಳ್ :
ಅಟತೀತಿ ಆಡಿದಪನೆಂಬುದು ; ಆಟಃ = ಖೇಲನಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಟತೀತಿ ಹೊದೆದಪನೆಂಬುದು ; ಪಟಃ = ಅರುವೆ.
ಏಟತೀತಿ ಎಸೆದಪನೆಂಬುದು ; ಏಟುಃ = ಇಡಿಗೆ.
ಏಟತೀತಿ ಇಡಿದಪನೆಂಬುದು ; ಈಟಿ = ಭಲ್ಲೆಯಂ.
ಕೆಟತೀತಿ ನಡೆದಪನೆಂಬುದು ; ಕಿಟಃ = ಗಡೆ.
ಕೇಟತೀತಿ ಕಿಡಿದಪನೆಂಬುದು ; ಕೀಟಃ = ಹುಳು.
ಕೊಟತೀತಿ ಮೊಳೆದಪುದೆಂಬುದು ; ಕುಟಃ, ಕುಟಜಃ = ಕೊಡಸಿಗೆ ;
ಕುಟೀ = ಗುಡಿ.
ಕೋಟತೀತಿ ಬೆಳೆದಪುದೆಂಬುದು ; ಕೂಟಃ = ಕೋಡುಗಲ್ ;
ಕೋಟಿಃ = ಲೆಕ್ಕವುಂ, ಅರುಗುಂ.
ಒಟತೀತಿ ಹೋದಪುದೆಂಬುದು ; ಉಟಃ, ಉಟಜಃ = ಗುಡಿಸುಲ್.
ಏತೀತಿ ಪ್ರೇರಿಸಿದಪನೆಂಬುದು ; ಇಃ = ಕಾಮಂ.

ಘುರಟ್ಟ—ಹಿಂಸಾಯಾಂ, ಕೊಲೆಯೊಳ್ :
ಘುರಟ್ಟತೀತಿ ಕೊಂದಪಂ ; ಘುರಟ್ಟಕಃ = ಕೊಲೆಗಂ, ಬೋಲ್ಲುಗಂ ;
ಘುರಟಃ = ಬೀಸುವಕಲ್.

ರಟ್ಟ—ಶಕುನೇ, ಶಕುನದೊಳ್ :
ರಟ್ಟತಿ = ತಿಳಿದಪಂ ; ರಟಃ = ತಿಳಿದಂ.

ಮಟ್ಟ—ಭೂಷಾಯಾಂ, ಸಿಂಗಾರದೊಳ್ :
ಮಟ್ಟತೀತಿ ಸಿಂಗರಿಸಿದಪುದೆಂಬುದು ; ಮಟನಂ = ಒಡವೆ.

ಕುಟ್ಟ—ವೈಕಲ್ಯೇ, ರೂಪಾಂತರದೊಳ್ :
ಕುಟ್ಟತೀತಿ ರೂಪಾಂತರವಾದಪುದೆಂಬುದು ; ಕುಟ್ಟಿಮಂ = ಜಗಲಿ.

ಮುಟ್ಟ—ಪ್ರಮರ್ದನೇ, ಉಪಕರಣದೊಳ್ :
ಮುಟ್ಟತೀತಿ ಉಪಕರಿಸಿದಪುದೆಂಬುದು ; ಮುಟ್ಟು = ಉಪಕರಣಂ.

ಚುಟ್ಟ—ಅಲ್ಪೀಭಾವೇ, ಕಿರುಸುತ್ತಿನೊಳ್ :
ಚುಟ್ಟತೀತಿ ಸುತ್ತಿದಪುದೆಂಬುದು ; ಚುಟ್ಟಃ = ಸಿಂಬೆ.

ಘಟ್ಟ—ಖಂಡನೇ, ಕೊರೆತದೊಳ್ :
ಘಟ್ಟತೀತಿ ಘಟ್ಟಿಸಿದಪುದೆಂಬುದು; ಘಟಃ = ಗಟಂ ; ಘಟ್ಟಿಃ = ಗಟ್ಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಟ್ಟ—ನಿವಾಸೇ, ವ್ಯವಹಾರಗೃಹದೊಳ್ :
ಹಟ್ಟತೀತಿ ವ್ಯವಹರಿಸಿದಪುದೆಂಬುದು ; ಹಟ್ಟಃ = ಅಂಗಡಿ.

ಪಿಟ್ಟ—ಚಲನೇ, ಹಾರ್ಕೆಯೊಳ್ :
ಪಿಟ್ಟತೀತಿ ಚಲಿಸಿದಪುದೆಂಬುದು ; ಪಿಟ್ಟಃ = ಹಕ್ಕಿ.

ಹಿಟ್ಟ—ಬಂಧನೇ, ಕಟ್ಟಿನೊಳ್ :
ಹಿಟ್ಟತೀತಿ ಬಂಧಿಸಿದಪುದೆಂಬುದು ; ಹಿಟ್ಟಃ = ದಡಬೆ.

ಕಿಟ್ಟ—ಚೂರ್ಣೇ, ಪುಡಿಗುಟ್ಟುವಲ್ಲಿ :
ಕಿಟ್ಟತೀತಿ ಪುಡಿಗುಟ್ಟಿದಪುದೆಂಬುದು ; ಕಿಟ್ಟಂ = ಚೂರ್ಣಂ.

ಪಟ್ಟ—ಭದ್ರಾಸನೇ, ಮಂಗಳಪೀಠದೊಳ್ :
ಪಟ್ಟತೀತಿ ಮಂಗಳಪೀಠದೊಳ್ಕುಳ್ಳಿರಿಸಿದಪುದೆಂಬುದು ; ಪಟ್ಟಂ = ಸಿಂಹಾಸನಾರೋಹಣಂ.

ಅಟ್ಟ—ಮಂಚಿಕಾಯಾಂ, ಮಂಚಿಕೆಯೊಳ್ :
ಅಟ್ಟತೀತಿ ಮಂಚಿಕೆಯಾದಪುದೆಂಬುದು ; ಅಟ್ಟಂ = ಮಂಚಿಗೆ.

ವಟಿ—ವಿಭಾಜನೇ, ವಿಭಾಗದೊಳ್ :
ವಂಟತೀತಿ ವಿಭಾಗಿಸಿದಪುದೆಂಬುದು ; ವಂಟಕಂ = ಕೂಳ್.

ರುಟಿ, ಲುಟಿ—ಸ್ತೇಯೇ, ಕಳವಿನೊಳ್ :
ರುಂಟತೀತಿ ಕಳ್ದಪನೆಂಬುದು ; ರುಂಟಾಕಃ = ಕಳ್ಳಂ,
ಲುಂಟತೀತಿ ಲಾಗಿಸಿದಪನೆಂಬುದು ; ಲುಂಟಾಕಃ = ಚೋರಂ.

ಸ್ಫುಟಿರ್—ವಿಶರಣೇ, ವಿಕಾಸೇಚ, ಕೊಲೆಯೊಳಂ, ಅರಳ್ಕೆಯೊಳಂ :
ಸ್ಫೋಟತೀತಿ ಕೊಂದಪುದೆಂಬುದು, ಅರಳ್ದಪುದೆಂಬುದು ; ಸ್ಫುಟಃ = ತೆಳುವುಂ, ವಿಕಾಸವುಂ ; ಸ್ಫೋಟಕಂ = ಹೊಪ್ಪಳೆ ; ಸ್ಫುಟಿತಂ = ಅರಳ್ದುದು.

ವಟ್ಟ—ಸೇಚನೇ, ತಳಿತದೊಳ್ :
ವಟ್ಟತೀತಿ ತಳೆದಪನೆಂಬುದು ; ವಟ್ಟಃ = ಕುಂಡಂ, ತರುಡುಂ ; ವಟ್ಟಿಃ = ಅರುಗು ; ವಟ್ಟಾ = ವಂಟೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಠ—ವ್ಯಕ್ತಾಯಾಂ ವಾಚಿ, ಸುದ್ದದ ಸುಡಿಯೊಳ್ :
ಪಠತೀತಿ ಓದಿದಪನೆಂಬುದು ; ಪಾಠಃ = ಪಾಟಂ ; ಪಾಠಕಃ = ಓದಾಳಿ ; ಪಠನಂ = ಓದು.

ವಠ—ಸ್ಥೌಲ್ಯೇ, ಹಿರಿದರೊಳಂ, ಕಿರಿದರೊಳಂ :
ವಠತೀತಿ ಹಿರಿದಾದಪುದೆಂಬುದು, ಕಿರಿದಾದಪುದೆಂಬುದು ; ವಠಾರಃ = ಮನೆ.

ಕುಠ—ಛೇದನೇ, ಕಡಿತದೊಳ್ :
ಕೊಠತೀತಿ ಕಡಿದಪುದೆಂಬುದು ; ಕುಠಾರಃ = ಕೊಡಲಿ.

ಜಠ—ಧಾರಣೇ, ತಳೆತದೊಳ್ :
ಜಠತೀತಿ ತಳೆದಪುದೆಂಬುದು ; ಜಠರಃ = ಹೊಟ್ಟೆ.

ಮಠ—ನಿವಾಸೇ, ಹಕ್ಕೆಯೊಳ್ :
ಮಠತೀತಿ ಹಕ್ಕೆಯಾದಪುದೆಂಬುದು ; ಮಠಃ = ಹಳ್ಕೆ.

ಕಠ—ಕೃಚ್ಛ್ರಜೀವನೇ, ಕಷ್ಟದ ಜೀವಿತದೊಳ್ :
ಕಠತೀತಿ ಕಷ್ಟಂಬಟ್ಟನೆಂಬುದು ; ಕಠೋರಃ = ಕಷ್ಟಂ ; ಕಠಾರಃ = ಕೈದು.

ರಠ—ಪರಿಭಾಷಣೇ, ಬಿರುನುಡಿಯೊಳ್ :
ರಠತೀತಿ ಬಿರುನುಡಿದಪನೆಂಬುದು ; ರಠಃ = ಬಿರುನುಡಿವಳ್ಳಂ.

ಹಠ—ಬಲಾತ್ಕಾರೇ, ಬಲ್ಮೆಯೊಳ್ :
ಹಠತೀತಿ ಬಲಾತ್ಕರಿಸಿದಪನೆಂಬುದು ; ಹಠಃ = ಬಲ್ಮೆ.

ರುಠ, ಲುಠ,—ಉಪಘಾತೇ, ಪೆಟ್ಟಿನೊಳ್ :
ರೊಠತೀತಿ ಕೊಂದಪನೆಂಬುದು ; ರುಠಃ = ಕೊಲೆ.
ಲೊಠತೀತಿ ಬಡಿದಪನೆಂಬುದು ; ಲುಠಃ = ಬಡಿತಂ.

ಪಿಠ—ಹಿಂಸಾಸಂಕ್ಲೇಶಯೋಃ, ಕೊಲೆಯೊಳ್, ಕುಟ್ಟಿನೊಳಂ :
ಪೆಠತೀತಿ ಕೊಂದಪನೆಂಬುದು, ಕುಟ್ಟಿದಪನೆಂಬುದು ; ಪಿಠರಂ = ಕೊಲೆಗಾರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಠ—ಕೈತವೇ ಚ, ಜೂಜಿನೊಳ್ ಪಂತದೊಳಂ :
ಶಠತೀತಿ ಜೂಜುವಾಡಿದಪನೆಂಬುದು ; ಶಠಃ = ಜೂಜುಗಾರಂ ;
ಶಠಾ = ಸಟೆ.

ಶುಠ—ಗತಿಪ್ರತಿಘಾತೇ, ತಪ್ಪುನಡೆಯೊಳ್ :
ಶೊಠತೀತಿ ತಪ್ಪುನಡೆದಪನೆಂಬುದು ; ಶುಠಃ = ತಪ್ಪುನಡೆವಂ ; ಶುಠಾ=
ತಪ್ಪುನಡೆ.

ಪಿಠ—ಸ್ಥಿತೌ, ಕುಳಿಕ್ಕೆಯೊಳ್ :
ಪಿಠತೀತಿ ಕುಳಿತಪನೆಂಬುದು ; ಪಿಠಃ = ಕುಳಿಕ್ಕೆ.

ಕುಠಿ, ಗುಠಿ—ಆಲಸ್ಯೇಚ, ಬೇಸರೊಳಾಸರೊಳಂ :
ಕುಂಠತೀತಿ ಬೇಸತ್ತಪನೆಂಬುದು ; ಕುಂಠಃ = ಬೇಸರ್.
ಗುಂಠತೀತಿ ಆಸತ್ತಪನೆಂಬುದು ; ಗುಂಠಃ = ಆಸರ್.

ಮಿಠಿ—ವ್ಯಭಿಚಾರೇ, ಪಾಣ್ಬೆನೊಳ್ :
ಮಿಂಠತೀತಿ ವ್ಯಭಿಚರಿಸಿದಪನೆಂಬುದು ; ಮಿಂಠಃ = ಮಿಂಡಂ.

ಕಠಿ—ಗಿಳನೇ, ನುಂಗುವಲ್ಲಿ :
ಕಂಠತೀತಿ ನುಂಗಿದಪನೆಂಬುದು ; ಕಂಠಃ = ಕೊರಲ್.

ಶುಠಿ—ಶೋಷಣೇ, ಒಣಗಿನೊಳ್ :
ಶುಂಠತೀತಿ ಒಣಗಿದಪುದೆಂಬುದು ; ಶುಂಠಿ = ಅಲ್ಲಂ.

ರುಠಿ, ಲುಠಿ—ಗತೌ, ನಡೆಯೊಳ್ :
ರುಂಠತೀತಿ ಓಡಿದಪನೆಂಬುದು ; ರುಂಠಾಕಃ = ಓಡುವಂ.
ಲುಂಠತೀತಿ ಕುಪ್ಪಳಿಸಿದಪುದೆಂಬುದು ; ಲುಂಠಾಕಃ = ಕುಪ್ಪಳಿಸಿದವ
ನೆಂಬುದು.

ಕ್ರೀಡೃ—ವಿಹಾರೇ, ಆಟದೊಳ್ :
ಕ್ರೀಡತೀತಿ ಆಡಿದಪುದೆಂಬುದು ; ಕ್ರೀಡಾ = ಆಟಂ.

ಅಡ—ಉದ್ಯಮೇ, ಕೆಲಸದೊಳ್ :
ಅಡತೀತಿ ಗೆಯ್ದಪನೆಂಬುದು ; ಆಡುಃ = ಮೇಕೆ ; ಆಡಃ =
ಉದ್ಯೋಗವಂತಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಡ—ವಿಲಾಸೇ, ಕುಸಿಯೊಳ್ :
ಲಡತೀತಿ ಕುಸಿಯಾದಪುದೆಂಬುದು ; ಲಾಡಃ = ಕುಸಿಗಾರಂ ; ಲಡಃ = ಕುಸಿ.

ಕಡ—ಮದೇ, ಕೊರ್ಬ್ಬಿನೊಳ್ :
ಕಡತೀತಿ ಕೊರ್ಬ್ಬಿದಪುದೆಂಬುದು ; ಕಡಃ = ಕೊರ್ಬು ; ಕಾಡಃ = ಕೊರ್ಬಿದವಂ ; ಕಾಡುಃ = ಅಡವಿ.

ಗುಡ—ಮಾಧುರ್ಯೇ, ಸಿಹಿಯೊಳ್ :
ಗೊಡತೀತಿ ಸಿಹಿಯಾದಪುದೆಂಬುದು ; ಗುಡಂ = ಬೆಲ್ಲಂ.

ಗೋಡೃ—ಬಂಧನೇ, ಕಟ್ಟಿನೊಳ್ :
ಗೋಡತೀತಿ ಕಟ್ಟಿದಪುದೆಂಬುದು ; ಗೋಡಾ = ಗೋಡೆ.

ಪೀಡ—ವ್ಯಥಾಯಾಂ, ವೆತೆಯೊಳ್ :
ಪೀಡತೀತಿ ಪೀಡಿಸಿದಪುದೆಂಬುದು ; ಪೀಡಾ = ವೆತೆ.

ಚುಡ್ಡ—ಹಾವಕರಣೇ, ಮೈಥುನಸಂಭ್ರಮದೊಳ್ :
ಚುಡ್ಡತೀತಿ ರತಿಗೆಳಸಿದಪುದೆಂಬುದು ; ಚುಡ್ಡಂ = ಮೈಥುನಸಂಭ್ರಮಂ.

ಅಡ್ಡ—ಅಭಿಯೋಗೇ, ಮರೆಯೊಳ್ :
ಅಡ್ಡತೀತಿ ಅಡ್ಡಯಿಸಿದಪುದೆಂಬುದು ; ಅಡ್ಡಂ = ಮರೆ.

ಕಡ್ಡ—ಕಾರ್ಕಶ್ಯೇ, ಕಕ್ಕಸದೊಳ್ :
ಕಡ್ಡತೀತಿ ಕರ್ಕಶಯಿಸಿದಪುದೆಂಬುದು ; ಕಡ್ಡಾಯಃ = ಕಕ್ಕಸಂ ; ಕಡ್ಡಿ = ತೃಣ.

ಗಡ್ಡ—ವದನೈಕದೇಶೇ, ಚುಬುಕದೊಳ್ :
ಗಡ್ಡತೀತಿ ಗಡವಾದಪುದೆಂಬುದು; ಗಡ್ಡಂ = ಚುಬುಕಂ ; ಗಡ್ಡಾ = ಗಡ್ಡೆ.

ಮಡ್ಡ—ಉಚ್ಚೈಃಧ್ವನೌ, ದೊಡ್ಡ ಕೂಗಿನೊಳೆ :
ಮಡ್ಡತೀತಿ ಬಿರುದಸಿಗೆಯ್ದಪನೆಂಬುದು ; ಮಡ್ಡಃ = ಹೆಡ್ಡಂ ; ಮಡ್ಡುಃ = ಉಡುಮೆ ; ಮಡ್ಡಿಃ = ಕವಳಂ ; ಮಡ್ಡಾ = ಹೆಡ್ಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಡ್ಡ— ಖನನೇ, ಅಗಳ್ತೆಯೊಳ್ :
ವಡ್ಡತೀತಿ ಅಗುಳ್ದಪನೆಂಬುದು ; ವಡ್ಡಃ = ಅಗುಳ್ವಂ ; ವಡ್ಡುಃ = ಕಟ್ಟೆ ; ವಡ್ಡಿ = ಚತುಷ್ಕಂ ; ವಡ್ಡನಂ = ಹಡಿಗೆ.

ಮುಡ್ಡ—ಸೇಚನೇ, ತಳಿತದೊಳ್ :
ಮುಡ್ಡತೀತಿ ತಳಿದಪುದೆಂಬುದು; ಮುಡ್ಡಃ = ಮಾಣಿ ; ಮುಡ್ಡಿಃ = ನಡು.

ದಡ್ಡ—ಧಾರಣೇ, ತಾಳ್ಕೆಯೊಳ್ :
ದಡ್ಡತೀತಿ ತಾಳ್ದಪುದೆಂಬುದು ; ದಡ್ಡಃ = ಬುದ್ಧಿಹೀನಂ; ದಡ್ಡುಃ = ತರುಡು.

ಪಡ್ಡ—ಮದೇ, ಕೊರ್ಬಿನೊಳ್ :
ಪಡ್ಡತೀತಿ ಕೊರ್ಬಿದಪನೆಂಬುದು ; ಪಡ್ಡಃ = ಕೊರ್ಬಿದಂ ; ಪಡ್ಡಾ = ಜೌವನೆ.

ಬುಡ್ಡ—ಉದ್ಗಮನೇ, ಪೊಣ್ಮೆನೊಳ್ :
ಬುಡ್ಡತೀತಿ ಪೊಣ್ಮಿದಪುದೆಂಬುದು ; ಬುಡ್ಡಾ = ಬುಡ್ಡೆ.

ಮಡಿ—ಭೂಷಾಯಾಂ, ಸಿಂಗಾರದೊಳ್ :
ಮಂಡತೀತಿ ಸಿಂಗಾರಿಸಿದಪುದೆಂಬುದು ; ಮಂಡನಂ = ಒಡವೆ ; ಮಂಡಲಂ = ಬಟ್ಟೆತು ; ಮಂಡೂಕಃ = ಕಪ್ಪೆ.

ಕುಡಿ—ವೈಕಲ್ಯೇ, ವಿಜಾತಿಯೊಳ್ :
ಕುಂಡತೀತಿ ವಿಜಾತಿಯಾದಪನೆಂಬುದು; ಕುಂಡಃ = ತಂದೆಯಿರ್ದು ಮಿಂಡಂಗೆ ಹುಟ್ಟಿದಂ; ಕುಂಡಲಂ = ಕರ್ಣಾಭರಣಂ; ಕುಂಡಂ = ಗಡಿಗೆಯುಂ, ಕೊಳಸುಂ ; ಕುಂಡಾ = ಗುಡ್ಡ.

ಪಡಿ—ಧಾರಣೇ, ತಾಳ್ಕೆಯೊಳ್ :
ಪಂಡತೀತಿ ತಾಳ್ದಪುದೆಂಬುದು ; ಪಂಡಾ= ಬುದ್ಧಿ ; ಪಂಡಿತಃ = ಜಾಣಂ.

ಪಿಡಿ—ಧಾರಣೇ, ತಾಳ್ಕೆಯೊಳ್ :
ಪಿಂಡತೀತಿ ತಾಳ್ದಪುದೆಂಬುದು ; ಪಿಂಡಂ = ಮುದ್ದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಡಿ—ಆವರಣೇ, ಆವರಿಸುವಲ್ಲಿ :
ಅಂಡತೀತಿ ಆವರಿಸಿದಪುದೆಂಬುದು ; ಅಂಡಂ = ತತ್ತಿ ; ಅಂಡು = ಪೊರವಾರು.

ಭಡಿ—ಕುತ್ಸಾಯಾಂ, ಹಳಿತದೊಳ್ :
ಭಂಡತೀತಿ ಹಳಿದಪನೆಂಬುದು ; ಭಂಡಃ = ನಾಣಿಲಿ ; ಭಂಡುಃ = ನಾಣ್ಚಿಕೆ.

ಭಾಡಿ—ಆಧಾರೇ, ಆಸ್ಪದದೊಳ್ :
ಭಾಂಡತೀತಿ ಆಧಾರವಾದಪುದೆಂಬುದು ; ಭಂಡೀರಂ = ಬೆಡಗುಗಂ ; ಭಾಂಡಂ = ಮಡಕೆ.

ಲಡಿ—ಕೋಪೇ, ಕಿನಿಸಿನೊಳ್ ;
ಲಂಡತೀತಿ ಕಿನಿಸಿದಪನೆಂಬುದು ; ಲಂಡಃ = ಕೋಪಿ ; ಲಂಡಾ = ಕೋಪಿನಿ ; ಲಂಡಿ = ಕೋಪಿ.

ಚಡಿ—ತೈಕ್ಷ್ಣ್ಯೇ, ಕೂರಿತದೊಳ್ :
ಚಂಡತೀತಿ ಕೂರಿದನಾದಪುದೆಂಬುದು ; ಚಂಡಃ = ಕೂಳಂ ; ಚಂಡಿ, ಚಂಡಾ = ವರಟಿ.

ರಡಿ—ವ್ಯಭಿಚಾರೇ, ಪಾಣ್ಬೆನೊಳ್ :
ರಂಡತೀತಿ ವ್ಯಭಿಚರಿಸಿದಪಳೆಂಬುದು ; ರಂಡಾ = ಪಾಣ್ಬೆ.

ಯೇರಡಿ—ಸ್ನೇಹನೇ, ಮಣಕಿನೊಳ್ :
ಯೇರಂಡತೀತಿ ಮಣಕಾದಪುದೆಂಬುದು ; ಯೇರಂಡಃ = ಔಡಲಂ.

ಕಡಿ—ಮಾಂಸಪೃಥುಳೆ, ಅಡಗಿನ ತೊಳೆಯೊಳ್ :
ಕಂಡತೀತಿ ಅಡಗಾದಪುದೆಂಬುದು ; ಕಂಡಂ = ಅಡಗಿನ ತೊಳೆ ; ಕಂಡೂಃ = ತೀಂಟೆ.

ಕಾಡಿ—ಪರಿಛೇದೇ, ವಿಭಾಗದೊಳ್ :
ಕಾಂಡತೀತಿ ಪರಿಛೇದಿಸಿದಪುದೆಂಬುದು ; ಕಾಂಡಃ = ವಿಭಾಗಂ.

ತಡಿ—ಸಮೂಹೇ, ಮೊತ್ತದೊಳ್ :
ತಂಡತೀತಿ ಮೊತ್ತವಾದಪುದೆಂಬುದು ; ತಂಡುಃ = ಬಾನಿ ; ತಂಡಃ = ಸಮೂಹಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಡಿ, ರುಡಿ, ಮುಡಿ—ಖಂಡನೇ, ಕೊಯ್ತದೊಳ್ :
ಖಂಡತೀತಿ ಕೊಯ್ದಪುದೆಂಬುದು ; ಖಂಡಃ = ಮುರುಕು.
ರುಂಡತೀತಿ ಕತ್ತರಿಸಿದಪುದೆಂಬುದು ; ರುಂಡಃ = ಮೋಟು.
ಮುಂಡತೀತಿ ಬೋಳಿಸಿದಪುದೆಂಬುದು ; ಮುಂಡಂ = ಮೊಂಡು ; ಮುಂಡಾ = ಗಂಡನಿಲ್ಲದವಳ್ ; ಮುಂಡಿ = ಬೋಳತರಂ.

ತುಡಿ—ಭಕ್ಷಣೇ, ತೀನಿಯೊಳ್ :
ಭಿನತ್ತಿ, ಭಿನ್ತೆ = ಸೀಳ್ದಪಂ ; ಭಿಂದನ್, ಭೇದಕಃ, ಭೇದೀ, ಭೇತ್ತಾ, ಈ ೪ ಸೀಳ್ವಂ ; ಭಿತ್, ಭಿದಾ, ಭೇದನಂ, ಭೇದನೀಯಂ, ಭೇದಃ, ಭೇದ್ಯಂ, ಭೇತ್ತವ್ಯಂ, ಈ ೭ ಸೀಳು ; ಭಿತ್ತಿಃ = ಗೋಡೆ ; ಭಿತ್ತಂ = ಖಂಡಂ.

ಛಿದಿರ್—ದ್ವಿಧಾಕರಣೇ, ಒಂದನೆರಡಂ ಮಾಡುವಲ್ಲಿ :

ಛಿನತ್ತಿ, ಛಿಂತೆ = ಸೀಳ್ದಪಂ ; ಛಿತ್, ಛೇತ್ತಾ, ಛೇದಕಃ, ಛೇದೀ, ಛಿನ್ದನ್, ಈ ೫ ಸೀಳ್ವಂ ; ಛಿತ್ತಿಃ, ಛಿತ್ತಂ, ಛೇತ್ತವ್ಯಂ, ಛೇದನಂ, ಛೇದನೀಯಂ, ಛಿದಾ, ಛೇದ್ಯಂ, ಈ ೭ ಸೀಳ್ಕೆ.

ರಿಚಿರ್—ವಿರೇಚನೇ, ಪೊಣ್ಮೆಕೆಯೊಳ್ :

ರಿಣಕ್ತಿ, ರಿಙ್ತೆ = ಪೊಣ್ಮಿದಪಂ ; ರಿಂಚನ್, ರೇಚಕಃ, ರೇಕ್ತಾ, ರೇಚಃ, ರೇಚೀ, ಈ ೫ ಪೊಣ್ಮುವಂ ; ರೇಚನಂ, ರೇಚನೀಯಂ, ರೇಚ್ಯಂ, ರಿಕ್ತಿಃ, ರಿಕ್ತಂ, ರೇಕ್ತವ್ಯಂ, ಈ ೬ ಪೊಣ್ಮೆಕೆ.

ವಿಚಿರ್—ಪೃಥಗ್ಭಾವೇ, ಬೇರೆಯಹಣದೊಳ್ :

ವಿನಕ್ತಿ, ವಿಙ್ತೆ = ಬೇರಾದಪಂ ; ವಿಂಚನ್, ವೇಚಕಃ, ವೇಚೀ, ವೇಕ್ತಾ, ವಿಕ್ತಿಃ, ವಿಕ್ತವಾನ್, ವೇಕೀ, ಈ ೭ ಬೇರಾದಪಂ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಕ್ತಂ, ವಿಕ್ತಿಃ, ವೇಚನಂ, ವೇಚನೀಯಂ, ವೇಚ್ಯಂ, ವೇಕಃ, ಈ ೬ ಬೇರೆಯಹಣಂ.

ಕ್ಷುದಿರ್—ಸಂಪೇಷಣೇ, ಅರೆತದೊಳ್ :

ಕ್ಷುಣತ್ತಿ, ಕ್ಷುಂತ್ತೇ = ಅರೆದಪಂ ; ಕ್ಷುಂದನ್, ಕ್ಷುದಾನಃ, ಕ್ಷೋತ್ತಾ, ಕ್ಷೋದಕಃ, ಕ್ಷುತ್ತಃ, ಕ್ಷುತವಾನ್, ಈ ೬ ಅರೆವಂ ; ಕ್ಷುತ್, ಕ್ಷೋದನಂ, ಕ್ಷೋದನೀಯಂ, ಕ್ಷೋತ್ತವ್ಯಂ, ಕ್ಷುತ್ತಂ, ಕ್ಷುತ್ತಿಃ, ಕ್ಷೋದ್ಯಂ, ಈ ೭ ಅರೆತಂ.

ಯುಜಿರ್—ಯೋಗೇ, ಕೂಟದೊಳ್ :

ಯುನಕ್ತಿ, ಯುಙ್ತ್ತೇ = ಕೂಡಿಧಪಂ ; ಯುಂಜನ್, ಯೋಕ್ತಾ, ಯೋಜಕಃ, ಯೋಜೀ, ಯುಕ್ತಃ, ಯುಕ್ತವಾನ್, ಈ ೬ ಕೂಡುವಂ ; ಯುಕ್ತಂ, ಯುಕ್ತಿಃ, ಯೋಗಃ, ಯೋಗ್ಯಂ, ಯೌಗಿಕಂ, ಯೋಜ್ಯಂ, ಯೋಜನೀಯಂ, ಈ ೭ ಕೂಟಂ ; ಯೋಜನಂ = ಗಾವುದಂ.

ಉಛೃದಿರ್—ದೀಪ್ತಿ ದೇವನಯೋಃ, ಬೆಳಕಿನೊಳಂ, ಆಟದೊಳಂ :

ಛೃಣತ್ತಿ, ಛೃನ್ತೇ = ಬೆಳಕಾದಪಂ, ಆಡಿದಪಂ ; ಛೃತ್ತಃ, ಛೃತ್ತವಾನ್, ಛರ್ದನ್, ಛರ್ದಾನಃ, ಛರ್ತಾ, ಛರ್ತಕಃ, ಈ ೬ ಬೆಳಕುಗನುಂ, ಆಡುವನುಂ ; ಛೃತ್ತಿಃ, ಛೃತ್ತಂ, ಛರ್ದನಂ, ಛರ್ದನೀಯಂ, ಛರ್ದಿಃ, ಈ ೫ ಬೆಳಕು ; ಛರ್ದಿಃ = ವಾಂತಿ.

ಉತೃದಿರ್—ಹಿಂಸಾನಾದರಯೋಃ, ಕೊಲೆಯೊಳಂ, ಅಪ್ರೀತಿಯೊಳಂ :

ತೃಣತ್ತಿ, ತೃಂತೆ = ಕೊಂದಪಂ, ಅಪ್ರೀತಿಬಟ್ಟಪಂ ; ತರ್ದನ್, ತರ್ದಾನಃ, ತರ್ದಕಃ, ಈ ೩ ಕೊಲ್ವನುಂ, ಅಪ್ರೀತಿಬಡುವನುಂ ; ತರ್ದುಃ = ತದ್ದು ; ತರ್ದನಂ, ತರ್ದನೀಯಂ, ತೃದ್, ತೃತ್ತಂ, ತೃತ್ತಿಃ, ತರ್ತವ್ಯಂ, ಈ ೬ ಕೊಲೆಯುಂ, ಅಪ್ರೀತಿಯುಂ.

ಕೃತೀ—ವೇಷ್ಟನೇ, ಸುತ್ತಿನೊಳ್ :

ಕೃಣತ್ತಿ, ಕೃಂತೇ = ಸುತ್ತಿದಪಂ, ಕತ್ತರಿಸಿದಪಂ ; ಕೃತ್ತಃ, ಕೃತ್ತವಾನ್, ಕರ್ತಾ, ಕೃತಕಃ, ಕೃತ್, ಈ ೫ ಕತ್ತರಿಸುವಂ ; ಕೃತ್ತಂ, ಕೃತ್ತಿಃ, ಕರ್ತನಂ, ಕರ್ತನೀಯಂ, ಈ ೪ ಕತ್ತರಿಸುವುದು ; ಕರ್ತರೀ = ಕತ್ತರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಷ್ಲೃ—ವಿಶೇಷಣೇ, ಉಳಿಮೆಯೊಳ್ :
ಶಿನಷ್ಟಿ = ಉಳಿದಪಂ ; ಶಿಷ್ಟಃ, ಶಿಷ್ಟಕಃ. ಶಿಷ್ಯಃ, ಈ ೩ ಚಿಟ್ಟಿಗಂ ; ಶಿಷ್ಟಿಃ, ಶಿಷ್ಟಂ, ಶೇಷಣಂ, ಶೇಷಣೀಯಂ, ಈ ೪ ಉಳಿಮೆ ; ಶೇಷಃ = ಸಾವಿರವೆಡೆಯ ಹಾವು.

ಪಿಷ್ಲೃ—ಸಂಚೂರ್ಣನೇ, ಹುಡಿಯೊಳ್ :
ಪಿನಷ್ಟಿ = ಚೂರ್ಣಿಸಿದಪಂ ; ಪಿಷ್ಟಃ, ಪಿಷ್ಟವಾನ್, ಪೇಷಕಃ, ಈ ೩ ಚೂರ್ಣಿಸುವಂ ; ಪಿಷ್ಟಂ, ಪಿಷ್ಟಿಃ, ಪೇಷಣಂ, ಪೇಷಣೀಯಂ, ಪೇಷ್ಯಂ, ಈ ೫ ಚೂರ್ಣಂ.

ಭಂಜೋ—ಆಮರ್ದನೇ, ಮರ್ದಿಸುವಲ್ಲಿ :
ಭನಕ್ತಿ = ಭಂಗಿಸಿದಪಂ ; ಭಕ್ತಃ, ಭಕ್ತವಾನ್, ಭಾಕ್, ಭಜಕಃ, ಭಾಜಕಃ, ಈ ೫ ಭಂಜಿಸುವಂ ; ಭಂಜಿಕಾ, ಭಂಜಾ, ಈ ೨ ಬೊಂಬೆ; ಭಂಗಃ = ಬನ್ನವುಂ, ತೆರೆಯುಂ ; ಭಂಗೀ = ರೀತಿಯುಂ, ಸಿದ್ಧಪತ್ರೆಯುಂ.

ಭುಜ—ಪಾಲನಾಭ್ಯವಹಾರಯೋಃ, ಪೊರೆತದೊಳಂ, ಊಟದೊಳಂ :
ಭುನಕ್ತಿ, ಭುಙ್ಕ್ತೆ = ಪೊರೆದಪಂ, ಉಂಡಪಂ ; ಭುಕ್, ಭೋಕ್ತಾ, ಭೋಜಕಃ, ಭುಕ್ತಃ, ಭುಕ್ತವಾನ್, ಭೋಗೀ, ಈ ೬ ಭೋಗಿಸುವಂ ; ಭುಕ್ತಿಃ, ಭುಕ್ತಂ, ಭೋಗಃ, ಭೋಗ್ಯಂ, ಭೋಕ್ತವ್ಯಂ, ಭೋಜನಂ, ಭೋಜನೀಯಂ, ಈ ೭ ಹೊರೆತವುಂ, ಊಟವುಂ ; ಕಾಂಭೋಜಃ = ನಾಡು ; ಭೋಜಃ = ರಾಜಂ ; ಭುಜಂ = ತೋಳ್ದಲೆ.

ತೃಹ, ಹಿಸಿ—ಹಿಂಸಾಯಾಂ, ಕೊಲೆಯೊಳ್ :
ತೃಣೇಢಿ = ಕೊಂದಪಂ ; ತೃಟ್, ತೃಢಃ, ತೃಢವಾನ್, ಈ ೩ ಕೊಲೆಗಂ ; ತರ್ಹಣಂ, ತರ್ಹಣೀಯಂ, ಈ ೨ ಕೊಲೆ.
ಹಿನಸ್ತಿ = ಬಡಿದಪಂ ; ಹಿಂಸಕಃ = ಕೊಲೆಗಾರಂ ; ಹಿಂಸಂ, ಹಿಂಸನೀಯಂ, ಹಿಂಸಾ, ಈ ೩ ಕೊಲೆ.

ಉಂದೀ—ಕ್ಲೇದನೇ, ಬವರದೊಳ್ :
ಉನತ್ತಿ = ಬವರಂಬಟ್ಟಪಂ ; ಉತ್ತಃ, ಉತ್ತಿಃ, ಈ ೨ ಬವರಂ ; ಓದನಂ = ಕೂಳ್ ; ಉದಕಂ = ನೀರ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂಜೂ—ವ್ಯಕ್ತಿ ಮ್ರಕ್ಷಣ ಕಾನ್ತಿಗತಿಷು, ಸ್ಪಷ್ಟದೊಳಂ, ಕೋಮಲದೊಳಂ, ಕಾಂತಿಯೊಳಂ, ಗತಿಯೊಳಂ :

ಅನಕ್ತಿ = ಸ್ಪಷ್ಟವಾದಪಂ ; ಅಕ್ತಃ, ಅಕ್ತವಾನ್, ಅಂಜಕಃ, ಈ ೩ ಸ್ಪಷ್ಟನಾದಂ ; ಅಕ್ತಿಃ, ಅಕ್ತಂ, ಅಕ್ತವ್ಯಂ, ಈ ೩ ಸ್ಪಷ್ಟಂ ; ಅಂಜನಃ = ಪರ್ವತವುಂ, ದಿಗ್ಗಜವುಂ ; ಅಂಜನಂ = ಕರ್ಪೂರ ; ಅಂಜನಾ = ದಿಗ್ಗಜವುಂ, ಮಾಯೆಯುಂ ; ಅಂಜನಾವತೀ = ದಿಗ್ಗಜವುಂ, ಜ್ಯೋತಿಷ್ಮತೀಲತೆಯುಂ ; ನಿರಂಜನಃ = ಪರಶಿವಂ.

ತಂಚು—ಸಂಕೋಚನೇ, ಮುಗುಳ್ತೆಯೊಳ್ :

ತನಕ್ತಿ, ತಙ್ಕ್ತೆ = ಮುಗುಳ್ದಪಂ ; ತಕ್ತಃ, ತಕ್ತವಾನ್, ತಕ್ತ್ವಾ, ತಂಚನ್, ತಂಚಾನಃ, ತಂಚಕಃ, ತಾಕ್ತಃ, ಈ ೭ ಮುಗುಳ್ದಂ ; ತಕ್ತಿಃ, ತಕ್ತಂ, ತಂಚನಂ, ತಂಚನೀಯಂ, ತಂಚಂ, ಈ ೫ ಮುಗುಳ್.

ಓವಿಜೀ—ಭಯಚಲನಯೋಃ, ಅಂಜಿಕೆಯೊಳಂ, ಹಂದಿಕೆಯೊಳಂ :

ವಿನಕ್ತಿ, ವಿಙ್ಕ್ತೆ = ಅಂಜಿದಪಂ, ಹಂದಿದಪಂ ; ವಿಕ್ತಃ, ವಿಕ್ತವಾನ್, ವೇಕ್ತ್ವಾ, ಈ ೩ ಅಂಜುವಂ ; ವೇಜನಂ, ವೇಜನೀಯಂ, ವೇಜ್ಯಂ, ವೇಗಂ, ವಿಕ್ತಿಃ, ವಿಕ್ತಂ, ಈ ೬ ಅಂಜಿಕೆಯುಂ, ಹಂದಿಕೆಯುಂ.

ವೃಜೀ—ವರ್ಜನೇ, ತೊಲಗಿಕೆಯೊಳ್ :

ವೃಣಕ್ತಿ, ವೃಙ್ಕ್ತೆ = ತೊಲಗಿದಪಂ ; ವೃಕ್ತಃ, ವೃಕ್ತವಾನ್, ವರ್ಜಕಃ, ವರ್ಕ್ತ್ವಾ, ಈ ೪ ತೊಲಗುವಂ; ವರ್ಜನಂ, ವರ್ಜನೀಯಂ, ವರ್ಜ್ಯಂ, ವೃಕ್ತಂ, ವೃಕ್ತಿಃ, ವರ್ಕ್ತವ್ಯಂ, ಈ ೬ ತೊಲಗಿಕೆ ; ವೃಜಿನಂ = ಪಾಪಂ ; ವರ್ಗಃ = ಬಗೆ.

ವೃಚೀ—ಹಿಂಸಾಯಾಂ, ಕೊಲೆಯೊಳ್ :

ವೃಣಕ್ತಿ, ವೃಙ್ಕ್ತೆ = ಕೊಂದಪಂ ; ವೃಕ್ತಃ, ವೃಕ್ತವಾನ್, ವರ್ಕ್ತ್ವಾ, ವರ್ಚಕಃ, ಈ ೪ ಕೊಲ್ವಂ ; ವರ್ಚಸ್ = ಪ್ರಭಾವಂ ; ವೃಕ್ತಂ, ವೃಕ್ತಿಃ, ವರ್ಚನಂ, ವರ್ಚನೀಯಂ, ವರ್ಚ್ಯಂ, ಈ ೫ ಕೊಲೆ ; ವೃಕಃ = ತೋಳಂ ; ವರ್ಚಸ್ವೀ = ಪ್ರಭಾವವಂತಂ.

ಪೃಚೀ—ಸಂಪರ್ಕೇ, ಕೂಟದೊಳ್ :

ಪೃಣಕ್ತಿ, ಪೃಙ್ಕ್ತೆ = ಕೂಡಿದಪಂ; ಪೃಕ್ತಃ, ಪೃಕ್ತವಾನ್, ಪರ್ಕ್ತ್ವಾ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರ್ಚಕಃ, ಈ ೪ ಕೂಡುವಂ ; ಪೃಕ್ತಿಃ, ಪೃಕ್ತಂ, ಪರ್ಚನಂ, ಪರ್ಚನೀಯಂ, ಪರ್ಚ್ಯಂ, ಪರ್ಕ್ತವ್ಯಂ, ಈ ೬ ಕೂಟಂ.

ಅಪೃಕ್ತ ಏಕವರ್ಣ ಪ್ರತ್ಯಯಃ—ಏಕವರ್ಣದ—ಒಂದು ವರ್ಣದ ಅಕ್ಕರದ, ಪ್ರತ್ಯಯಃ—ಪ್ರತೀತಿಃ, ಅಪೃಕ್ತಃ—ಧಾತುವಿನತ್ತಣಿಂ ಬಂದರ್ಥವುಂ ಕೊಟ್ಟು ಪೋಪುದು ; ಕ್ವಿಪ್ವಿಣಾ ಸರ್ವಧಾತುಭ್ಯಃ—ಎಲ್ಲಾ ಧಾತುಗಳತ್ತಣಿಂ ಕ್ವಿಪ್, ವಿಣ್ ಎಂಬುವು ಬರ್ಕುಂ ; ಪಾಃ, ದಾಃ, ಧಾಃ, ಸೋಃ, ಹೃತ್, ಕೃತ್, ಜಿತ್, ವಾಕ್, ಭಾಕ್, ವಾತ್, ಗಾತ್.

ಞಿ ಇಂಧೀ—ದೀಪ್ತೌ, ಬೆಳಕಿಸೊಳ್ :

ಇಂಧೆ = ಬೆಳಕಿದಪಂ ; ಅಗ್ನೀತ್ = ಬೆಂಕಿಯುಂ ಹೊತ್ತಿಸುವಂ ; ಅಗ್ನೀಧ್ರಂ = ಬೆಂಕಿಯುಂ ಹೊತ್ತಿಸುವನ ಕೆಲಸಂ ; ಇದ್ಧಃ, ಇದ್ಧವಾನ್, ಇಂಧಕಃ, ಈ ೩ ಬೆಳಕುಗಂ ; ಇಂಧನಂ, ಇಂಧನೀಯಂ, ಈ ೨ ಬೆಳಕು ; ಇಂಧನಂ = ಕಟ್ಟಿಗೆ.

ಖಿದ—ದೈನ್ಯೇ, ಮಿಡುಕಿಸೊಳ್ :

ಖಿನ್ತೆ = ಮಿಡುಕಿದಪಂ ; ಖೇದಾನಃ, ಖೇತ್ತಾ, ಖೇದಕಃ, ಈ ೩ ಮಿಡುಕುವಂ ; ಖೇದಃ, ಖೇದನಂ, ಖೇದನೀಯಂ, ಖೇದ್ಯಂ, ಖಿತ್ತಂ, ಖಿತ್ತಿಃ, ಈ ೬ ಮಿಡುಕು.

ವಿದ—ವಿಚಾರಣೇ, ಪರಂಬರಿಕೆಯೊಳ್ :

ವಿನ್ತೆ = ಪರಂಬರಿಸಿದಪಂ ; ವಿತ್ತಃ, ವಿತ್ತವಾನ್, ವೇದಕಃ, ವೇದೀ, ವೇತ್ತಾ, ಈ ೫ ಪರಂಬರಿಸುವಂ ; ವಿತ್ತಂ = ದ್ರವ್ಯಂ ; ವಿತ್ತಿಃ, ವೇದನಂ, ವೇದನೀಯಂ, ವೇದ್ಯಂ, ಈ ೪ ಪರಂಬರಿಕೆ ; ವೇದಃ = ವಿಚಾರಂ.

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತ್ರಿತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯನಂಬ್ಯಣಗುರುಕರಜಾತಸ್ಯ ಸಹ್ಯಾದ್ರಿಕಟಕಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ ಚನ್ನವೀರಕವಿಕೃತೌ ಕಾಶಕೃತ್ಸ್ನಧಾತುಕರ್ಣಾಟ ಟೀಕಾಯಾಂ ಉಭಯಭಾಷಾ ಲೇಖಕ ಪಾಠಕ ಶ್ರೋತೃಣಾಂ ಸಂಸ್ಕೃತಾರ್ಥಪ್ರಕಾಶಿಕಾ ಭೂಯಾತ್

ಇತಿ ರುಧಾದಿಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನಾದಿಃ

ತನು—ವಿಸ್ತಾರೇ, ಬಿತ್ತರದೊಳ್ :

ತನಾದೇರುವಿಕರಣಃ—ತನುಪ್ರಭೃತಿಗೆ ಉವಿಕರಣಮುಕ್ಕುಂ ಸಾರ್ವಧಾತುಕಂ ಪರ ಮಾಗೆ.

ತನೋತಿ, ತನುತೆ = ಬಿತ್ತರಿಸಿದಪಂ ; ತನ್ವನ್, ತನ್ವಾನಃ, ತನ್ನಃ, ತನ್ನವಾನ್, ತನ್ನಾ, ಈ ೫ ಬಿತ್ತರಿಸುವಂ ; ತನಯಃ = ಮಗಂ ; ತನ್ವೀ = ಎಳೆಯಳ್ ; ತನುಃ, ತನೂಃ, ಈ ೨ ಮೆಯ್ ; ತಾನ್ = ಅವಂ ; ತಾನಂ = ರಾಗಭೇದಂ ; ತಾನಕಂ = ಶಸ್ತ್ರ ವಿದ್ಯಾಭೇದಂ ; ತಂತಿಃ, ತಂತ್ರೀ, ಈ ೨ ಸರಿಗೆ ; ತಂತುಃ = ನೂಲ್ ; ತಂತುವಾಯಃ = ಜೇಡನ ಪುಳುವುಂ, ಜೇಡನುಂ ; ತತಂ = ತಂತಿವಾದ್ಯಂ ; ವಿತತಂ = ಚರ್ಮವಾಯಂ ; ತಾಂತಂ = ಚರ್ಮವಾಯಂ, ಏಕಾಂತಂ ; ತತಿಃ = ಋತುಕಾಲಂ ; ತಾತಃ = ತಂದೆ ; ತನಿಃ = ಹಾಲಮುಜ್ಜನಂ ; ತನಕಂ = ಅವಧಿ ; ತನನಂ, ತನನೀಯಂ, ತನ್ಯಂ, ತಾನ್ಯಂ, ತಂತವ್ಯಂ, ಈ ೫ ಬಿತ್ತರಂ ; ತತ್ = ಅದು ; ಸಃ = ಅವಂ ; ಸಾ = ಅವಳ್ ; ಸಂತಾನಃ = ಕಲ್ಪವೃಕ್ಷಂ ; ಸಂತಾನಂ, ಸಂತತಿಃ, ಈ ೨ ಬಳಿ ; ತಂತ್ರಂ = ಆಗಮಂ.

ಣನು—ಶಂಕಾಯಾಂ, ವಿಚಾರದೊಳ್ :

ನನೋತಿ, ನನುತೆ = ವಿಚಾರಿಸಿದಪಂ ; ನನ್ಃ, ನಂತಃ, ನಂತವಾನ್, ನಂತಾ, ನಾನ್, ಈ ೫ ವಿಚಾರಿಸುವಂ ; ನಾನಾ = ವೊಗ್ಗೆ ; ನನು = ಅಲಾ ; ನಾನುಃ = ಕಂಠಾಭರಣಂ ; ನನ್ಯಂ, ನಾನ್ಯಂ, ನಂತಿಃ, ನಂತಂ, ನಂತವ್ಯಂ, ನನನಂ, ನನನೀಯಂ, ನನಕಂ, ನಾನಕಂ, ನಾನಂ, ಈ ೧೦ ವಿಚಾರಂ.

ಣೀಸು—ಸಂಬೋಧನೇ, ಇದಿರೊಳ್ :

ನೀನೋತಿ, ನೀನುತೆ = ಇದಿರಿಸಿದಪಂ ; ನೀಂತಃ, ನೀಂತವಾನ್, ನೀನಃ, ನೀನ್, ನೀನುಃ, ನೀಂತಾ, ಈ ೬ ಇದಿರಿಸುವಂ ; ನೀನನಂ, ನೀನನೀಯಂ, ನೀಂತವ್ಯಂ, ನೀನ್ಯಂ, ನೀಂತಂ, ನೀಂತಿಃ, ಈ ೬ ಇದಿರ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಣೂಸು—ನಿಶ್ಚಯೇ, ನಿಜದೊಳ್ :

ಸೂನೋತಿ, ಸೂನುತೆ = ನಿಶ್ಚಯಿಸಿದಪಂ ; ಸೂಂತಃ, ಸೂಂತವಾನ್, ಸೂನಕಃ, ಸೂಂತಾ, ಈ ೪ ನಿಶ್ಚಯಿಸುವಂ ; ಸೂನಂ, ಸೂನಸಂ, ಸೂನನೀಯಂ, ಸೂಂತಂ, ಸೂಂತಿಃ, ಸೂಂತವ್ಯಂ, ಸೂನ್ಯಂ, ಸೌನ್ಯಂ, ಈ ೮ ದಿಟಂ ; ಸೂನಾ = ಎಣ್ಣೆ.

ಷಣು—ದಾನೇ, ಈವಿಯೊಳ್ :

ಸನೋತಿ, ಸನುತೆ = ಇತ್ತಪಂ ; ಸಂತಃ, ಸಂತವಾನ್, ಸಂತಾ, ಈ ೩ ಈವಂ; ಸನಕಃ, ಸನಾತನಃ, ಸನತ್ಕುಮಾರಃ, ಸನತ್ಸುಜಾತಃ, ಈ ೪ ಬ್ರಹ್ಮನ ಮಾನಸಪುತ್ರರ್; ಸಂತಂ, ಸಂತಿಃ, ಸನನಂ, ಸನನೀಯಂ, ಸನ್ಯಂ, ಸಾನ್ಯಂ, ಸಂತವ್ಯಂ, ಸನಂ, ಸನೀ, ಸನುಂ, ಸಾನಂ, ಈ ೧೧ ಈವಿ ; ಸಾನುಃ = ಬೆಟ್ಟದ ತಪ್ಪಲ್ ; ಸಾನೀ = ತಾಯಿ.

ಕ್ಷಣು, ಕ್ಷಿಣು—ಹಿಂಸಾಯಾಂ, ಕೊಲೆಯೊಳ್ :

ಕ್ಷಣೋತಿ, ಕ್ಷಣುತೆ = ಕೊಂದಪಂ ; ಕ್ಷಣಿಕಃ = ಕೊಲೆಗಂ ; ಕ್ಷಣಃ = ಕಾಲದ ಭೇದಂ.

ಕ್ಷಿಣೋತಿ, ಕ್ಷಿಣುತೆ = ಬಡಿದಪಂ ; ಕ್ಷಿಣಕಃ = ಬಡಿವಂ ; ಕ್ಷಿಣಂ = ಬಡಿತಂ.

ಋಣು—ದುರ್ಗತೌ, ಕೆಟ್ಟ ನಡೆಯೊಳ್ :

ಋಣೋತಿ, ಋಣುತೆ = ಕೆಟ್ಟು ನಡೆದಪಂ; ಋಣಕಃ = ಸಾಲಗಂ ; ಋಣಂ = ಸಾಲಂ.

ತೃಣು—ಅದನೇ, ತಿನಿಸಿನೊಳ್ :

ತೃಣೋತಿ, ತೃಣುತೆ = ತಿಂದಪಂ; ತೃಣಕಃ = ತಿನಿಸುಗಂ; ತೃಣಂ = ಪುಲ್.

ಘೃಣ—ದೀಪ್ತೌ, ಬೆಳಕಿನೊಳ್ :

ಘೃಣೋತಿ, ಘೃಣುತೆ = ಬೆಳಕಾದಪಂ ; ಘೃಣಕಃ = ಬೆಳಕುಗಂ ; ಘೃಣಃ = ಬೆಳಕು ; ಘೃಣಾ = ಕಾರುಣ್ಯಂ ; ಘೃಣಃ = ಹುಳು.

ಚಿಣು—ಶಬ್ದೇ, ದನಿಯೊಳ್ :

ಚಿಣೋತಿ, ಚಿಣುತೆ = ಕೂಗಿದಪಂ ; ಚಿಣಕಃ = ಕೂಗುಗಂ ; ಚಿಣ್, ಚಿಣೀ, ಚಿಣಂ, ಈ ೩ ಕೂಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಛಿಣು—ವೀಣಾರವೇ, ವೀಣೆಯ ದನಿಯೊಳ್ :

ಛಿಣೋತಿ, ಛಿಣುತೇ = ವೀಣೆಯಂತೆ ಕೂಗಿದಪಂ ; ಛಿಣನ್, ಛಿಣಾನಃ, ಛಿಣಕಃ, ಈ ೩ ವೀಣಾಧ್ವನಿವಂತಂ ; ಛಿಣ್, ಛಿಣನಂ, ಛಿಣನೀಯಂ, ಛಿಣುಃ, ಛಿಣಿಃ, ಈ ೫ ವೀಣಾಧ್ವನಿ.

ಘಿಣು—ಥಿಂಗಧ್ವನೌ, ಜಂಗಿನ ಸುಡಿಯೊಳ್ :

ಘಿಣೋತಿ, ಘಿಣುತೇ = ಜಂಗಿಸಂತೆ ಸುಡಿದಪಂ ; ಘಿಣಕಃ = ಜಂಗಿನ ಸುಡಿವಂತಂ ; ಘಿಣ್, ಘಿಣಃ, ಘೇಣಃ, ಈ ೩ ಜಂಗಿನ ಸುಡಿ.

ಘಣು—ಘಂಟಾನಾದೇ, ಗಂಟೆಯ ದನಿಯೊಳ್ :

ಘಣೋತಿ, ಘಣುತೇ = ಗಂಟೆಯಂತೆ ಸುಡಿದಪಂ ; ಘಣನ್, ಘಣಾನಃ, ಘಣಕಃ, ಈ ೩ ಗಂಟೆಯ ದನಿವಂತಂ.

ಡುಕೃಞ್—ಕರಣೇ, ಮಾಟದೊಳ್ :

ಕರೋತಿ, ಕುರುತೇ= ಮಾಡಿದಪಂ ; ಕುರ್ವನ್, ಕುರ್ವಾಣಃ, ಕರ್ತಾ, ಈ ೩ ಮಾಡುವಂ ; ಕರೀ = ಗಂಡಾನೆ ; ಕರಿಣೀ, ಕರೇಣುಃ, ಈ ೨ ಹೆಣ್ಣಾನೆ ; ಕರಃ = ಹಸ್ತವುಂ, ಕಿರಣವುಂ ; ಕಾರುಃ, ಕಾರೀ, ಕಾರಕಃ, ಈ ೩ ಮಾಡಿಸುಪಂ ; ಕರಣಂ = ಸಾಧಕತಮಂ ; ಕಾರಣಂ = ದೂಸರ್ ; ಕೃತಿಃ = ಮಾಟಂ ; ಕೃತಂ = ಮಾಡಲ್ಪಟ್ಟುದು ; ಕೃತ್ಯಂ = ಕೆಲಸಂ ; ಕಾರ್ಯಂ = ಪ್ರಯೋಜನಂ ; ಕಾರಿತಂ = ಮಾಡಿಸಲ್ಪಟ್ಟುದು ; ಕರ್ಮನ್ = ಮಾಡುವಿಜ್ಜೆಯುಳ್ಳನ ಕೆಲಸಂ ; ಆಕಾರಣಾ = ಕರೆತಂ ; ಆಕಾರಿತಂ = ಕರೆಯಲ್ಪಟ್ಟುದು ; ಆಕೃತಿಃ, ಆಕಾರಃ, ಈ ೨ ಪರಿಜು ; ಸಂಸ್ಕೃತಂ = ಸಗ್ಗಿಗರ ಮಾತು ; ಪ್ರಾಕೃತಂ = ಸಗ್ಗದ ಪೆಣ್ಗಳ ಮಾತು.

ವನು—ಯಾಚನೇ, ಬೇಡುಗೆಯೊಳ್ :

ವನೋತಿ, ವನುತೇ = ಬೇಡಿದಪಂ ; ವನ್ವನ್, ವನ್ವಾನಃ, ವಂತಾ, ವನಕಃ, ಈ ೪ ಬೇಡುವಂ ; ವನನಂ, ವನನೀಯಂ, ವಂತವ್ಯಂ, ವಂತಂ, ವಂತಿಃ, ಈ ೫ ಬೇಡುಗೆ ; ವನಂ = ನೀರುಂ, ಕಾಡುಂ ; ವನ್ಯಂ = ವನಫಲವುಂ, ನೀರುಫಲವುಂ ; ವಾನಂ = ಮಳೆ ; ವನೀ = ಯಾನಾದಿ(ಡಿ) ; ವಾನರಃ = ಮಂಗಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನು—ಅವಬೋಧನೇ, ತಿಳುವಿನೊಳ್ :
ಮನೋತಿ, ಮನುತೇ = ತಿಳಿದಪಂ ; ಮನ್ವನ್, ಮನ್ವಾನಃ, ಮಂತಾ, ಮನಕಃ, ಮಂತಃ, ಮಂತವಾನ್, ಈ ೭ ತಿಳಿದಂ ; ಮನುಃ = ದೇವ ಜಾತಿಯನುಂ, ಮಂತ್ರವುಂ ; ಮಂತ್ರಃ = ಜಪ್ಯಂ ; ಮಂತ್ರೀ = ನಿಯೋಗಿ ; ಆಮಂತ್ರಣಂ, ಆಮಂತ್ರಣೀಯಂ, ಈ ೨ ಅಭಿ ಮುಖೀಕರಣಂ.

ಯನು—ಉದ್ಧಾರೇ, ಉದ್ಧರಣೆಯೊಳ್ :
ಯನೋತಿ, ಯನುತೇ = ಉದ್ಧರಿಸಿದಪಂ ; ಯನ್ವನ್, ಯನ್ವಾನಃ, ಯನಕಃ, ಯನ್ತಾ, ಈ ೪ ಉದ್ಧರಿಸುವಂ ; ಯಂತ್ರಂ = ಉದ್ಧರಣೆ ; ಯಂತ್ರಣಂ = ಪ್ರೇರಣೆ ; ಯಾನಂ = ವಾಹನಂ.

ಅನು—ಧಾರಣೇ, ತಾಳ್ವೆಯೊಳ್ :
ಅನೋತಿ, ಅನುತೇ = ತಾಳ್ದಪಂ ; ಅನ್ವನ್, ಅನ್ವಾನಃ, ಅನಕಃ, ಅಂತಾ, ಈ ೪ ತಾಳ್ವಂ ; ಅಂತ್ರಂ = ಕರುಳ್.

ಕನು—ಶೋಭಾಯಾಂ, ಪ್ರಕಾಶದೊಳ್ :
ಕನೋತಿ, ಕನುತೇ = ಪ್ರಕಾಶಿಸಿದಪಂ ; ಕನ್ವನ್, ಕನ್ವಾನಃ, ಕಂತಾ, ಕಂತಃ, ಕಂತವಾನ್, ಈ ೫ ಪ್ರಕಾಶಿಸುವಂ ; ಕನಕಂ = ಚಿನ್ನಂ ; ಕಂತುಃ = ಅವಧಿ ; ಕಂತಿಃ = ಪ್ರಕಾಶವತಿ ; ಕನನಂ, ಕನನೀಯಂ, ಕಂತ್ರಂ, ಕನ್ಯಂ, ಕಾನ್ಯಂ, ಕಾನಂ, ಕನಂ, ಈ ೭ ಪ್ರಕಾಶಂ.

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತಿತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯನಂಬ್ಯಣಗುರುಕರಜಾತಸ್ಯ ಸಹ್ಯಾದ್ರಿಕಟಕಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ ಚನ್ನವೀರಕವಿಕೃತೌ ಕಾಶಕೃತ್ಸ್ನಧಾತುಕರ್ಣಾಟಟೀಕಾಯಾಂ ಉಭಯಭಾಷಾ ಲೇಖಕ ಪಾಠಕ ಶ್ರೋತೄಣಾಂ ಸಂಸ್ಕೃತಾರ್ಥಪ್ರಕಾಶಿಕಾ ಭೂಯಾತ್

ಇತಿ ತನಾದಿಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರ್ಯಾದಿಃ

ಡುಕ್ರೀಞ್—ದ್ರವ್ಯವಿನಿಮಯೇ, ಬೆಲೆಯೊಳ್ :

ಕ್ರೀಣಾತಿ = ಬಿಕ್ಕಪಂ ;

ನ, ಆ, ಈ ಆತ್ಮನೇಪದೇ—ನಃ = ನಾವಿಕರಣದ, ಆ = ಆಕಾರಂ, ಈ = ಈಕಾರ ಮಕ್ಕುಂ ಆತ್ಮನೇಪದಂ ಪರಮಾಗೆ.

ಕ್ರೀಣೀತೆ = ಕೊಂಡಪಂ ; ಕ್ರೀತಃ, ಕ್ರೀತವಾನ್, ಕ್ರಯನ್, ಕ್ರಯಮಾಣಃ, ಕ್ರೇತಾ, ಈ ೫ ಮಾರುವಂ ; ಕ್ರಯಃ, ಕ್ರಯ್ಯಃ, ಕ್ರೇಯಂ, ಕ್ರೇತವ್ಯಂ, ಕ್ರಯಣಂ, ಕ್ರಯಣೀಯಂ, ಕ್ರೀತಂ, ಕ್ರೀತಿಃ, ಈ ೮ ಬೆಲೆ.

ಪ್ರೀಞ್—ತರ್ಪಣೇ, ಕಾಂತೌಚ, ತಣಿವಿನೊಳಂ, ಬೆಳಕಿನೊಳಂ :

ಪ್ರೀಣಾತಿ, ಪ್ರೀಣೀತೆ = ತಣಿದಪಂ, ಬೆಳಗಿದಪಂ ; ಪ್ರೀತಃ, ಪ್ರೀತವಾನ್, ಈ ೨ ತಣಿದಂ ; ಪ್ರೀತಿಃ, ಪ್ರೇಮನ್, ಈ ೨ ತಣಪು.

ಶ್ರೀಞ್—ಪಾಕೇ, ಅಡುಗೆಯೊಳ್ :

ಶ್ರೀಣಾತಿ, ಶ್ರೀಣೀತೆ = ಅಟ್ಟಪಂ ; ಶ್ರೀತಃ, ಶ್ರೀತವಾನ್, ಈ ೨ ಅಡುವಂ ; ಶ್ರೀಃ, ಶ್ರೀತಂ, ಶ್ರೀತಿಃ, ಶ್ರಯಣಂ, ಶ್ರಯಣೀಯಂ, ಈ ೫ ಅಡುಗೆ.

ಸ್ಕೂಞ್—ಆಚ್ಛಾದನೇ, ಹೊದೆಪಿನೊಳ್ :

ಸ್ಕೂನಾತಿ, ಸ್ಕೂನೀತೆ = ಹೊದೆದಪಂ ; ಸ್ಕೂತಃ, ಸ್ಕೂತವಾನ್, ಈ ೨ ಹೊದೆವಂ ; ಸ್ಕೂತಂ, ಸ್ಕೂತಿಃ, ಈ ೨ ಹೊದಪು.

ಷಿಞ್, ಯುಞ್—ಬಂಧನೇ, ಕಟ್ಟಿನೊಳ್ :

ಸಿನಾತಿ, ಸಿನೀತೆ = ಕಟ್ಟಿದಪಂ ; ಸಿತಃ, ಸಿತವಾನ್, ಈ ೨ ಕಟ್ಟುವಂ ; ಸಿತಂ, ಸಿತಿಃ, ಈ ೨ ಕಟ್ಟು.

ಯುನಾತಿ, ಯುನೀತೆ = ತಡೆದಪಂ ; ಯುತಃ, ಯುತವಾನ್, ಈ ೨ ತಡೆವಂ ; ಯುತಂ, ಯುತಿಃ, ಈ ೨ ತಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ನೂ ಞ್—ಶಬ್ದೇ, ಕೂಗಿನೊಳ್ :

ಕ್ನೂನಾತಿ, ಕ್ನೂನೀತೆ = ಕೂಗಿದಪಂ ; ಕ್ನೂತಃ, ಕ್ನೂತವಾನ್, ಈ ೨ ಕೂಗುವಂ ; ಕ್ನೂತಂ, ಕ್ನೂತಿಃ, ಈ ೨ ಕೂಗು.

ಮೀ ಞ್, ದ್ರೂ ಞ್—ಹಿಂಸಾಯಾಂ, ಕೊಲೆಯೊಳ್ :

ಮೀನಾತಿ, ಮೀನೀತೆ = ಕೊಂದಪಂ ;

ಕ್ತಕ್ತವಂತೂ ನಿಷ್ಠಾ—ಕ್ತಕ್ತವಂತುಗಳ್, ನಿಷ್ಠೆಯೆನಿಕುಂ ; ನಿಷ್ಠಾಯಾಃ ಸ್ತೋನಃ—ನಿಷ್ಠಾಯಾಃ = ಕ್ತಕ್ತವಂತುಗಳ, ತಃ = ತಕಾರಂ, ನಃ = ನಕಾರಮಕ್ಕುಂ.

ಮೀನಃ = ಮೀನ್ ; ಮೀನವಾನ್ = ಕೊಲ್ವಂ ; ಮೀನಂ, ಮಯನಂ, ಮಯನೀಯಂ, ಈ ೩ ಕೊಲೆ.

ದ್ರೂಣಾತಿ, ದ್ರೂಣೀತೆ = ಬಡಿದಪಂ ; ದ್ರೂಣಃ, ದ್ರೂಣವಾನ್, ಈ ೨ ಬಡಿವಂ ; ದ್ರೋಣಃ = ಬೆಟ್ಟವುಂ, ಮುನಿಯುಂ, ತುಂಬಿಯುಂ.

ಪೂ ಞ್—ಪವನೇ, ಹಾರಿಕೆಯೊಳ್ :

ಪ್ವಾದೇರ್ಹ್ರಸ್ವಃ—ಪೂಞ್ ಪ್ರಭೃತಿಗೆ ಹ್ರಸ್ವಮಕ್ಕುಂ.

ಪುನಾತಿ, ಪುನೀತೆ = ಪವಿತ್ರನಾದಪಂ ; ಪೂತಃ, ಪುನೀತಃ, ಪೂತವಾನ್, ಈ ೩ ಹಾರ್ವಂ ; ಪವಮಾನಃ = ವಾಯು ; ಪವಿಃ = ವಜ್ರಾಯುಧಂ ; ಪವಿತ್ರಂ, ಪಾವನಂ, ಈ ೨ ಒಳ್ಳಿತು ; ಪೂತಿಃ = ಹಡಿಕೆ ; ಪವನಃ = ಗಾಳಿ ; ಪವಿತಾ = ಒಳ್ಳಿದಂ ; ಪವಿತ್ರೀ = ಒಳ್ಳಿದಳ್ ; ಪಾವಕಃ = ಬೆಂಕಿ.

ಲೂ ಞ್—ಛೇದನೇ, ಕೊಯಿಲೊಳ್ :

ಲುನಾತಿ, ಲುನೀತೆ = ಕೊಯ್ದಪಂ ; ಲೂನಃ, ಲೂನವಾನ್, ಈ ೨ ಕೊಯ್ದಂ ; ಲೂತಃ = ಜೇಡನ ಪುಳು ; ಲಾವಕಃ = ಲಾವುಗೆ ; ಲವಿತ್ರಂ = ಕುಡುಗೋಲ್ ; ಲವನಂ, ಲವನೀಯಂ, ಲವ್ಯಂ, ಲಾವ್ಯಂ, ಈ ೪ ಕೊಯಿಲ್ ; ಲವಃ = ಅಲ್ಪಂ ; ಲವಲಿಃ, ಲವಲೀ, ಈ ೨ ಅದುರ್ಗಂತಿ ; ಲವಣಂ = ಉಪ್ಪು ; ಲಾವಣಕಂ = ಲಾವಣಿಗೆ.

ಸ್ತೄ ಞ್—ಆಪ್ರವಣೇ, ಪೂರಣದೊಳ್ :

ಸ್ತೃಣಾತಿ, ಸ್ತೃಣೀತೆ = ಪೂರಿಸಿದಪಂ ; ಸ್ತೃಣಃ, ಸ್ತೃಣವಾನ್,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ೨ ಪೂರಿಸುವಂ ; ಆಸ್ತರಣಂ, ಆಸ್ತರಣೀಯಂ, ಆಸ್ತೀರ್ಣಂ, ಈ ೩ ಹಾಸಿಗೆ ; ಸ್ತ್ರೀ = ಪೆಣ್.

ಕ್ನಾ ಞ್—ಹಿಂಸಾಯಾಂ, ಕೊಲೆಯೊಳ್ :

ಕ್ನಾಣಾತಿ, ಕ್ನಾಣೀತೆ = ಕೊಂದಪಂ ; ಕ್ನಾಣಃ, ಕ್ನಾಣವಾನ್, ಈ ೨ ಕೊಲೆಗಂ ; ಕರೀರಂ = ಕಳಿಲೆ ; ಕರಭಃ = ಅಂಗೈಯ್ಯ ಬುಡಂ.

ವ್ಯಾ ಞ್—ವರಣೇ, ಬಳಸಿಸೊಳ್ :

ವ್ಯಾಣಾತಿ, ವ್ಯಾಣೀತೆ = ಬಳಸಿದಪಂ ; ವ್ಯಾಣಃ, ವ್ಯಾಣವಾನ್, ಈ ೨ ಬಳಸುವಂ ;

ಯ್ವ್ವಾಣಾಂ ಯವರಾಃ—ಇಈ ಉಊ ಋೠ ಌೡ ಗಳ್ಗೆ ಯವರಂಗಳಕ್ಕುಂ.

ವ್ರಾತಃ = ಸಮೂಹಂ.

ಧೂ ಞ್—ಕಮ್ಪನೇ, ನಡುಕದೊಳ್ :

ಧುನಾತಿ, ಧುನೀತೆ = ನಡುಗಿದಪಂ ; ಧೂತಃ, ಧೂತವಾನ್, ಧವಃ, ಧಾವಕಃ, ಧವನ್, ಧವಾನಃ, ಧವಿತಾ, ಈ ೭ ನಡುಗುವಂ ; ಧವನಂ, ಧವನೀಯಂ, ಈ ೨ ನಡುಕಂ ; ಅವಧೂತಃ = ವರ್ಣಾಶ್ರಮವಿಲ್ಲದ ಯೋಗಿ.

ಗ್ರಹ—ಉಪಾದಾನೇ, ಹಿಡಿತದೊಳ್ :

ಯವರಾಣಾಂ ಯ್ವೃತಃ—ಯವರಂಗಳ್ಗೆ ಇ ಉ ಋ ಗಳಕ್ಕುಂ.

ಗೃಹ್ಣಾತಿ, ಗೃಹ್ಣೀತೆ = ಹಿಡಿದಪಂ ;

ಗ್ರಹಾದೇರೀಟ್—ಗ್ರಹಪ್ರಭೃತಿಗೆ ಈಡಾಗಮಮಕ್ಕುಂ.

ಗೃಹ್ಣನ್, ಗೃಹೀತಾ, ಗ್ರಾಹಕಃ, ೩ ಹಿಡಿವಂ ; ಗ್ರಹಃ = ಮೊಸಳೆಯುಂ, ಭೂತವುಂ, ಗರಣವುಂ ; ಗ್ರಹಣಂ = ಹಿಡಿತವುಂ, ಗರಣವುಂ ;

ಗೃಹಾಃಪುಂಸಿಚ ಭೂಮ್ನ್ಯೇವ—ಮನೆಗಳ್, ಪುಲ್ಲಿಂಗದಲ್ಲಿ ಬಹುವಚನದಲ್ಲಿಯೇ, ಸಮುಚ್ಚಯದಿಂ ಗೃಹಂ ನಪುಂಸಕಂ.

ಗೃಹೀತಂ, ಗೃಹ್ಯಂ, ಗ್ರಾಹ್ಯಂ, ಗೃಹೀತವ್ಯಂ, ಗ್ರಹಣೀಯಂ, ಈ ೫ ಹಿಡಿತಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ೃ, ಸ್ೃ—ಹಿಂಸಾಯಾಂ, ಕೊಲೆಯೊಳ್ :

ಶೃಣಾತಿ, ಶೃಣೀತೆ = ಕೊಂದಪುದು ; ಶರಭಃ = ಎಂಟುಕಾಲ ಮಿಕವುಂ, ವೀರಭದ್ರನವತಾರವುಂ ; ಶೃಣಾತಿ = ಕೊಂದಪಂ ; ಶರ್ವಃ = ನೀರೊಡೆಯನಾದ ಶಿವಂ ; ಶರಂ = ದರ್ಭೆಯುಂ, ಅಂಬುಂ ; ಶರ್ವಾಣೀ = ಕೊಲೆಗಾರ್ತಿಯುಂ, ಗೌರಿಯುಂ.

ಋತಈರ್—ಋಕಾರಕ್ಕೆ ಈರ್ ಬಕ್ಕುಂ.

ಶೀರ್ಣಂ = ಸೀಳ್ಕೆ ; ಶರೀರಂ = ಮಯ್ ; ಶೀರ್ಯಂ = ಸೀಳಲ್ತಕ್ಕುದು ; ಶರಣಂ = ಗ್ರಹವುಂ, ರಕ್ಷಿತಾರನುಂ ; ಶರಣ್ಯಂ, ಶರಣೀಯಂ, ಈ ೨ ಹೊರೆಯಲ್ತಕ್ಕುದು.

ಶ್ರಾದೇರ್ವಃ—ಶೃಪ್ರಭೃತಿಗೆ ವಪ್ರತ್ಯಯಮಕ್ಕುಂ.

ಸ್ೃಣಾತಿ, ಸ್ೃಣೀತೆ = ತಿಂದಪುದು ; ಸರಭಃ = ಗಂಡಮೃಗಂ ; ಸರ್ವಃ = ತಿಂಬಂ ; ಸರಣಂ, ಸರಣೀಯಂ, ಸರ್ಯಂ, ಸಾರ್ಯಂ, ಸೀರ್ಣಂ, ಸರೀರಂ, ಈ ೬ ತೀನಿ.

ಪ್ೃ—ಪಾಲನಪೂರಣಯೋಃ, ಹೊರೆತದೊಳಂ, ತುಂಬುಗೆಯೊಳಂ :

ಪೃಣಾತಿ, ಪೃಣೀತೆ = ಹೊರೆದಪಂ, ತುಂಬಿದಪಂ ;

ಋತ ಊರ್—ಋಕಾರಕ್ಕೆ ಊರ್ಬಕ್ಕುಂ.

ಪೂರ್ತಂ, ಪೂರ್ತಿಃ, ಪೂರಣಂ, ಪೂರಣೀಯಂ, ಪೂರ್ತವ್ಯಂ, ಪೂರ್ಯಂ, ಪೂರ್ಣಂ, ಈ ೭ ತುಂಬುಗೆ ; ಪೂರ್ತಃ, ಪೂರ್ತವಾನ್, ಪೂರಃ, ಪೂರಕಃ, ಪರಃ, ಪರಾಣಃ, ಈ ೬ ತುಂಬುವಂ ; ಪರೀತಃ = ರಕ್ಷಿಸುವಂ ; ವಿಪರೀತಂ = ನಿರ್ದಯಂ.

ಬ್ಲೀ, ಬ್ೃ—ವರಣೇ, ಬಳಸಿನೊಳ್ :

ಬ್ಲಿನಾತಿ = ಬಳಸಿದಪಂ ; ಬ್ಲೀತಃ, ಬ್ಲೀತವಾನ್, ಬ್ಲಯನ್, ಬ್ಲಯಃ, ಬ್ಲಾಯಃ, ಬ್ಲಾಯೀ, ಈ ೬ ಬಳಸುವಂ ; ಬ್ಲಯನಂ, ಬ್ಲಯನೀಯಂ, ಬ್ಲಯ್ಯಂ, ಬ್ಲೀತಂ, ಬ್ಲೀತಃ, ಈ ೫ ಬಳಸು.

ಬೃಣಾತಿ = ಸುತ್ತಿದಪಂ ; ಬೃತಃ, ಬೃತವಾನ್, ಬೂರಃ, ಬೂರಕಃ, ಬರನ್, ಈ ೫ ಸುತ್ತುವಂ ; ಬೂರಣಂ, ಬೂರಣೀಯಂ, ಬೂರ್ಯಂ, ಬೂರ್ತಂ, ಬೂರ್ತಿಃ, ಬೂರ್ಣಂ, ಈ ೬ ಸುತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೄ—ಭರ್ತ್ಸನೇ, ಬಯ್ಯಿಲೊಳ್ :
ಭೃಣಾತಿ = ಬಯಿದಪಂ; ಭೂರ್ತಃ, ಭೂರ್ತವಾನ್, ಭೂಃ, ಭೂರಕಃ, ಈ ೪ ಬಯ್ದುಂ; ಭೃಾತಂ, ಭೃಾತಿಃ, ಭೂರ್ಣಂ, ಭೂರಣಂ, ಭೂರಣೀಯಂ, ಭೂರ್ಯಂ, ಈ ೬ ಬಯಿಲ್ ; ಭೂರೀ = ಬೂರಿ.

ದೄ—ವಿದಾರಣೇ, ಸೀಳಿಕೆಯೊಳ್ :
ದೃಣಾತಿ = ಸೀಳ್ದಪಂ ; ದೂರ್ತಃ, ದೂರ್ತವಾನ್, ಈ ೨ ಸೀಳ್ವಂ ; ದೂರಂ = ಹತ್ತಿರದಲ್ಲದುದು ; ದೂರ್ತಂ, ದೂರ್ತಿಃ, ದೂರಣಂ, ದೂರಣೀಯಂ, ದೂರ್ಯಂ, ಈ ೫ ಸೀಳು.

ಜೄ—ವಯೋಹಾನೌ, ಹರೆಯದ ಹೋಕಿನೊಳ್ :
ಜೃಣಾತಿ = ಜೀರ್ಣಿಸಿದಪಂ ; ಜೀರ್ಣಃ, ಜೀರ್ಣವಾನ್, ಜರಣಃ, ಈ ೩ ಜೀರ್ಣಿಸಿದಂ ; ಜೂರ್ತಂ, ಜೂರ್ತಿಃ, ಜೂರಣಂ, ಜೂರಣೀಯಂ, ಜೂರ್ಯಂ, ಜರಾ, ಜರಸ್, ಈ ೭ ಹಳಸು.

ನೄ—ನಯೇ, ನಡೆವಳಿಯೊಳ್ :
ನೃಣಾತಿ = ನಡವಳಿಕಾರನಾದಪಂ ; ನರನ್, ನರ್ತಾ, ನೄಃ, ನರಃ, ಈ ೪ ನಡವಳಿಕಾರಂ ; ನರೀ, ನಾರೀ, ಈ ೨ ನಡೆವಳಿಕಾರ್ತಿ ; ನರ್ತವ್ಯಂ, ನರಣಂ, ನರಣೀಯಂ, ನರ್ಯಂ, ನಾರ್ಯಂ, ನಾರಂ, ಈ ೬ ನಡೆವಳಿ.

ಗೄ—ಶಬ್ದೇ, ಕೂಗಿನೊಳ್ :
ಗೃಣಾತಿ = ಕೂಗಿದಪಂ ; ಗರ್ಣನ್, ಗರ್ತಾ, ಈ ೨ ಕೂಗುವಂ ; ಗರಂ = ವಿಷಂ ; ಗೀರ್ಣಂ, ಗೂರಣಂ, ಗೂರಣೀಯಂ, ಗೂರ್ಯಂ, ಗೂರಂ, ಈ ೫ ಕೂಗು ; ಆಗರಂ = ಎಲ್ಲಾ ಕಡೆಯಣ ಕೂಗು.

ಜ್ಯಾ—ವಯೋಹಾನೌ, ಹರೆಯದ ಹೋಕಿನೊಳ್ :
ಜ್ಯಾನಾತಿ = ಹಳಸಿದಪಂ ; ಜ್ಯಾಯಾನ್, ಜ್ಯೇಷ್ಠಃ, ಈ ೨ ಹಳಸಿದಂ ; ಜ್ಯಾ = ಬಿಲ್ಲಹೆದೆ ; ಜ್ಯಾನಂ, ಜ್ಯಾನೀಯಂ, ಈ ೨ ಹಳಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖೂ—ಗತೌ, ನಡೆಯೊಳ್ :

ಖೂಣಾತಿ = ನಡೆದಪಂ ; ಖುತಃ, ಖುತವಾನ್, ಈ ೨ ನಡೆವಂ ; ಖುತಂ, ಖುತಿಃ, ಈ ೨ ನಡೆ.

ನಿರ್ಖುತಿಃ = ದಿಕ್ಪಾಲಕಃ.

ರೀ—ರೇಷಣೇ, ತೆಗೆತದೊಳ್ :

ರೀಣಾತಿ = ತೆಗೆದಪಂ ; ರೀತಿಃ, ರೀತವಾನ್, ಈ ೨ ತೆಗೆವಂ ; ರೀತಂ, ರೀತಃ, ಈ ೨ ತೆಗೆತಂ.

ಲೀ—ಶ್ಲೇಷಣೇ, ತಳ್ಕೆಯೊಳ್ :

ಲೀನಾತಿ = ತಳ್ಕಿಸಿದಪಂ ; ಲೀತಃ, ಲೀತವಾನ್, ಈ ೨ ತಳ್ಕಿಸುವಂ ; ಲೀತಂ, ಲೀತಿಃ, ಈ ೨ ತಳ್ಕೆ.

ವ್ರೀ—ವರಣೇ, ಆವರಿಸುಹಣದೊಳ್ :

ವ್ರೀಣಾತಿ = ಆವರಿಸಿದಪಂ ; ವ್ರೀತಃ, ವ್ರೀತವಾನ್, ಈ ೨ ಆವರಿಸುವಂ ; ವ್ರೀತಂ, ವ್ರೀತಿಃ, ಈ ೨ ಆವರಿಸುಹಣಂ.

ಭ್ರೀ—ಭರಣೇ, ಹೊರೆತದೊಳ್ :

ಭ್ರೀಣಾತಿ = ಹೊರೆದಪಂ ; ಭ್ರೀತಃ, ಭ್ರೀತವಾನ್, ಈ ೨ ಹೊರೆವಂ ; ಭ್ರೀತಂ, ಭ್ರೀತಿಃ, ಈ ೨ ಹೊರೆತಂ.

ಣಭ, ತುಭ, ಕ್ಷಿಪ—ಹಿಂಸಾಯಾಂ, ಕೊಲೆಯೊಳ್ :

ನಭ್ನಾತಿ, ನಭ್ನೀತೆ = ಕೊಂದಪುದು ; ನಭಸ್ = ಬಾನ್ ; ನಭಸ್ವಾನ್ = ಮೋಡಂ ; ನಭೋಲಿಪ್ಸುಃ = ಶತರುದ್ರರೊಳೊರ್ವ ರುದ್ರಂ.

ತುಭ್ನಾತಿ, ತುಭ್ನೀತೆ = ಬಡಿದಪಂ ; ತುಬ್ಧಃ, ತುಬ್ಧವಾನ್, ಈ ೨ ಬಡಿವಂ ; ತುಬ್ಧಂ, ತುಬ್ಧಿಃ, ಈ ೨ ಬಡಿತಂ.

ಕ್ಷಿಪ್ನಾದೀನಾಂ ನ ಣೋ ಣಃ—ಕ್ಷಿಪ್ನಾ ಪ್ರಭೃತಿಗಳ ನಕಾರಕ್ಕೆ ಣಕಾರಂ ಬಾರದು.

ಕ್ಷಿಪ್ನಾತಿ, ಕ್ಷಿಪ್ನೀತೆ = ತದಕಿದಪಂ ; ಕ್ಷಿಪ್ತಃ, ಕ್ಷಿಪ್ತವಾನ್, ಈ ೨ ತದಕುವಂ ; ಕ್ಷಿಪ್ತಂ, ಕ್ಷಿಪ್ತಿಃ, ಈ ೨ ತದಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಷುಪ—ಗರ್ವೇ, ಗರುವದೊಳ್ :

ಕ್ಷುಪ್ನಾತಿ, ಕ್ಷುಪ್ನೀತೆ = ಗರುವಿಸಿದಪಂ; ಕ್ಷುಪಃ = ದಧೀಚನೊಡನೆ ಪಗಡೆಯನಾಡಿ ಸೋಲ್ತ ಸೂರ್ಯವಂಶದ ರಾಯಂ.

ಜ್ಞಾ—ಅವಬೋಧನೇ, ಅರಿವಿನೊಳ್ :

ಜ್ಞಾಜನೋಜ್ಜಾ—ಜ್ಞಾಜನಗಳ್ಗೆ ಜಾಬರ್ಕು೦.

ಜಾನಾತಿ, ಜಾನೀತೆ = ಅರಿದಪಂ ; ಜಾತಃ, ಜಾಯಮಾನಃ, ಈ ೨ ಅರಿದನುಂ, ಹುಟ್ಟಿದನುಂ ; ಜ್ಞಾತಾ = ಅರಿದಂ ; ಜ್ಞಾನಂ, ಜ್ಞೇಯಮ್, ಈ ೨ ಅರಿಯಲ್ತಕ್ಕುದು ; ಜ್ಞಾತವ್ಯಂ = ಅರಿಯಲ್ತಕ್ಕುದು.

ಬಂಧ—ಬಂಧನೇ, ಕಟ್ಟಿನೊಳ್ :

ಬಧ್ನಾತಿ, ಬಧ್ನೀತೆ = ಕಟ್ಟಿದಪಂ ; ಬದ್ಧಃ, ಬದ್ಧವಾನ್, ಬಂಧಕಃ, ಈ ೩ ಕಟ್ಟುವಂ ; ಬಂಧನಂ, ಬಂಧನೀಯಂ, ಬದ್ಧಂ, ಬದ್ಧಿಃ, ಬಂಧಾನಂ, ಬಂಧಃ, ಈ ೬ ಕಟ್ಟು.

ಶ್ರಂಥ—ವಿಮೋಚನಪ್ರತಿಹರ್ಷಣಯೋಃ, ಬಿಡುಗೆಯೊಳಂ, ಕರಕರೆಯೊಳಂ :

ಶ್ರಥ್ನಾತಿ, ಶ್ರಥ್ನೀತೆ = ಬಿಟ್ಟಪಂ, ಕರಕರಿಸಿದಪಂ ; ಶ್ರಂಥಕಃ, ಶ್ರಂಥಾನಃ, ಈ ೨ ಕಟ್ಟುವನುಂ, ಕರಕರಿಸುವನುಂ ; ಶ್ರಂಥಂ, ಶ್ರಂಥನೀಯಂ, ಈ ೨ ಕಟ್ಟು.

ಮಂಥ—ವಿಲೋಡನೇ, ಲೊಡಗಿನೊಳ್ :

ಪ್ರಕರ್ಷೇಣ ಮಥ್ನಾತೀತಿ ಪ್ರಮಥಃ = ಮಿಗಿಲಿಂ ಲೊಡಗಿಸಿದಪಂ, ಶಿವಗಣಂ ; ಮದಾ ಮಥ್ನಾತಿ = ಕೊಬ್ಬಿನಿಂ ಲೊಡಗಿಸಿದಪಂ ; ಮನ್ಮಥಃ = ಕಾಮಂ ; ಮಥನಂ, ಮಥನೀಯಂ, ಈ ೨ ಲೊಡಗು.

ಗ್ರಂಥ—ಸಂದರ್ಭೇ, ಸೇರಿಸುವಲ್ಲಿ :

ಗ್ರಥ್ನಾತಿ = ಸೇರಿಸಿದಪಂ ; ಗ್ರಾಂಥಿಕಃ = ಸೇರಿಸುವಂ ; ಗ್ರಂಥಃ = ಪದ್ಯಂ ; ಗ್ರಂಥಿಃ = ಗಂಟು.

ಕುಥ—ಸಂಕ್ಲೇಶೇ, ಕರೆಕರೆಯೊಳ್ :

ಕುಥ್ನಾತಿ = ಕರಕರಿಸಿದಪಂ ; ಕುಥಃ, ಕೋಥನ್, ಕೋಥಕಃ, ಈ ೩ ಕರಕರೆಗಂ ; ಕೋಥನಂ, ಕೋಥನೀಯಂ, ಈ ೨ ಕರೆಕರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೃದ—ಕ್ಷೋಧೇ, ಮರ್ದನದೊಳ್ :

ಮೃದ್ನಾತಿ = ಮರ್ದಿಸಿದಪಂ ; ಮರ್ದನ್, ಮರ್ದಕಃ, ಈ ೨ ಮರ್ದಿಸುವಂ ; ಮೃತ್, ಮರ್ದನಂ, ಮರ್ದನೀಯಂ, ಈ ೩ ಮರ್ದಿಸುಹಣಂ.

ಗುಧ—ರೋಷೇ, ರೋಸದೊಳ್ :

ಗುಧ್ನಾತಿ = ರೋಸಿಸಿದಪಂ; ಗೋಧನ್, ಗೋಧಕಃ, ಈ ೨ ರೋಸಿ ; ಗೋಧನಂ, ಗೋಧನೀಯಂ, ಈ ೨ ರೋಸಂ ; ಗೋಧಾ, ಗೋಧಿಕಾ, ಈ ೨ ಹಲ್ಲಿ ; ಗೌಧೇರಃ = ಓತೀ.

ಕುಷ—ನಿಷ್ಕರ್ಷೇ, ಬಹಿಷ್ಕಾರದೊಳ್ :

ಕುಷ್ಣಾತಿ = ಬಹಿಷ್ಕರಿಸಿದಪಂ ; ಕೋಷನ್, ಕೋಷಕಃ, ಕುಷ್ಟಃ, ಕುಷ್ಟವಾನ್, ಈ ೪ ಬಹಿಷ್ಕರಿಸುವಂ ; ಕುಷ್ಠಂ = ಯಕ್ಷ್ಮಂ, ಕೋಷ್ಠಂ = ಕೋಣೆ ; ಪ್ರಕೋಷ್ಠಃ = ಮುಂಗೈ.

ಕ್ಷುಭ—ಸಂಚಲನೇ, ಅಲ್ಲಾಟದೊಳ್ :

ಕ್ಷುಭ್ನಾತಿ = ಅಲ್ಲಾಡಿದಪಂ ; ಕ್ಷೋಭನ್, ಕ್ಷೋಭಕಃ, ಈ ೨ ಅಲ್ಲಾಡುವಂ ; ಕ್ಷೋಭಃ, ಕ್ಷೋಭಾ, ಕ್ಷುಬ್ಧಂ, ಕ್ಷುಬ್ಧಿಃ, ಈ ೪ ಅಲ್ಲಾಟಂ.

ಕ್ಲಿಶ—ವಿಬಾಧನೇ, ಬನ್ನದೊಳ್ :

ಕ್ಲಿಶ್ನಾತಿ = ಬನ್ನಂ ಬಟ್ಟಪಂ ; ಕ್ಲೇಶನ್, ಕ್ಲೇಶಕಃ, ಈ ೨ ಬನ್ನಂಬಡುವಂ ; ಕ್ಲಿಷ್ಟಂ, ಕ್ಲಿಷ್ಟಿಃ, ಕ್ಲೇಶಃ, ಕ್ಲೇಶನಂ, ಕ್ಲೇಶನೀಯಂ, ಈ ೫ ಬನ್ನಂ.

ಅಶ—ಭೋಜನೇ, ಊಟದೊಳ್ :

ಅಶ್ನಾತಿ = ಉಂಡಪಂ ; ಅಶ್ನನ್, ಅಶಕಃ, ಈ ೨ ಉಣ್ಬಂ ; ಅಶನಂ, ಅಶನೀಯಂ, ಅಷ್ಟಂ, ಅಷ್ಟಿಃ, ಈ ೪ ಊಟಂ ; ಸಮಷ್ಟಿಃ = ಒಳ್ಳಿತ್ತಾದ ಉಣಿಸು ; ವ್ಯಷ್ಟಿಃ = ಕೆಟ್ಟವುಣಿಸು ; ಅಷ್ಟನ್, ಅಷ್ಟಕಂ, ಈ ೨ ಎಂಟು.

ಉಧ್ರಶು—ಉಂಛೇ, ಆಯ್ಕುಳಿಯಲ್ಲಿ :

ಧ್ರಶ್ನಾತಿ = ಹಕ್ಕಲಾಯ್ದಪಂ ; ಧ್ರಶ್ನನ್, ಧ್ರಶಕಃ, ಈ ೨ ಹಕ್ಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾಯುವಂ ; ಧೃಷ್ಟತಂಡುಲಮಾರಃ = ಆಯ್ದಕ್ಕಿಮಾರಯ್ಯಂ ; ಧೃಷ್ಟಿಃ, ಧೃಶನಂ, ಧೃಶನೀಯಂ, ಈ ೩ ಆಯ್ಕುಳಿ.

ಇಷ—ಅಭೀಕ್ಷ್ಣೇ, ಎಡವಿಡದ ನೋಟದೊಳ್ :

ಇಷ್ಣಾತಿ = ಎಡಬಿಡದೆ ನೋಡಿದಪಂ ; ಇಷ್ಟಃ, ಇಷ್ಟವಾನ್, ಏಷಕಃ, ಈ ೩ ಎಡಬಿಡದವಂ ; ಇಷ್ಟಂ, ಇಷ್ಟಿಃ, ಏಷಣಂ, ಏಷಣೀಯಂ, ಈ ೪ ಎಡವಿಡದಿಹಣಂ.

ವಿಷ—ವಿಪ್ರಯೋಗೇ, ಅಗಲ್ಕೆಯೊಳ್ :

ವಿಷ್ಣಾತಿ = ಅಗಲ್ದಪಂ ; ವಿಷ್ಟಃ, ವಿಷ್ಟವಾನ್, ವೇಷಕಃ, ಈ ೩ ಅಗಲ್ವಂ ; ವಿಷಂ = ನಂಜುಂ, ನೀರುಂ ; ವೇಷಃ, ವೇಷಣಂ, ವೇಷಣೀಯಂ, ಈ ೩ ಅಗಲ್ಕೆ.

ಪ್ರುಷ, ಪ್ಲುಷ—ಸ್ನೇಹನಸೇಚನಪೂರಣೇಷು, ಜಿಡ್ಡಿನೊಳಂ, ತಳಿತದೊಳಂ, ತುಂಬುಗೆಯೊಳಂ :

ಪ್ರುಷ್ಣಾತಿ = ಜಿಡ್ಡಿಸಿದಪಂ, ತಳಿದಪಂ, ತುಂಬಿದಪಂ ; ಪ್ರುಷ್ಟಃ, ಪ್ರುಷ್ಟವಾನ್, ಪ್ರೋಷಕಃ, ಈ ೩ ಜಿಡ್ಡುಗನುಂ, ತಳಿವನುಂ, ತುಂಬುವನುಂ ; ಪ್ರುಷ್ಟಂ = ಮುಕುಳಿ ; ಪ್ರುಷ್ಟಿಃ, ಪ್ರೋಷಣಂ, ಪ್ರೋಷಣೀಯಂ, ಈ ೩ ಜಿಡ್ಡು.

ಪ್ಲುಷ್ಣಾತಿ = ತಳಿದಪಂ ; ಪ್ಲುಷ್ಟಃ, ಪ್ಲುಷ್ಟವಾನ್, ಪ್ಲೋಷಕಃ, ಈ ೩ ತಳಿವಂ ; ಪ್ಲುಷ್ಟಂ, ಪ್ಲುಷ್ಟಿಃ, ಪ್ಲೋಷಣಂ, ಪ್ಲೋಷಣೀಯಂ, ಈ ೪ ತಳಿವು.

ಪುಷ—ಪುಷ್ಟೌ, ಹೊರೆತದೊಳ್ :

ಪುಷ್ಣಾತಿ = ಹೊರೆದಪಂ ; ಪುಷ್ಟಃ, ಪುಷ್ಟವಾನ್, ಪೋಷಕಃ, ಈ ೩ ಹೊರೆವಂ ; ಪುಷ್ಟಂ, ಪುಷ್ಟಿಃ, ಪೋಷಣಂ, ಪೋಷಣೀಯಂ, ಈ ೪ ಹೊರೆತಂ ; ಪೂಷನ್ = ಸೂರ್ಯಂ.

ಮುಷ—ಸ್ತೇಯೇ, ಕಳವಿನೊಳ್ :

ಮುಷ್ಣಾತಿ = ಕಳ್ದಪುದು ; ಮೂಷಿಕಃ = ಇಲಿ ; ಮೂಷಾ = ಮೂಸೆ ; ಮುಷ್ಟಿಃ = ಹಿಡಿತಂ ; ಮುಷ್ಟಂ, ಮೋಷಃ, ಮೋಷಣಂ, ಮೋಷಣೀಯಂ, ಈ ೪ ಕಳವು ; ಮುಷ್ಣತಾಂಪತಯೇ ನಮಃ = ಕಳ್ಳರೊಡೆಯಂಗೆ ಶರಣು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖವ—ಪೂತಿಪ್ರಾದುರ್ಭಾವೇ, ಹಡಿಕಿನಾರ್ತದ ಹೊಣ್ಮೆ ಕೆಯ್ಯೊಳ್ :
ಖವ್ನಾತಿ = ನಾರ್ತಪಂ ; ಖವ್ನೀತಃ = ಇಬ್ಬರ್ ನಾರ್ತಪರ್ ;
ಖವ್ನಂತಿ = ನಾರ್ತಪರ್ ; ಖವ್ನನ್, ಖವಕಃ, ಈ ೨ ಹಡಿಕಿ
ನಾರ್ವಂ ; ಖವನಂ, ಖವನೀಯಂ, ಈ ೨ ಹಡಿಕಿನಾರ್ತಂ.

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತಿತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ
ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ
ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ
ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯಸಂಬ್ಯಣಗುರುಕರಜಾ
ತಸ್ಯ ಸಹ್ಯಾದ್ರಿಕಟಕಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ
ಚನ್ನವೀರಕವಿಕೃತೌ ಕಾಶಕೃತ್ಸ್ನಧಾತುಕರ್ಣಾಟ ಟೀಕಾ
ಯಾಂ ಉಭಯಭಾಷಾ ಲೇಖಕ ಪಾಠಕ ಶ್ರೋತೃ
ಣಾಂ ಸಂಸ್ಕೃತಾರ್ಥಪ್ರಕಾಶಿಕಾ ಭೂಯಾತ್

ಇತಿ ನಾವಿಕರಣಃ ಕ್ರ್ಯಾದಿಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚುರಾದಿಃ

ಚುರ—ಸ್ತೇಯೇ, ಕಳವಿನೊಳ್ :

ಚುರಾದೇರಿನ್ ಸ್ವಾರ್ಥೇ—ಚುರಪ್ರಭೃತಿಗೆ ಇನ್ಪ್ರಕರಣಮಕ್ಕುಂ ತನ್ನ ಪುರುಳೊಳ್.

ಚೋರಯತಿ = ಕಳ್ದಪಂ ; ಚೋರಃ, ಚೌರ್ಯಂ, ಈ ೨ ಕಳವು.

ಸರ್ವೇ ಹಿಂಸಾರ್ಥಾಶ್ಚುರಾದೌ ಪರಸ್ಮೈಪದಿನೋ ಜ್ಞೇಯಾಃ—ಎಲ್ಲಾ ಕೊಲೆಯ ಪುರುಳಧಾತುಗಳ್ ಪರಸ್ಮೈಪದಿಗಳೆಂದು ಅರಿಯಲ್ತಕ್ಕವು.

ಚಿತಿ—ಸ್ಮೃತ್ಯಾಂ, ಉಮ್ಮಳಿಕೆಯೊಳ್ :

ಚಿಂತಯತಿ = ಉಮ್ಮಳಿಸಿದಪಂ ; ಚಿಂತನ್, ಚಿಂತಕಃ, ಈ ೨ ಉಮ್ಮಳಿಸುವಂ ; ಚಿಂತನಂ, ಚಿಂತಾ, ಚಿಂತನೀಯಂ, ಚಿಂತ್ಯಂ, ಈ ೪ ಉಮ್ಮಳಿಕೆ.

ಯತ್ರಿ—ಸಂಕೋಚನೇ, ಅಡಕದೊಳ್ :

ಯಂತ್ರಯತಿ = ಅಡಗಿಸಿದಪಂ ; ಯಂತ್ರಕಃ = ಅಡಗಿಸುವಂ ; ಯಂತ್ರಃ, ಯಂತ್ರಣಂ, ಯಂತ್ರಣೀಯಂ, ಈ ೩ ಅಡಕಂ.

ತತ್ರಿ—ದರ್ಶನೀಯೇ, ತೋರಿಕೆಯೊಳ್ :

ತಂತ್ರಯತಿ = ತೋರಿದಪಂ ; ತಂತ್ರಕಃ = ತೋರುವಂ ; ತಂತ್ರಂ, ತಂತ್ರಣಂ, ತಂತ್ರಣೀಯಂ, ಈ ೩ ತೋರಿಕೆ.

ಅತ್ರಿ—ಜೀವನೇ, ಬಾಳ್ಕೆಯೊಳ್ :

ಅಂತ್ರಯತಿ=ಬಾಳ್ದಪಂ ; ಅಂತ್ರಕಃ = ಬಾಳ್ವಂ ; ಅಂತ್ರಂ= ಕರುಳ್ ; ಅಂತ್ರಣಂ, ಅಂತ್ರಣೀಯಂ, ಈ ೨ ಬಾಳ್ವಂ.

ಕತ್ರಿ—ಉಪಾಯೇ, ಜಾಣ್ಮೆಯೊಳ್ :

ಕಂತ್ರಯತಿ = ಜಾಣನಾದಪಂ ; ಕಂತ್ರಕಃ = ಜಾಣಂ ; ಕಂತ್ರಣಂ, ಕಂತ್ರಣೀಯಂ, ಈ ೨ ಜಾಣ್ಮೆ.

ಜತ್ರಿ—ಸೂಚನೇ, ಸೂಚನೆಯೊಳ್ :

ಜಂತ್ರಯತಿ = ಸೂಚಿಸಿದಪಂ ; ಜಂತ್ರಕಃ = ಸೂಚಕಂ ; ಜಂತ್ರಂ, ಜಂತ್ರಣಂ, ಜಂತ್ರಣೀಯಂ, ಈ ೩ ಸೂಚನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿತ್ರಿ—ಅಮ್ಲ ಕರಣೇ, ಹುಳಿಯಾಗುವಲ್ಲಿ :
ತಿಂತ್ರಯತಿ = ಹುಳಿಯಾದಪಂ ; ತಿಂತ್ರಕಃ = ಹುಳಿಸುವಂ ; ತಿಂತ್ರಿಣೀ = ಹುಳಿಸೆ.

ಸ್ಫುಟಿ—ಪರಿಹಾಸೇ, ನಗೆಯೊಳ್ :
ಸ್ಫುಟಯತಿ = ನಕ್ಕಪಂ ; ಸ್ಫೋಟನ್ = ನಗುವಂ ; ಸ್ಫೋಟಾ = ಹೊಪ್ಪಳೆ.

ಲಕ್ಷ—ದರ್ಶನಾಂಕನಯೋಃ, ನೋಟದೊಳಂ, ಗುರುತಿನೊಳಂ :
ಲಕ್ಷಯತಿ = ನೋಡಿದಪಳ್, ಗುರುತಿಟ್ಟಪಳ್ ;

ಲಕ್ಷೇರ್ವಿರ್ಮುಟ್ಚ ಸಾಃ—ಲಕ್ಷದತ್ತಣಿಂ ಮಿಾ ಮುನ್ ಮುನಂಗಳ್ ಬರ್ಕ್ಕುಂ.

ಲಕ್ಷ್ಮೀಃ = ಪಾಲ್ಗಡಲಕುವರಿ ; ಲಕ್ಷ್ಮನ್ = ಗುರುತು ; ಲಕ್ಷ್ಮಣಃ = ರಾಮನ ತಮ್ಮಂ; ಲಕ್ಷಂ = ನೂರುಸಾಸಿರಂ; ಲಕ್ಷಣಂ = ಗುರುತು ; ಲಕ್ಷಣೀಯಂ = ಗುರುತಿಡಲ್ತಕ್ಕುದು ; ಲಕ್ಷ್ಯಂ = ಗುರಿ ; ಲಕ್ಷಿತಂ = ಗುರುತಿಡಲ್ಪಟ್ಟುದು ; ಲಕ್ಷಯಿತವ್ಯಂ = ಗುರುತಿಡಲ್ತಕ್ಕುದು ; ಅಲಕ್ಷ್ಮೀಃ=ಪಾಲ್ಗಡಲ ಕಡೆತದಲ್ಲಿ ಚಂದ್ರನತ್ತಣಿಂ ಕಡೆ ಸಾರಿ ಹುಟ್ಟಿದ ಬ್ರಹ್ಮನ ಹಿರಿಯ ಮಗನಾದ ಪಾಪಪುರುಷನೆಂಬ ಹೆಸರುಳ್ಳ, ದ್ರೋಹಿ ಎಂಬ ಹೆಸರುಳ್ಳ, ಪಾತಕನೆಂಬ ಹೆಸರುಳ್ಳ, ಯಕ್ಷ್ಮನ್ ಎಂಬ ಹೆಸರುಳ್ಳ, ಜೀವಿಗಳ ಎಡದಹೊಟ್ಟೆಯೊಳಿರ್ಪ, ಅಧರ್ಮನ ಹೆಂಡತಿಯಾದ, ಜೋಕುಮಾರನ ತಾಯಿಯಾದ, ಜೇಷ್ಠಾದೇವಿಯೆಂಬ ಹೆಸರುಳ್ಳ, ದರಿದ್ರಲಕ್ಷ್ಮೀ.

ಭಕ್ಷ—ಅದನೇ, ತೀನಿಯೊಳ್ :
ಭಕ್ಷಯತಿ = ತಿಂದಪಂ ; ಭಕ್ಷನ್, ಭಕ್ಷಕಃ, ಈ ೨ ತೀನಾಳಿ ; ಭಕ್ಷಿತಂ, ಭಕ್ಷಣಂ, ಭಕ್ಷಣೀಯಂ, ಭಕ್ಷ್ಯಂ, ಈ ೪ ತೀನಿ.

ಕುಕ್ಷ—ಅವಕಾಶೇ, ಇಂಬಿನೊಳ್ :
ಕುಕ್ಷಯತಿ = ಇಂಬಾದಪುದು ; ಕುಕ್ಷಿಃ = ಹೊಟ್ಟೆ.

ಕುಡಿ—ಅನೃತಭಾಷಣೇ, ಅಟಮಟದ ನುಡಿಯೊಳ್ :
ಕುಂಡಯತಿ = ಅಟಮಟಿಸಿದಪಂ ; ಕುಂಡಃ = ಮಿಂಡನ ಮಗಂ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಂಡಂ = ಬಾವಿಯುಂ, ಬೆಂಕಿಯ ಕುಳಿಯುಂ, ಗಡಿಗೆಯುಂ ; ಕುಂಡಾ = ತಿಕಂ ; ಕುಂಡಿಕಾ = ಕಮಂಡಲಂ ; ಕುಂಡಲಂ = ಕರ್ಣಾಭರಣಂ ; ಕುಂಡಲೀ = ಹಾವು ; ಕುಂಡಲಿನೀ = ಜೀವಾಧಾರಶಕ್ತಿ.

ಲಡ—ಉಪಸೇವಾಯಾಂ, ಕೆಲಸದ ಮುಗಿತೆಯೊಳ್ :

ಲಡಯತಿ = ಕೆಲಸಮಂ ಮುಗಿಸಿದಪಂ ; ಲಡನ್, ಲಡಃ, ಲಡಕಃ, ಈ ೩ ಕೆಲಸಮಂ ಮುಗಿಸಿದಪಂ ; ಲಾಡಃ = ನಾಡು ; ಲಾಡುಃ = ತುರುಷ್ಕಂ ; ಲಾಡೀ = ಚಲ್ಲಣದ ಕಶೆ.

ಮಿದ, ತಿಲ, ಸ್ನೇಹ—ಸ್ನೇಹನೇ, ಮಣಕಿನೊಳ್ :

ಮೇದಯತಿ = ಮಣಕಿಸಿದಪುದು ; ಮೇದಿನೀ = ನೆಲಂ ; ಮೇದಸ್ = ನೆಣಂ ; ಮೇದುರಂ = ಮೃದು ; ಮೇದಿಃ = ಪೆಟ್ಟು ; ಮಿದುಃ = ಮೆಲ್ಲಿತ್ತು ; ಮಿದ್ಯಾ = ಮಾಳಿಗೆ.

ತೇಲಯತಿ = ಜಿಡ್ಡಿಸಿದಪುದು ; ತಿಲಃ = ಎಳ್ಳು ; ತಿಲಕಃ = ಬೊಟ್ಟುಂ, ಮರಸುಂ ; ತೈಲಂ = ಎಣ್ಣೆ ; ತೈಲಿಕಃ = ಗಾಣಿಗಂ.

ಸ್ನೇಹಯತಿ = ಅಂಟಿದಪುದು ; ಸ್ನೇಹಃ = ಎಣ್ಣೆ.

ಜಲ—ಅಪವಾರಣೇ, ಬಾಯಾರಿಕೆಯ ಹೋಕಿನೊಳ್ :

ಜಲಯತಿ = ಬಾಯಾರಿಕೆಯುಂ ಹೋಗಿಸಿದಪುದು ; ಜಲಂ = ನೀರ್ ; ಜಲಕಂ = ಸ್ನಾನಂ ; ಜಾಲಂ = ಬಲೆ ; ಜಾಲಕಾರಃ = ಅಂಬಿಗಂ ; ಜಾಲಃ = ಮರಂ ; ಜಾಲಿಃ = ಬೊಬ್ಬಳಿಯುಂ, ನೇಲ್ಕೆಯುಂ ; ಜಲೂಕಃ = ಉಮ್ಮಳಂ.

ಓಲಡಿ—ಉತ್ಕ್ಷೇಪೇ, ಮಿಡಿತದೊಳ್ :

ಓಲಂಡಯತಿ = ಮಿಡಿದಪುದು ; ಓಲಂಡಃ = ಮಿಡಿತೆ.

ಪೀಡ—ಅವಗಾಹನೇ, ಒತ್ತಾಯದೊಳ್ :

ಪೀಡಯತಿ = ಒತ್ತಿದಪಂ ; ಪೀಡನ್, ಪೀಡಕಃ, ಈ ೨ ಒತ್ತುವಂ ; ಪೀಡಾ, ಪೀಡನಂ, ಪೀಡನೀಯಂ, ಈ ೩ ಒತ್ತಾಯಂ.

ಣಥ—ಅವಸ್ಕಂದನೇ, ಅಲ್ಲಾಟದೊಳ್ :

ನಥಾದೇರಿನಿ ದೀರ್ಘಃ—ನಥಪ್ರಭೃತಿಗೆ ದೀರ್ಘಮಪ್ಪುದು ಇನ್ ಪರಮಾದೊಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಥಯತಿ =ಅಲ್ಲಾಡಿದಪಂ ; ನಾಥಃ = ಅಲ್ಲಾಡುವಂ ; ನಥನಂ, ನಥನೀಯಂ, ಈ ೨ ಅಲ್ಲಾಟಂ.

ಶ್ರಂಥ—ಪ್ರತಿಹರ್ಷೇ, ಬಳಲ್ಕೆಯೊಳ್ :

ಶ್ರಂಥಯತಿ = ಬಳಲ್ದಪಂ ; ಶ್ರಂಥಃ, ಶ್ರಂಥಕಃ, ಈ ೨ ಬಳಲ್ದಂ ; ಶ್ರಂಥನಂ, ಶ್ರಂಥನೀಯಂ, ಈ ೨ ಬಳಲ್ಕೆ.

ಬಧ—ಸಂಯಮನೇ, ದಿಟದೊಳ್ :

ಬಾಧಯತಿ = ದಿಟಸಿದಪಂ ; ಬದ್ಧಂ, ಬದ್ಧಿಃ, ಈ ೨ ದಿಟಂ.

ಪೄ—ಪೂರಣೇ, ತುಂಬುಗೆಯೊಳ್ :

ಪೂರಯತಿ = ತುಂಬಿದಪಂ ; ಪೂರಿತಃ, ಪೂರ್ಣಃ, ಈ ೨ ತುಂಬಿದಂ ; ಪೂರಣಂ, ಪೂರಣೀಯಂ, ಈ ೨ ತುಂಬುಗೆ.

ಊರ್ಜ—ಬಲಪ್ರಾಣನಯೋಃ, ಪುಷ್ಟಿಯೊಳಂ, ಚೇತನದೊಳಂ :

ಊರ್ಜಯತಿ = ಬಲಿದಪಂ ; ಊರ್ಜಿತಃ, ಊರ್ಜಿತವಾನ್, ಊರ್ಜಸ್ವೀ, ಈ ೩ ಬಲ್ತಂ ; ಊರ್ಕ್, ಊರ್ಜಿತಂ, ಊರ್ಜಂ, ಊರ್ಜನಂ, ಊರ್ಜನೀಯಂ, ಊರ್ಜಸ್, ಈ ೬ ಬಲಂ.

ಚುಟಿ, ಛುಟಿ, ಕುಟಿ, ಕುಠ—ಛೇದನೇ, ಸೀಳೆನೊಳ್ :

ಚೋಟಯತಿ = ಸೀಳ್ದಪಂ ; ಚೋಟನ್, ಚೋಟಕಃ, ಈ ೨ ಸೀಳ್ದಂ ; ಚೋಟನಂ, ಚೋಟನೀಯಂ, ಈ ೨ ಸೀಳು ; ಪಚ್ಚೋಟೀ = ಹಚ್ಚಡಂ ; ಚೋಟಿಕಾ = ಜೋಳಿಗೆ ; ಚೋಟಯಃ = ಜೊಟ್ಟಿನ ಪೆರ್ಬೊಟ್ಟಿನ ಸಿಗುರ್ದಳತೆ ; ಚೂಟಿಃ = ಸಂಧಾನಂ.

ಛೋಟಯತಿ = ಹೋಳ್ದಪಂ ; ಛೋಟನ್, ಛೋಟಕಃ, ಈ ೨ ಹೋಳ್ದಂ ; ಛೋಟನಂ, ಛೋಟನೀಯಂ, ಈ ೨ ಹೋಳು.

ಕೋಟಯತಿ = ಹೊಳ್ಳಿಸಿದಪಂ ; ಕೋಟನ್, ಕೋಟಕಃ, ಈ ೨ ಹೊಳ್ಳಿಸುವಂ ; ಕೋಟನಂ, ಕೋಟನೀಯಂ, ಈ ೨ ಹೊಳ್ಳು ; ಕೋಟರಂ = ಗೂಡು ; ಕೋಟೀರಂ = ಕೊನಾರ್ಡಂ ; ಕೋಟಿಃ = ಅರುಗುಂ, ನೂರು ಲಕ್ಕವುಂ ; ಕೋಟಾ = ಪಾಗಾರಂ ; ಕುಟೀ = ಗುಡಿ ; ಕುಟಿಲಾ = ಗಂಗೆ ; ಕುಟಿಲಃ = ಕುರುಳ್ಗೂದಲುಂ, ಕಪಡುಗನುಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಂಡಂ = ಬಾವಿಯುಂ, ಬೆಂಕಿಯ ಕುಳಿಯುಂ, ಗಡಿಗೆಯುಂ ; ಕುಂಡಾ = ತಿಕಂ ; ಕುಂಡಿಕಾ = ಕಮಂಡಲಂ ; ಕುಂಡಲಂ = ಕರ್ಣಾಭರಣಂ ; ಕುಂಡಲೀ = ಹಾವು ; ಕುಂಡಲಿನೀ = ಜೀವಾಧಾರಶಕ್ತಿ.

ಲಡ—ಉಪಸೇವಾಯಾಂ, ಕೆಲಸದ ಮುಗಿತೆಯೊಳ್ :

ಲಡಯತಿ = ಕೆಲಸಮಂ ಮುಗಿಸಿದಪಂ ; ಲಡನ್, ಲಡಃ, ಲಡಕಃ, ಈ ೩ ಕೆಲಸಮಂ ಮುಗಿಸಿದಪಂ ; ಲಾಡಃ = ನಾಡು ; ಲಾಡುಃ = ತುರುಷ್ಕಂ ; ಲಾಡೀ = ಚಲ್ಲಣದ ಕಶೆ.

ಮಿದ, ತಿಲ, ಸ್ನೇಹ—ಸ್ನೇಹನೇ, ಮಣಕಿಸೊಳ್ :

ಮೇದಯತಿ = ಮಣಕಿಸಿದಪುದು ; ಮೇದಿನೀ = ನೆಲಂ ; ಮೇದಸ್ = ನೆಣಂ ; ಮೇದುರಂ = ಮೃದು ; ಮೇದಿಃ = ಪೆಟ್ಟು ; ಮಿದುಃ = ಮೆಲ್ಲಿತ್ತು ; ಮಿದ್ಯಾ = ಮಾಳಿಗೆ.

ತೇಲಯತಿ = ಜಿಡ್ಡಿಸಿದಪುದು ; ತಿಲಃ = ಎಳ್ಳು ; ತಿಲಕಃ = ಬೊಟ್ಟುಂ, ಮರಸುಂ ; ತೈಲಂ = ಎಣ್ಣೆ ; ತೈಲಿಕಃ = ಗಾಣಿಗಂ.

ಸ್ನೇಹಯತಿ = ಅಂಟಿದಪುದು ; ಸ್ನೇಹಃ = ಎಣ್ಣೆ.

ಜಲ—ಅಪವಾರಣೇ, ಬಾಯಾರಿಕೆಯ ಹೋಕಿನೊಳ್ :

ಜಲಯತಿ = ಬಾಯಾರಿಕೆಯಂ ಹೋಗಿಸಿದಪುದು ; ಜಲಂ = ನೀರ್ ; ಜಲಕಂ = ಸ್ನಾನಂ ; ಜಾಲಂ = ಬಲೆ ; ಜಾಲಕಾರಃ = ಅಂಬಿಗಂ ; ಜಾಲಃ = ಮರಂ ; ಜಾಲಿಃ = ಬೊಬ್ಬಳಿಯುಂ, ನೇಲ್ಕೆಯುಂ ; ಜಲೂಕಃ = ಉಮ್ಮಳಂ.

ಓಲಡಿ—ಉತ್ಕ್ಷೇಪೇ, ಮಿಡಿತದೊಳ್ :

ಓಲಂಡಯತಿ = ಮಿಡಿದಪುದು ; ಓಲಂಡಃ = ಮಿಡಿತೆ.

ಪೀಡ—ಅವಗಾಹನೇ, ಒತ್ತಾಯದೊಳ್ :

ಪೀಡಯತಿ = ಒತ್ತಿದಪಂ ; ಪೀಡನ್, ಪೀಡಕಃ, ಈ ೨ ಒತ್ತುವಂ ; ಪೀಡಾ, ಪೀಡನಂ, ಪೀಡನೀಯಂ, ಈ ೩ ಒತ್ತಾಯಂ.

ಣಥ—ಅವಸ್ಕಂದನೇ, ಅಲ್ಲಾಟದೊಳ್ :

ನಥಾದೇರಿನಿ ದೀರ್ಘಃ—ನಥಪ್ರಭೃತಿಗೆ ದೀರ್ಘಮಪ್ಪುದು ಇನ್ ಪರಮಾದೊಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಥಯತಿ =ಅಲ್ಲಾಡಿದಪಂ ; ನಾಥಃ = ಅಲ್ಲಾಡುವಂ ; ನಥನಂ, ನಥನೀಯಂ, ಈ ೨ ಅಲ್ಲಾಟಂ.

ಶ್ರಂಥ—ಪ್ರತಿಹರ್ಷೇ, ಬಳಲ್ಕೆಯೊಳ್ :
ಶ್ರಂಥಯತಿ = ಬಳಲ್ದಪಂ ; ಶ್ರಂಥಃ, ಶ್ರಂಥಕಃ, ಈ ೨ ಬಳಲ್ದಂ ; ಶ್ರಂಥನಂ, ಶ್ರಂಥನೀಯಂ, ಈ ೨ ಬಳಲ್ಕೆ.

ಬಧ—ಸಂಯಮನೇ, ದಿಟದೊಳ್ :
ಬಾಧಯತಿ = ದಿಟಿಸಿದಪಂ ; ಬದ್ಧಂ, ಬದ್ಧಿಃ, ಈ ೨ ದಿಟಂ.

ಪೄ—ಪೂರಣೇ, ತುಂಬುಗೆಯೊಳ್ :
ಪೂರಯತಿ = ತುಂಬಿದಪಂ ; ಪೂರಿತಃ, ಪೂರ್ಣಃ, ಈ ೨ ತುಂಬಿದಂ ; ಪೂರಣಂ, ಪೂರಣೀಯಂ, ಈ ೨ ತುಂಬುಗೆ.

ಊರ್ಜ—ಬಲಪ್ರಾಣನಯೋಃ, ಪುಷ್ಟಿಯೊಳಂ, ಜೇತನದೊಳಂ :
ಊರ್ಜಯತಿ = ಬಲಿದಪಂ ; ಊರ್ಜಿತಃ, ಊರ್ಜಿತವಾನ್, ಊರ್ಜಸ್ವೀ, ಈ ೩ ಬಲ್ತಂ ; ಊರ್ಕ್, ಊರ್ಜಿತಂ, ಊರ್ಜಂ, ಊರ್ಜನಂ, ಊರ್ಜನೀಯಂ, ಊರ್ಜಸ್, ಈ ೬ ಬಲಂ.

ಚುಟಿ, ಛುಟಿ, ಕುಟಿ, ಕುತ—ಛೇದನೇ, ಸೀಳಿನೊಳ್ :
ಚೋಟಯತಿ = ಸೀಳ್ದಪಂ ; ಚೋಟನ್, ಚೋಟಕಃ, ಈ ೨ ಸೀಳ್ವಂ ; ಚೋಟನಂ, ಚೋಟನೀಯಂ, ಈ ೨ ಸೀಳು ; ಪಚ್ಚೋಟೀ = ಹಚ್ಚಡಂ ; ಚೋಟಿಕಾ = ಜೋಳಿಗೆ ; ಚೋಟುಃ = ಬೊಟ್ಟಿನ ಪೆರ್ಬೊಟ್ಟಿನ ಸಿಗುರ್ದಳತೆ ; ಚೂಟಿಃ = ಸಂಧಾನಂ.
ಛೋಟಯತಿ = ಹೋಳ್ದಪಂ ; ಛೋಟನ್, ಛೋಟಕಃ, ಈ ೨ ಹೋಳ್ವಂ ; ಛೋಟನಂ, ಛೋಟನೀಯಂ, ಈ ೨ ಹೋಳು.
ಕೋಟಯತಿ = ಹೊಳ್ಳಿಸಿದಪಂ ; ಕೋಟನ್, ಕೋಟಕಃ, ಈ ೨ ಹೊಳ್ಳಿಸುವಂ ; ಕೋಟನಂ, ಕೋಟನೀಯಂ, ಈ ೨ ಹೊಳ್ಳು ; ಕೋಟರಂ= ಗೂಡು; ಕೋಟೀರಂ = ಕೊನ್ಸಾಡಂ; ಕೋಟಿಃ = ಅರುಗುಂ, ನೂರು ಲಕ್ಕವುಂ ; ಕೋಟಾ = ಪಾಗರಂ ; ಕುಟೀ = ಗುಡಿ ; ಕುಟಿಲಾ = ಗಂಗೆ ; ಕುಟಿಲಃ = ಕುರುಳ್ಗೂದಲುಂ, ಕವ ಡುಗನುಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೋಠಯತಿ = ಕಡಿದಪಂ ; ಕೋಠನ್, ಕೋಠಕಃ, ಈ ೨ ಕಡಿವಂ ; ಕೋಠನಂ, ಕೋಠನೀಯಂ, ಈ ೨ ಕಡಿತಂ; ಕುಠಾರಃ = ಕೊಡಲಿ.

ಪುಟ್ಟ, ಚುಟ್ಟ—ಅಲ್ಪೀಭಾವೇ, ಕಿರಿದರೊಳ್ :
ಪುಟ್ಟಯತಿ = ಕಿರಿಯನಾದಪಂ ; ಪುಟ್ಟಃ = ಕಿರಿಯಂ ; ಪುಟ್ಟೀ = ಕಿರಿಯಳುಂ, ಗೂಡೆಯುಂ ; ಪುಟ್ಟನಂ = ಪೊಟ್ಟಣಂ ; ಪುಟ್ಟಾ = ಹೊಟ್ಟೆಯುಂ, ಹುಳ್ತವುಂ.
ಚುಟ್ಟಯತಿ = ಸುತ್ತಿದಪಂ ; ಚುಟ್ಟಕಃ = ಸುತ್ತುವಂ ; ಚುಟ್ಟಃ = ಬಳಸು ; ಚುಟ್ಟಃ = ಬಂಧು ; ಚುಟ್ಟಾ = ಇಳಿಕೆ.

ಮುಟ, ಮುಟ್ಟ—ಸಂಚೂರ್ಣನೇ, ಹುಡಿಯೊಳ್ :
ಮೋಟಯತಿ = ಹುಡಿಯಾದಪಂ ; ಮೋಟಃ = ಹುಡಿಯಾದಂ ; ಮೋಟೀ = ಹುಡಿಯಾದಳ್ ; ಮೋಟುಃ = ಮೊಂಡು ; ಮೋಟನಂ, ಮೋಟನೀಯಂ, ಈ ೨ ಹುಡಿ.
ಮುಟ್ಟಯತಿ = ಮುಟ್ಟಿದಪಂ ; ಮುಟ್ಟಃ = ಮುಟ್ಟುವಂ; ಮುಟ್ಟುಃ = ಸೂತಕಂ ; ಮುಟ್ಟನಂ = ಮುಡಿಗೆ.

ಸ್ಮಿಟ್ಟ, ಅಟ್ಟ, ಷುಟ್ಟ—ಅನಾದರೇ, ಅನಾದರದೊಳ್ :
ಸ್ಮೇಟಯತಿ = ವಗಡಿಸಿದಪಂ ; ಸ್ಮೇಟನ್, ಸ್ಮೇಟಕಃ, ಸ್ಮೇಟಃ, ಈ ೩ ವಗಡಿಸುವಂ ; ಸ್ಮೇಟನಂ, ಸ್ಮೇಟನೀಯಂ, ಈ ೨ ವಗಡು.
ಅಟ್ಟಯತಿ = ಓಗರವಾದಪುದು ; ಅಟ್ಟಂ = ಓಗರಂ.
ಸುಟ್ಟಯತಿ = ರುಚಿಸಲ್ಕತ್ಕುದು ; ಸುಟ್ಟಂ = ಮೇಲೋಗರಂ.

ಘಟ್ಟ, ಘುಟ್ಟ—ಚಲನೇ, ಹಂದಿಕೆಯೊಳ್ :
ಘಟ್ಟಯತಿ = ಚಲಿಸಿದಪುದು ; ಘಟ್ಟಃ = ಮೋಡಂ ; ಘಟ್ಟನಂ, ಘಟ್ಟನೀಯಂ, ಈ ೨ ಗಟ್ಟಣೆ.
ಘುಟ್ಟಯತಿ = ಒಣಗಿದಪುದು ; ಘಟ್ಟಃ, ಘಟ್ಟಾ, ಘಟ್ಟಿಃ, ಘಟಿ, ಈ ೪ ಚಟ್ಟೆ.

ಛದ—ಸಂವರಣೇ, ಹೊದೆಪಿನೊಳ್ :
ಛಾದಯತಿ = ಹೊದೆದಪಂ ; ಛದನ್, ಛದಕಃ, ಈ ೨ ಹೊದೆದಂ ; ಛದಃ = ಎಳೆ ; ಛದ್ಮನ್ = ಕಪಟಂ ; ಛತ್ರಕಂ = ಸತ್ತಿಗೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಛಾತ್ರಃ = ಶಿಷ್ಯಂ ; ಆಚ್ಛಾದನಂ, ಆಚ್ಛಾದನೀಯಂ, ಈ ೨ ಹೊದೆವು ; ಛತ್ರಂ = ಕೊಡೆಯುಂ, ಅನ್ನದಾನದ ಮನೆಯುಂ ; ಛತ್ರಿಕಾ = ಕೆಸವು.

ಶಠ, ಶ್ವಠ—ಸಂಸ್ಕಾರಗತ್ಯೋಃ, ಮಾಟದೊಳಂ, ನಡೆಯೊಳಂ :

ಶಾಠಯತಿ = ಮಾಜಿದಪಂ ; ಶಠನ್, ಶಠಃ, ಈ ೨ ಮಾಜುವಂ ; ಶಠಾ, ಶಠನಂ, ಶಠನೀಯಂ, ಶಾಠ್ಯಂ, ಈ ೪ ಸಟೆ.

ಶ್ವಾಠಯತಿ = ತಪ್ಪಿಸಿದಪಂ ; ಶ್ವಠನ್, ಶ್ವಠಃ, ಈ ೨ ತಪ್ಪಿಸುವಂ ; ಶ್ವಠನಂ, ಶ್ವಠನೀಯಂ, ಶ್ವಾಠ್ಯಂ, ಶ್ವಠಾ, ಈ ೪ ತಪ್ಪು.

ಖಟ್ಟ—ಸಂವರಣೇ, ಸುತ್ತಿಸೊಳ್ :

ಖಟ್ಟಯತಿ = ಸುತ್ತಿದಪಂ ; ಖಟ್ಟಃ, ಖಟ್ಟನ್, ಖಟ್ಟಕಃ, ಈ ೩ ಸುತ್ತುವಂ ; ಖಟ್ಟನಂ, ಖಟ್ಟನೀಯಂ, ಈ ೨ ಸುತ್ತು.

ಷಟ್ಟ, ತುಜಿ, ಪಿಜಿ, ಪಿಸಿ—ಹಿಂಸಾ, ಬಲ, ದಾನ, ನಿಕೇತನೇಷು, ಕೊಲೆಯೊಳಂ, ಬಲ್ಮೆಯೊಳಂ, ಈವಿಯೊಳಂ, ಮನೆಯೊಳಂ :

ಸಟ್ಟಯತಿ = ಸೀಳ್ದಪಂ ; ಸಟಾ = ಸೀಳು.

ತುಂಜಯತಿ = ಬಲ್ತಪುದು ; ತುಂಜಾ = ಬಲ್ಮೆ.

ಪಿಂಜಯತಿ = ಕೊಟ್ಟಪಂ ; ಪಿಂಜಾರಃ = ಅರಳೆಯನೆಕ್ಕುವಂ ; ಪಿಂಜಾರೀ = ದಂಡಿಕೋರ್ಧ್ವಾಚ್ಛಾದನಂ.

ಪಿಂಸಯತಿ = ಮನೆಯಾದಪುದು ; ಪಿಂಸಾ = ನೆಳಲ್.

ಶುಲ್ಕ, ವಲ್ಕ—ಭಾಷಣೇ, ನುಡಿಯೊಳ್ :

ಶುಲ್ಕಯತಿ = ಗದ್ದಲಿಸಿದಪಂ; ಶೌಲ್ಕಿಕಃ = ಸುಂಕಿಗಂ; ಶುಲ್ಕಂ = ಮಾಂಸವುಂ, ಸುಂಕವುಂ.

ವಲ್ಕಯತಿ = ಎಡೆದಪುದು ; ವಲ್ಕಲಂ = ತೊವಟೆ.

ಶ್ವರ್ತ, ಛಪಿ, ಪಥಿ—ಗತೌ, ನಡೆಯೊಳ್ :

ಶ್ವರ್ತಯತಿ = ನಡೆದಪಂ ; ಶ್ವರ್ತನ್, ಶ್ವರ್ತಕಃ, ಶ್ವರ್ತಃ, ಈ ೩ ನಡವಳಿಕಾರಂ ; ಶ್ವರ್ತನಂ, ಶ್ವರ್ತನೀಯಂ, ಈ ೨ ನಡವಳಿ.

ಛಂಪಯತಿ = ಹಾರ್ದಪಂ ; ಛಂಪನ್, ಛಂಪಃ, ಛಂಪಕಃ, ಈ ೩ ಹಾರ್ವಂ ; ಛಂಪನಂ, ಛಂಪನೀಯಂ, ಈ ೨ ಹಾರ್ಕೆ ; ಛಂಪಾ = ಸಂಪೆಯ ಹಣ್ಣ ಮರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂಥಯತಿ = ಹರಿದಪಂ ; ಪಾಂಥಃ, ಪಥಿಕಃ, ಪಂಥನ್, ಈ ೩ ಹರಿಕಾರಂ ; ಪಂಥನಂ, ಪಂಥನೀಯಂ, ಈ ೨ ಹರಿತಂ ; ಪಥಿನ್ = ದಾರಿ.

ಕ್ಷಪಿ, ಪಪಿ, ಕಪಿ, ಚಪಿ, ಸಪಿ—ಕ್ಷಾಂತೌ, ತಾಳ್ಮೆಯೊಳ್ :

ಕ್ಷಂಪಯತಿ = ತಾಳ್ದಪಂ ; ಕ್ಷಂಪನ್, ಕ್ಷಂಪಃ, ಕ್ಷಂಪಕಃ, ಈ ೩ ತಾಳ್ಮೆವಂತಂ ; ಕ್ಷಂಪನಂ, ಕ್ಷಂಪನೀಯಂ, ಈ ೨ ತಾಳ್ಮೆ ; ಕ್ಷಂಪಾ, ಕ್ಷಪಾ, ಈ ೨ ಇರುಳ್.

ಪಂಪಯತಿ = ಸ್ಯೈರಿಸಿದಪಂ ; ಪಂಪಃ, ಪಂಪಕಃ, ಪಂಪನ್, ಈ ೩ ಸ್ಯೈರಣೆವಂತಂ ; ಪಂಪಾ = ವಿರೂಪಾಕ್ಷ ಕ್ಷೇತ್ರಂ.

ಕಂಪಯತಿ = ಅಂಜಿಸಿದಪುದು ; ಕಂಪಾ = ಬೇಲಿ ; ಕಂಪಿಲಂ = ರಾಮೇಶ್ವರ ಕ್ಷೇತ್ರಂ ; ಕಂಪಂ = ಮಹಾಪಂಕಂ.

ಚಂಪಯತಿ = ಹೊರೆದಪುದು ; ಚಂಪಾ = ಏಕೋರಾಮೇಶ್ವರ ಕ್ಷೇತ್ರಂ ; ಚಂಪಕಃ = ಮರಂ.

ಸಂಪಯತಿ = ಫಲಿಸಿದಪುದು ; ಸಂಪಾ = ಮರಂ.

ಪಿಛಿ, ಪುಛ, ಪಛ, ಪಿಛ—ಕುಟ್ಟನೇ, ವಿಭಾಗದೊಳ್ :

ಪಿಂಛಯತಿ = ಬಣ್ಣವಾದಪುದು ; ಪಿಂಛಂ = ನವಿಲಗರಿ.

ಪುಚ್ಛಯತಿ = ವಿಭಾಗಿಸಿದಪುದು ; ಪುಚ್ಛಂ = ಬಾಲಂ ; ಪುಚ್ಛೀ = ಯೋನಿ.

ಪಚ್ಛಯತಿ = ಬಣ್ಣಿಸಿದಪುದು ; ಪಚ್ಛಾ = ಪಚ್ಚೆ ; ಪಚ್ಛೀ = ನಾಣದಾಣಂ.

ಪಿಚ್ಛಯತಿ = ಹೆಪ್ಪಾದಪುದು; ಪಿಚ್ಛಾ = ಹೆಪ್ಪು ; ಪಿಚ್ಛಿಲಂ = ತೊಳೆ.

ತಟಿ, ತಡ—ಆಘಾತೇ, ಕೊರೆತದೊಳ್ :

ತಾಟಯತಿ = ಕೊರೆದಪುದು ; ತಟಾಕಃ = ಕೆರೆ ; ತಟಿನೀ = ತೊರೆ ; ತಟಿತ್ = ಮಿಂಚು; ತಟಿತ್ವಾನ್ = ಮೋಡಂ ; ತಟಂ = ಹೊಳೆಯ ಕರೆ ; ತಟತಟಾ = ಜಲಧಾರೆ ; ತಾಟಂಕಃ = ಕಿವಿಯೋಲೆ ; ತಾಟಕಃ = ತಂಡುಕಂ ; ತಾಟಕೀ = ರಾವಣನ ತಂಗಿ ; ತಾಟೀ, ತಾಟಃ, ಈ ೨ ಓಲೆಯ ಮರಂ.

ತಾಡಯತಿ = ಸವರಿದಪುದು ; ತಡಃ, ತಡೀ, ಈ ೨ ತೊರೆಯ ಗಡ್ಡೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಡಾಯುಃ = ಹೊಳೆಯ ಕಟ್ಟೆ ; ತಡೀ = ಹೊಳೆಯುಂ, ತೇವವುಂ; ತಡಃ = ಆಲಸ್ಯಕಾರಂ ; ತಡಾ = ಬಂಧನಂ ; ತಾಡಃ, ತಾಡಕಃ, ಈ ೨ ಬಡಿಹುರಿ ; ತಾಡುಃ = ಹಗ್ಗಂ ; ತಾಡಾ = ತಾಳೆ.

ಖಡ, ಖಡಿ, ಕಡ, ಕಡಿ—ಭೇದೇ, ಬೇರ್ಪಡುಹಣದೊಳ್ :

ಖಾಡಯತಿ = ಬೇರ್ಪಟ್ಟಪಂ ; ಖಡನ್, ಖಡಕಃ, ಈ ೨ ಬೇರ್ಪಟ್ಟಂ; ಖಡ್ಗಂ = ಕತ್ತಿ ; ಖಾಡಾಖಾಡಿ = ಕೊಳಗುಳಂ ; ಖಡಿತಂ, ಖಡನಂ, ಖಡನೀಯಂ, ಖಡಂ, ಖಾಡಂ, ಈ ೫ ಬೇರ್ಕೆ.

ಖಂಡಯತಿ = ತುಂಡಿಸಿದಪಂ ; ಖಂಡಿತಂ, ಖಂಡಂ, ಖಂಡನೀಯಂ, ಖಂಡಿಃ, ಈ ೪ ಕಡಿ ; ಖಂಡೆಯುಂ = ಕತ್ತಿ.

ಕಾಡಯತಿ = ಭೇದಿಸಿದಪಂ ; ಕಡನ್, ಕಡಕಃ, ಈ ೨ ಭೇದಿಸುವಂ ; ಕಡಂ = ನಾಲಂ ; ಕಡಿಃ = ಅರ್ಥಂ ; ಕಾಡಃ = ಚಂಚಂ ; ಕಾಡೀ = ಚಂಚಿ ; ಕಾಡುಃ = ಅಡವಿ.

ಕಂಡಯತಿ = ಜಾಲಿಸಿದಪುದು ; ಕಂಡಂ = ಮಾಂಸಪೃಥುಳಂ ; ಕಂಡಿಃ = ತೂತು; ಕಾಂಡಃ = ಪರಿಚ್ಛೇದವುಂ, ಅಂಬುಂ, ನೀರುಂ; ಕಂಡ = ಅಲಾ ; ಕಡ = ಅಕಟ.

ಣಷ್ಕ, ಧಷ್ಕ, ಪಶಿ, ಪಶ—ನಾಶೇ, ಅಳಿವಿನೊಳ್ :

ನಷ್ಕಯತಿ = ಅಳಿದಪಂ ; ನಷ್ಕನ್, ನಷ್ಕಕಃ, ಈ ೨ ಅಳಿವಂ ; ನಷ್ಕಂ, ನಷ್ಕಣಂ, ನಷ್ಕಣೀಯಂ, ಈ ೩ ಅಳಿವು.

ಧಷ್ಕಯತಿ = ದಟ್ಟಿಸಿದಪಂ ; ಧಷ್ಕನ್, ಧಷ್ಕಕಃ, ಈ ೨ ದಟ್ಟಿಸುವಂ; ಧಷ್ಕಂ, ಧಷ್ಕಣಂ, ಧಷ್ಕಣೀಯಂ, ಈ ೩ ದಟ್ಟಿಸುಹಣಂ.

ಪಂಶಯತಿ = ತೊಡೆದಪಂ ; ಪಂಶನ್, ಪಂಶಕಃ, ಈ ೨ ತೊಡೆವಂ ; ಪಂಶಂ, ಪಂಶನಂ, ಪಂಶನೀಯಂ, ಈ ೩ ತೊಡೆತಂ ; ಪಾಂಶುಃ = ಧೂಳಿ ; ಪಾಂಶುಲಾ = ಜಾರೆ; ಪಾಂಶಾ = ಹಾಚಿ; ಪಾಂಶಲಃ= ಕುಡಗೋಲ್.

ಪಾಶಯತಿ = ನಾನಾ ದೇಹಂಗಳಲ್ಲಿ ತೊಳಲ್ದಪುದು ; ಪಶುಃ = ಜೀವಂ ; ಪಾಶಃ = ಹಗ್ಗವುಂ, ಇಂದ್ರಿಯವುಂ ; ಪಶಿಃ = ಹಸಿ ; ಪಾಶೀ = ವರುಣಂ ; ಪಶಂ = ಹಂಸಂ.

ಚಷ್ಕ, ಚುಷ್ಕ—ವ್ಯಥನೇ, ಚಾಲಿವರಿಕೆಯೊಳ್ :

ಚಷ್ಕಯತಿ = ಚಾಲಿವರಿದಪಂ ; ಚಷ್ಕನ್, ಚಷ್ಕಕಃ, ಈ ೨ ಚಾಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರಿವಂ ; ಚಷ್ಕಾ = ಚಕ್ಕೆ ; ಚಷ್ಕುಲಿಃ = ಚಕ್ಕುಲಿ ; ಚಷ್ಕುಃ = ಚಕ್ಕು.

ಚುಷ್ಕಯತಿ = ಮಿಡಿಕಿದಪಂ ; ಚುಷ್ಕನ್, ಚುಷ್ಕಕಃ, ಈ ೨ ಮಿಡುಕುವಂ ; ಚುಷ್ಕಾ = ಚುಕ್ಕೆ ; ಚುಷ್ಕಂ = ಚುಕ್ಕಂ ; ಚುಷ್ಕಿಃ = ಚುಕ್ಕಿ.

ಪುಸ್ತ—ಆದರಾನಾದರಯೋಃ, ಹಿತದೊಳಂ, ಅಹಿತದೊಳಂ :
ಪುಸ್ತಯತಿ = ಹಿತವಾದಪುದು ; ಪುಸ್ತಂ, ಪುಸ್ತಕಂ, ಈ ೨ ಹೊತ್ತಗೆ ; ಪುಸ್ತಿಃ = ಅಪ್ಪಿಗೆ.

ಮಸ್ತ—ಧಾರಣೇ, ತಾಳ್ಕೆಯೊಳ್ :
ಮಸ್ತಯತಿ = ತಾಳ್ದಪುದು ; ಮಸ್ತಂ, ಮಸ್ತಕಂ, ಈ ೨ ತಲೆ ; ಮಸ್ತುಃ = ಮದಂ ; ಮಾಸ್ತೀ = ಮದವತಿ.

ಮುಸ್ತ—ಗಂಧೇ, ಪರಿಮಳದೊಳ್ :
ಮುಸ್ತಯತಿ = ಪರಿಮಳಿಸಿದಪುದು ; ಮುಸ್ತಾ = ಕೊಡನಾರಿ (ಕೊನ್ನಾರಿ)

ಬಿಸ್ತ—ಜಲೋತ್ತರಣೇ, ನೀರೇಸಿನೊಳ್ :
ಬಿಸ್ತಯತಿ = ನೀರೇಸಿದಪಂ ; ಬಿಸ್ತಃ = ತೊರೆಯಂ.

ಕಸ್ತ—ಆಮೋದೇ, ಕಮ್ಮಿತ್ತರೊಳ್ :
ಕಸ್ತಯತಿ = ಕಮ್ಮಿಸಿದಪುದು ; ಕಸ್ತೂರೀ = ಮಿಕಂ.

ಅಸ್ತ—ನಾಶೇ, ಕೇಡಿನೊಳ್ :
ಅಸ್ತಯತಿ = ಕೆಟ್ಟಪುದು ; ಅಸ್ತಂ = ಕೇಡು.

ಹಸ್ತ—ಆದಾನೇ, ಕುಡುವಲ್ಲಿ, ಕೊಂಬಲ್ಲಿ :
ಹಸ್ತಯತಿ = ಕೊಟ್ಟಪುದು, ಕೊಂಡಪುದು ; ಹಸ್ತಃ = ಕೈಯ್ ; ಹಸ್ತೀ = ಆನೆ.

ಶಿಸ್ತ—ಮರ್ಯಾದಾಯಾಂ, ಕಟ್ಟಲೆಯೊಳ್ :
ಶಿಸ್ತಯತಿ = ಕಟ್ಟಾದಪುದು ; ಶಿಸ್ತುಃ = ಕಟ್ಟಲೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಸ್ತ—ಸಾಮಗ್ರೀವೃದ್ಧೌ, ದ್ರವ್ಯಸಂಪತ್ತಿಸೊಳ್ :
ರಸ್ತಯತಿ = ದ್ರವ್ಯಂಕೂಡಿದಪುದು ; ರಸ್ತಿಃ = ದ್ರವ್ಯಸಂಪತ್ತಿ.

ದಸ್ತ—ವಿಕಾರೇ, ವಿಕೃತಿಯೊಳ್ :
ದಸ್ತಯತಿ = ವಿಕಾರಿಸಿದಪುದು ; ದಸ್ತಿಃ = ವಿಕಾರಂ.

ಕ್ಷಲ—ಶೌಚೇ, ಶುಚಿತ್ವದೊಳ್ :
ಕ್ಷಾಲಯತಿ = ತೊಳೆದಪಂ ; ಕ್ಷಾಲಕಃ = ತೊಳೆವಂ ; ಕ್ಷಾಳನಂ = ತೊಳೆತಂ.

ತಲ—ಪ್ರತಿಷ್ಠಾಯಾಂ, ನೆಡುಗೆಯೊಳ್ :
ತಾಲಯತಿ = ನೆಟ್ಟಪುದು ; ಅತಲಃ, ವಿತಲಃ, ಸುತಲಃ, ಮಹಾತಲಃ, ರಸಾತಲಃ, ತಳಾತಲಃ, ಪಾತಾಲಃ, ಈ ೭ ಅಡಿಯಣ ಲೋಕಂ ; ತಳಂ = ನೆಲಂ ; ತಾಳಂ = ವಾದ್ಯೋಪಕರಣವುಂ, ಮರಸುಂ ; ತಾಳಾ = ಕೇದಗೆ ; ತಾಲೀ, ತಾಲೀಯುಂ, ಈ ೨ ತಾಳೆಯ ಹಣ್.

ಘುಷಿರ್—ವಿಶಬ್ದೇ, ಬಿರುದನಿಯೊಳ್ :
ಘೋಷಯತಿ = ಬಿರುದನಿಗೊಟ್ಟಪಂ : ಘೋಷನ್, ಘೋಷಕಃ, ಈ ೨ ಬಿರುದನಿವಂತಂ ; ಘುಷ್ಟಿಃ, ಘೋಷಃ, ಘೋಷಣಂ, ಘೋಷಣೀಯುಂ, ಈ ೪ ಬಿರುದನಿ.

ತುಲ—ಉನ್ಮಾನೇ, ತೂಕದೊಳ್ :
ತೋಲಯತಿ = ತೂಗಿದಪುದು ; ತುಲಾ = ತಕ್ಕಡಿಯುಂ, ತೊಲೆಯುಂ, ಹಾರಾಡುವ ಹುಳುವುಂ ; ತೂಲಃ = ಅರಳೆಯುಂ, ಆವೇಶವುಂ ; ತೋಳಃ = ವೃಕಂ ; ತೋಳುಃ = ಬಾಹು ; ತುಲ್ಯಂ, ತುಲನಂ, ತುಲನೀಯುಂ, ಈ ೩ ತೂಕಂ.

ದೂಲ—ಉತ್ಕ್ಷೇಪೇ, ಎಸುಗೆಯೊಳ್ :
ದೋಲಯತಿ = ಎಚ್ಚಪಂ ; ದೋಲನ್, ದೋಲಕಃ, ಈ ೨ ಇಸುವಂ ; ದೋಲನಂ, ದೋಲನೀಯುಂ, ಈ ೨ ಎಸುಗೆ ; ದೋಲಾ = ಉಯ್ಯಾಲೆ ; ಆಂದೋಳಂ = ದಂಡಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೃಥು—ಪ್ರಕ್ಷೇಪಣೇ, ಪ್ರಕಟದೊಳ್ :

ಪರ್ಥಯತಿ = ಪ್ರಕಟಸಿದಪಂ ; ಪಾರ್ಥಃ = ಅರ್ಜುನನುಂ, ಅರಸುಂ; ಪಾರ್ಥಿವಃ = ಅರಸು ; ಪೃಥುಃ = ವೈನ್ಯರಾಜಂ ; ಪೃಥುಕಾಲಃ = ಹಿಮವತ್ಪರ್ವತದ ಮೂಡಣ ಯುವನದ್ವೀಪಂ ; ಪೃಥ್ವೀ, ಪೃಥಿವೀ, ಈ ೨ ನೆಲಂ ; ಪೃಥಕ್ = ಬೇರೆ ; ಪರ್ಥನಂ, ಪರ್ಥನೀಯುಂ, ಈ ೨ ಪ್ರಕಟಂ.

ಸಂಬ, ಬುಲ—ಸಂಬಂಧೇ, ಎರಕದೊಳ್ :

ಸಂಬಯತಿ = ಎರೆದಪಂ ; ಸಂಬಃ, ಸಂಬನ್, ಸಂಬಕಃ, ಈ ೩ ಎರೆವಂ ; ಸಂಬನಂ, ಸಂಬನೀಯುಂ, ಈ ೨ ಎರಕಂ.

ಬೋಳಯತಿ = ಬೋಳಾದಪಂ ; ಬೋಳಃ = ಬೋಳಾದಂ ; ಬೋಳುಃ = ಮುಂಡನಂ ; ಬೋಳೀ = ಬೋಳತರುವುಂ, ಮುಂಡೆಯುಂ.

ಷೂಪ—ಸಮುಚ್ಛ್ರಾಯೇ, ಏಳಿಗೆಯೊಳ್ :

ಸೂಪಯತಿ = ಏಳ್ದಪಂ ; ಸೂಪಕಃ = ಏಳ್ದಂ ; ಸೂಪಂ = ಪಾಕಶಾಸ್ತ್ರವುಂ, ತೊವ್ವೆಯುಂ.

ಮೂಲ—ಪ್ರತಿರೋಹಣೇ, ಬೇರ್ವರಿವಲ್ಲಿ :

ಮೂಲಯತಿ = ಬೇರ್ವರಿದಪುದು ; ಮೂಲಂ = ಬೇರ್ ; ಮೂಲಕಂ = ಮೂಲಂಗಿ ; ಮೂಲೀ = ಹಸುವೆಯುಂ, ಗೋಟುಂ ; ಮೂಳಃ = ಕರ್ಣಹೀನಂ ; ಮೂಳೀ = ಕರ್ಣಹೀನೆ ; ಮೂಳುಃ = ಕರ್ಣಹೀನತ್ವಂ ; ಮೂಳಾ = ಮೂಳೆ ; ಮೋಳಃ = ಗಂಡು ಬೆಕ್ಕು ; ಉತ್ಪಾರಮೂಳಾ = ಉಪ್ಪರ ಮೋಳೆ.

ಕ್ಷಜಿ—ಕೃಚ್ಛ್ರಜೀವನೇ, ಕಷ್ಟದ ಬಾಳ್ವೆಯೊಳ್ :

ಕ್ಷಂಜಯತಿ = ಕಷ್ಟದಿಂ ಬಾಳ್ದಪಂ ; ಕ್ಷಂಜಃ, ಕ್ಷಂಜಕಃ, ಈ ೨ ಕಷ್ಟದಿಂ ಬಾಳ್ವಂ ; ಕ್ಷಂಜನಂ, ಕ್ಷಂಜನೀಯುಂ, ಈ ೨ ಕಷ್ಟದ ಬಾಳ್ವೆ.

ಸಾಂತ್ವ—ಸಾಮಪ್ರಯೋಗೇ, ಸಾಂತದೊಳ್ :

ಸಾಂತ್ವಯತಿ = ಸಾಂತವಾದಪಂ ; ಸಾಂತ್ವನ್, ಸಾಂತ್ವಕಃ, ಈ ೨ ಸಾಂತವಾದಂ ; ಸಾಂತ್ವನಂ, ಸಾಂತ್ವನೀಯುಂ, ಈ ೨ ಸಾಂತಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನ—ಪೂಜಾಯಾಂ, ಹಿರಿದರೊಳ್ :
ಮಾನಯತಿ = ಹಿರಿಯನಾದಪಂ ; ಮಾನೀ, ಮಾನಕಃ, ಮಾನ್ಯಃ, ಈ ೩ ಹಿರಿಯಂ ; ಮಾನನಂ, ಮಾನನೀಯಂ, ಈ ೨ ಹಿರಿದು ; ಮಾನಿನೀ = ಪತಿವ್ರತೆ.

ಚುದ—ಸಂಚೋದನೇ, ಪ್ರೇರಣೆಯೊಳ್ :
ಚೋದಯತಿ = ಪ್ರೇರಿಸಿದಪಂ ; ಚೋದನ್, ಚೋದಕಃ, ಈ ೨ ಪ್ರೇರಕಂ ; ಚೋದನಂ, ಚೋದನೀಯಂ, ಈ ೨ ಪ್ರೇರಣೆ.

ಕಲ, ಪಿಲ, ಡೀಪ, ವಿಲ—ಕ್ಷೇಪೇ, ನಡತೆಯೊಳ್ :
ಕಲಯತಿ = ನಡೆದಪಂ ; ಕಾಲಃ = ಯಮನುಂ, ಅವಸರವುಂ ; ಕಾಲೀ = ಕಲಪರ್ವತನ ಮಗಳ್ ; ಕಲಿಃ = ತಿಷ್ಯಯುಗವುಂ, ಪಾಪವುಂ, ತಿಳಿಯುಂ ; ಕಲಕಲಃ = ಗುಲ್ಲು ; ಕಲಕಲಂ = ಕದಡು ; ಕಲಿಕಾ, ಉತ್ಕಲಿಕಾ, ಈ ೨ ಉದಾಹರಣಗದ್ಯಭೇದಂ ; ಕಾಲಂ, ಕಾಲಿಮಂ, ಈ ೨ ಕರ್ಪು ; ಕಾಲಕಾಲಃ, ಮಹಾಕಾಲಃ, ಈ ೨ ಶಿವಂ ; ಕಲಂ, ಕಲನಂ, ಕಲನೀಯಂ, ಈ ೩ ನಡತೆ.
ಪೇಲತಿ = ಹೊಂದಿದಪಂ ; ಪೇಲನ್, ಪೇಲಕಃ, ಈ ೨ ಹೊಂದುವಂ ; ಪೇಲನಂ, ಪೇಲನೀಯಂ, ಈ ೨ ಹೊಂದುಗೆ.
ಡೀಪಯತಿ = ನೆಗೆದಪಂ ; ಡೀಪನ್, ಡೀಪಕಃ, ಈ ೨ ನೆಗೆವಂ ; ಡೀಪನಂ, ಡೀಪನೀಯಂ, ಈ ೨ ನೆಗೆತಂ.
ವೇಲಯತಿ = ಅವಸರಿಸಿದಪಂ ; ವೇಲನ್, ವೇಲಕಃ, ಈ ೨ ಅವಸರಿಸುವಂ ; ವೇಲಾ, ವೇಲನಂ, ವೇಲನೀಯಂ, ಈ ೩ ಅವಸರಂ.

ಕುಡಿ, ಜಸಿ, ಪಲ—ರಕ್ಷಣೇ, ಹೊರೆತದೊಳ್ :
ಕುಂಡಯತಿ = ಹೊರೆದಪುದು ; ಕುಂಡಂ = ಭಾಜನಂ.
ಜಂಸಯತಿ = ಸಲಹಿದಪಂ ; ಜಂಸಃ = ಸಲಹುವಂ.
ಪಾಲಯತಿ = ಸಾಕಿದಪಂ ; ಪಾಲಕಃ = ಸಾಕುವಂ ; ಪಾಲಃ, ಪಾಲನಂ, ಪಾಲನೀಯಂ, ಈ ೩ ಸಾಕುಹಣಂ.

ಶ್ಲಿಷ—ಶ್ಲೇಷಣೇ, ತಬ್ಬುಗೆಯೊಳ್ :
ಶ್ಲಿಷಯತಿ = ತಬ್ಬಿದಪುದು ; ಶ್ಲೇಷಕಃ = ತಬ್ಬುವಂ ; ಶ್ಲಿಷ್ಟಂ, ಶ್ಲಿಷ್ಟಿಃ, ಶ್ಲೇಷಃ, ಶ್ಲೇಷಣಂ, ಶ್ಲೇಷಣೀಯಂ, ಈ ೫ ತಬ್ಬುಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೂಷ, ಬೂಷ, ಬರ್ಹ—ಹಿಂಸಾಯಾಂ, ಕೊಲೆಯೊಳ್ :
ಲೂಷಯತಿ = ಕೊಂದಪಂ ; ಲೂಷಕಃ = ಕೊಲೆಗಾರಂ ; ಲೂಷಣಂ, ಲೂಷಣೀಯಂ, ಈ ೨ ಕೊಲೆ.
ಬ್ರೂಷಯತಿ = ಬಡಿದಪಂ ; ಬ್ರೂಷಕಃ = ಬಡಿವಂ ; ಬ್ರೂಷಣಂ, ಬ್ರೂಷಣೀಯಂ, ಈ ೨ ಬಡಿತಂ.
ಬರ್ಹಯತಿ = ಕುಕ್ಕಿದಪುದು ; ಬರ್ಹಿಃ = ನವಿಲ್ ; ಬರ್ಹಂ = ನವಿಲಗರಿ.

ಶುಕ್ಲ—ಸರ್ಜನೇ, ಬಿಡುಗೆಯೊಳ್ :
ಶುಕ್ಲಯತಿ = ಬಿಟ್ಟಪಂ ; ಶುಕ್ಲಃ = ಬೆಳ್ಳಿ ; ಶುಕ್ಲಂ = ವೀರ್ಯಂ.

ಜ್ಞಪ—ಜ್ಞೀಯೇ, ಅರಿವಿನೊಳ್ :
ಜ್ಞಾಪಯತಿ = ಅರಿದಪಂ ; ಜ್ಞಪ್ತಃ = ಅರಿದಂ ; ಜ್ಞಪನಂ, ಜ್ಞಪ್ತಿಃ, ಜ್ಞಾಪಕಂ, ಈ ೩ ಅರಿವು.

ಜ್ಞೀಸ—ವಿವೇಕೇ, ಬಲ್ಲವಿಕೆಯೊಳ್ :
ಜ್ಞೀಸಯತಿ = ವಿವೇಕಿಸಿದಪಂ ; ಜ್ಞೀಸಕಃ = ಬಲ್ಲಂ ; ಜ್ಞೀಸನಂ = ಬಲ್ಲವಿಕೆ.

ಯಮ, ರಮ—ಪರಿವೇಷ್ಟನೇ, ಬಟ್ಟಿತ್ತರೊಳ್ :
ಯಮಯತಿ = ಬಳಸಿಕೊಂಡಪಂ ; ಯಮೀ = ಯತಿ ; ಯಮಳಂ = ಜವಳಿ.
ರಮಯತಿ = ಸುತ್ತಿಕೊಂಡಪುದು ; ರಾಮಃ = ಕಳ್ತಿಗಿರು(ಬಂ)ಬುಲಿ.

ಚಪ—ಕಲ್ಕನೇ, ಅರೆತದೊಳ್ :
ಚಾಪಯತಿ = ಅರೆದಪಂ ; ಚಪಲಃ = ಬಾಯಾಳಿ ; ಚಪಲಾ = ಮಿಂಚು ; ಚಾಪಂ = ಬಿಲ್.

ನಾಯ—ಹೇತೌ, ದೂಸರೊಳ್ :
ನಾಯಯತಿ = ದೂಸರಾದಪಂ ; ನಾಯಃ, ನಾಯಕಃ, ಈ ೨ ಕಾರಣಕರ್ತಂ ; ನಾಯನಂ, ನಾಯನೀಯಂ, ಈ ೨ ಕಾರಣಂ.

ವ್ಯಯ—ಕ್ಷಯೇ, ಹೋಕಿನೊಳ್ :
ವ್ಯಯಯತಿ = ವೆಚ್ಚಮಾಡಿದಪಂ ; ವ್ಯಯಃ = ವೆಚ್ಚಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಫುಟ, ಬುಧಿ—ಹಿಂಸಾಯಾಂ, ಹಿಂಸೆಯೊಳ್ :
ಸ್ಫೋಟಯತಿ = ಸೋಯಿಸಿದಪಂ ; ಸ್ಫೋಟಂ = ಸಿಡುಬು.
ಬುಂಧಯತಿ = ದುಗುಡಿಸಿದಪುದು ; ಬುಂಧಂ = ದುಗುಡಂ.

ಪುಣ, ಪಿಡಿ—ಸಂಘಾತೇ, ಸಂಗಡದೊಳ್ :
ಪೂಣಯತಿ = ಸಂಗಡಿಸಿದಪುದು ; ಪುಣಂ = ಅಂಬು.
ಪಿಂಡಯತಿ = ಮುದ್ದೆಯಾದಪುದು ; ಪಿಂಡಂ = ಮುದ್ದೆ.

ಪುಂಸ—ಅಭಿಮರ್ದನೇ, ಹಿಸುಕುವಲ್ಲಿ :
ಪುಂಸಯತಿ = ಹಿಸುಕಿದಪಂ ; ಪುಂಸಃ, ಪುಂಸಕಃ, ಈ ೨ ಗಂಡು ; ನಪುಂಸಂ, ನಪುಂಸಕಂ, ಈ ೨ ಹೆಣ್ಣುಗಂ.

ಟಕಿ—ಬಂಧನೇ, ಒಡೆತದೊಳ್ :
ಟಂಕಯತಿ = ಒಡೆದಪುದು ; ಟಂಕಃ = ಕಲ್ಲುಳಿಯುಂ, ಹೊನ್ನ ಅಚ್ಚಿನ ಮೊಳೆಯುಂ, ಓಲೆಯಂ ತೂತಂ ಕೊರೆವ ಉಂಗರದ ಮೊಳೆಯುಂ.

ಧೂಶ, ಧೂಸ—ಕಾಂತೀಕರಣೇ, ಬೆಳಕಿನ ಮಾಟದೊಳ್ :
ಧೂಶಯತಿ = ಬೆಳಕಿದಪಂ ; ಧೂಶರಃ = ಬೆಳಕುಗಂ ; ಧೂಶನಂ, ಧೂಶನೀಯಂ, ಈ ೨ ಬೆಳಕು.
ಧೂಸಯತಿ = ಬಳಿಕೊಂಡಪಂ ; ಧೂಳಿದೂಸರಃ = ಧೂಳು ಹೊಯ್ಕೊಂಡಂ ; ಧೂಸನಂ, ಧೂಸನೀಯಂ, ಈ ೨ ಧೂಳು ಹೊಯ್ಕೊಂಬುದು.

ಟೀಕೃ—ಬಂಧನೇ, ಪ್ರಚಾರಣೆಯೊಳ್ :
ಟೀಕಯತಿ = ಪ್ರಚಾರಿಸಿದಪಂ ; ಟೀಕಕಃ = ಪ್ರಚಾರಿಸುವಂ ; ಟೀಕಾ = ಪ್ರಚಾರಣೆ.

ಚುಣ—ಸಂಕೋಚೇ, ಮುಗಿತೆಯೊಳ್ :
ಚೂಣಯತಿ = ಮುಗಿಸಿದಪಂ ; ಚುಣಕಃ = ಮುಗಿದಂ ; ಚುಣನಂ, ಚುಣನೀಯಂ, ಈ ೨ ಮುಗಿತೆ.

ಪೂಜ—ಪೂಜಾಯಾಂ, ಅರ್ಚನೆಯೊಳ್ :
ಪೂಜಯತಿ = ಅರ್ಚಿಸಿದಪಂ ; ಪೂಜಕಃ, ಪೂಜಾರೀ, ಪೂಜಾಕಾರಃ, ಈ ೩ ಅರ್ಚಕಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಕ, ಈಡ—ಸ್ತುತೌ, ಹೊಗಳ್ತೆಯೊಳ್ :

ಅರ್ಕಯತಿ = ಹೊಗಳ್ದಪಂ ; ಅರ್ಕಃ = ಸೂರ್ಯನುಂ, ಮುನಿಯುಂ, ಎಕ್ಕೆಯುಂ.

ಈಡಯತಿ = ಕೊಂಡಾಡಿದಪಂ ; ಈಡಕಃ, ಈಡನಂ, ಈಡನೀಯಂ, ಈ ೩ ಕೊಂಡಾಟಂ.

ಶುಠ—ಆಲಸ್ಯೇ, ಅಲಸಿಕೆಯೊಳ್ :

ಶೋಠಯತಿ = ಅಲಸಿದಪಂ ; ಶುಠಃ, ಶೋಠಕಃ, ಶೋಠನ್, ಈ ೩ ಅಲಸುಗಂ ; ಶೋಠನಂ, ಶೋಠನೀಯಂ, ಈ ೨ ಅಲಸುಗೆ.

ಶುಠಿ—ಶೋಷೇ, ಒಣಗಿನೊಳ್ :

ಶುಂಠಯತಿ = ಒಣಗಿದಪಂ ; ಶುಂಠಃ = ಹೆಡ್ಡಂ ; ಶುಂಠನಂ, ಶುಂಠನೀಯಂ, ಈ ೨ ಒಣಮಾತು ; ಶುಂಠೀ = ಸೊಂಟಿ.

ಜುಡ—ವ್ಯಭಿಚಾರೇ, ಪಾಣ್ಬತನದೊಳ್ :

ಜೋಡಯತಿ = ವ್ಯಭಿಚಾರಿಸಿದಪಂ ; ಜೋಡಃ = ವ್ಯಭಿಚಾರಿ ; ಜೋಡಾ = ವ್ಯಭಿಚಾರಿಣೀ ; ಜೋಡುಃ = ಸಹಾಯಂ ; ಜೋಡೀ = ಕಪ್ಪಂ ; ಜೋಡನಂ = ಉಪಾಯಂ.

ಜುಲ—ರಕ್ಷಣೇ, ಹೊರೆತದೊಳ್ :

ಜೋಲಯತಿ = ಹೊರೆದಪುದು ; ಜೋಲಃ = ಜೋಳಂ.

ಚೂರ್ಣ—ಪ್ರೇರಣೇ, ನಿಯಾಮದೊಳ್ :

ಚೂರ್ಣಯತಿ = ಪ್ರೇರಿಸಿದಪಂ ; ಚೂರ್ಣಿತಃ = ಪ್ರೇರಕಂ ; ಚೂರ್ಣಂ = ಸುಣ್ಣಂ.

ಗರ್ಜ—ಕಲಕಲಧ್ವನೌ, ಗುಲ್ಲಿನೊಳ್ :

ಗರ್ಜಯತಿ = ಕೂಗಿದಪಂ ; ಗರ್ಜನ್, ಗರ್ಜಕಃ, ಗರ್ಜಿತಃ, ಈ ೩ ಕೂಗುವಂ ; ಗರ್ಜನಂ, ಗರ್ಜನೀಯಂ, ಈ ೨ ಕೂಗು.

ಮಾರ್ಜ—ಶುದ್ಧೌ, ಸುದ್ದದೊಳ್ :

ಮಾರ್ಜಯತಿ = ಸುದ್ದಿಸಿದಪಂ ; ಮಾರ್ಜನ್, ಮಾರ್ಜಕಃ, ಈ ೨ ಸುದ್ದಂ ; ಸಂಮಾರ್ಜನಂ = ಬಳತಂ ; ಸಂಮಾರ್ಜನೀ = ಕಸಬರಲ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಚಿ—ವಿಸ್ತಾರೇ, ಬಿತ್ತರದೊಳ್ :
ಪಂಚಯತಿ = ಬಿತ್ತರಿಸಿದಪಂ ; ಪಂಚನ್ = ಅಯ್ದು ; ಪಂಚೀ = ವರಾಟಖೇಲನಂ ; ಪಂಚಮಃ = ಬಣಜಿಗಂ ; ವಿಪಂಚೀ = ವೀಣೆಯುಂ, ಗೃಹಬಹಿರ್ವೇದಿಯುಂ ; ಪಂಚಾಸ್ಯಃ = ಶಿವನುಂ, ಸಿಂಹನುಂ ; ಪಂಚಕಂ = ಕುದುರೆಯ ಕತ್ತು ; ಪಂಚನಂ, ಪಂಚನೀಯಂ, ಈ ೨ ಬಿತ್ತರಂ.

ರಿಚಿ—ವಿಸ್ತಾರೇ, ಬಿತ್ತರದೊಳ್ :
ರಿಂಚಯತಿ = ಬಿತ್ತರಿಸಿದಪಂ ; ವಿರಿಂಚಃ = ಬ್ರಹ್ಮಂ.

ತಿಜ—ನಿಶಾತನೇ, ಕೂರಿತ್ತರೊಳ್ :
ತೇಜಯತಿ = ಕೂರಿತ್ತಾದಪಂ ; ತೇಜಸ್ವೀ = ಪ್ರಭಾವವುಳ್ಳಂ ; ತೇಜಸ್ = ಪ್ರಭಾವಂ.

ಕೃತ—ಸಂಶಬ್ದೇ, ಬಣ್ಣಿಸುಹಣದೊಳ್ :
ಕೀರ್ತಯತಿ = ಬಣ್ಣಿಸಿದಪಂ ; ಕೀರ್ತನ್, ಕೀರ್ತಕಃ, ಈ ೨ ಬಣ್ಣಿಸುವಂ ; ಕೀರ್ತನಂ, ಕೀರ್ತನೀಯಂ, ಕೀರ್ತಿಃ, ಈ ೩ ಬಣ್ಣಿಸುಹಣಂ.

ಕುಬಿ—ಛಾದನೇ, ಹೊದೆಪಿನೊಳ್ :
ಕುಂಬಯತಿ = ಹೊದೆದಪಂ ; ಕುಂಬನ್, ಕುಂಬಕಃ, ಈ ೨ ಹೊದೆವಂ ; ಕುಂಬನಂ, ಕುಂಬನೀಯಂ, ಈ ೨ ಹೊದೆಪು.

ವೃಧು—ವರ್ಧನೇ, ಪೆರ್ಚುಗೆಯೊಳ್ :
ವರ್ಧಯತಿ = ಪೆರ್ಚಿದಪಂ ; ವರ್ಧಕಿಃ = ಬಡಗಿ ; ವರ್ಧನಂ = ಪೆರ್ಚುಗೆ.

ಲುಬಿ, ತುಬಿ—ಅರ್ದನೇ, ಹೊಂದಿಕೆಯೊಳ್ :
ಲುಂಬಯತಿ = ಹೊಂದಿದಪಂ ; ಲುಂಬನ್, ಲುಂಬಕಃ, ಈ ೨ ಹೊಂದುವಂ ; ಲುಂಬನಂ, ಲುಂಬನೀಯಂ, ಈ ೨ ಹೊಂದಿಕೆ.
ತುಂಬಯತಿ = ನುಡಿಸಿದಪಂ ; ತುಂಬರುಃ = ಗಂಧರ್ವಂ ; ತುಂಬಾ = ದ್ರೋಣಿಂ ; ತುಂಬಿಕಾ = ಸೋರೆ ; ತುಂಬುಃ = ತಟಾಕಜಲ ವೃಂತಂ ; ತುಂಬಿಃ = ಭ್ರಮರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹ್ಲಪ—ವ್ಯಕ್ತಾಯಾಂವಾಚಿ, ಒಳ್ಳಿತ್ತಹ ನುಡಿಯೊಳ್ :

ಹ್ಲಾಪಯತಿ = ಒಳ್ಳಿತ್ತಾಗಿ ನುಡಿದಪಂ ; ಹ್ಲಪನ್, ಹ್ಲಪಕಃ, ಈ ೨ ಒಳ್ಳಿತ್ತಾಗಿ ನುಡಿವಂ ; ಹ್ಲಪನಂ, ಹ್ಲಪನೀಯಂ, ಈ ೨ ಒಳ್ಳಿತ್ತು ನುಡಿ.

ಮ್ಲೇಚ್ಛ, ಚುಟಿ—ಛೇದನೇ, ಕೊರೆತದೊಳ್ :

ಮ್ಲೇಚ್ಛಯತಿ = ಕೊರೆದಪಂ ; ಮ್ಲೇಚ್ಛಃ = ತುರುಷ್ಕಂ ; ಮ್ಲೇಚ್ಛನಂ, ಮ್ಲೇಚ್ಛನೀಯಂ, ಈ ೨ ಕೊರೆತಂ.

ಚುಂಟಯತಿ = ಹರಿದಪಂ ; ಚುಂಟಃ = ಹರಿದಂ ; ಚುಂಟನಂ, ಚುಂಟನೀಯಂ, ಈ ೨ ಹರಿತಂ.

ಮ್ಲಕ್ಷ, ಮ್ರಕ್ಷ—ಕ್ಷರಣಸ್ನಿಗ್ಧಾರ್ಥೇ, ಒರಸುಹಣದೊಳಂ, ದಟ್ಟಿತ್ತರೊಳಂ :

ಮ್ಲಕ್ಷಯತಿ = ಒರಸಿದಪಂ ; ಮ್ಲಕ್ಷಃ = ಒರಸುವಂ ; ಮ್ಲಕ್ಷಣಂ = ಒರಸುಹಣಂ.

ಮ್ರಕ್ಷಯತಿ = ತೊಡೆದಪಂ ; ಮ್ರಕ್ಷಃ = ತೊಡೆದಂ ; ಮ್ರಕ್ಷಣಂ = ತೊಡೆತಂ.

ಇಲ—ಪ್ರೇರಣೇ, ನಿಯಾಮದೊಳ್ :

ಏಲಯತಿ = ಪ್ರೇರಿಸಿದಪುದು ; ಏಲಾಪತ್ರಃ = ಚಿತ್ರವರ್ಣದ ಹಾವು ; ಏಲಕಃ = ಎಳಗಂ ; ಇಲಾ = ನೆಲಂ.

ಲುಂಟ—ಸ್ತೇಯೇ, ಕಳವಿನೊಳ್ :

ಲುಂಟಯತಿ=ಕಳ್ದಪಂ ; ಲುಂಟಃ, ಲುಂಟನ್, ಲುಂಟಕಃ, ಲುಂಟಾಕಃ, ಈ ೪ ಕಳ್ಳಂ ; ಲುಂಟನಂ, ಲುಂಟನೀಯಂ, ಈ ೨ ಕಳುವು.

ಛರ್ದ—ವಮನೇ, ಕಾರಿಕೆಯೊಳ್ :

ಛರ್ದಯತಿ = ಕಾರ್ದಪಂ ; ಛರ್ದನ್, ಛರ್ದಕಃ, ಈ ೨ ಕಾರ್ವಂ ; ಛರ್ದಿಃ, ಛರ್ದನಂ, ಛರ್ದನೀಯಂ, ಈ ೩ ಕಾರಿಕೆ.

ಶೂರ್ಪ—ಮಾನೇ, ಪವಣೊಳ್ :

ಶೂರ್ಪಯತಿ = ಪವಣಿಸಿದಪಂ ; ಶೂರ್ಪಕಃ = ಪವಣುಗಂ ; ಶೂರ್ಪಂ = ಮೊರಂ ; ಶೂರ್ಪಣಖೀ = ರಾವಣನ ತಂಗಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಡಿ—ವೇಷ್ಟನೇ, ಸುತ್ತಿಸೊಳ್ :

ಗುಂಡಯತಿ = ಸುತ್ತಿದಪುದು ; ಅಮರಗುಂಡಂ = ಸುರರ ಸುತ್ತು ; ಚಂದ್ರಗುಂಡಂ = ಚಂದ್ರನ ಸುತ್ತು ; ಗುಂಡೀ = ಭೂಸಿಮ್ಮಂ ; ಗುಂಡುಃ = ಶಿಲಾಶಿಖರಂ ; ಗುಂಡಾರಂ = ಕೋಡುಗಲ್ಲಿಳ ಸಾಲ್.

ಬಲ—ಭೃತೌ, ಹೊರೆತದೊಳ್ :

ಬಾಲಯತಿ = ಹೊರೆದಪಂ ; ಬಾಲಾ = ಹೆಣ್ಣುಂ, ಕದಳಿಯುಂ ; ಬಾಲಕಃ = ಹುಡುಗಂ ; ಬಾಲಕೀ = ಹುಡುಗಿ ; ಬಲಂ = ಬಲ್ಮೆಯುಂ, ದಂಡುಂ, ವೀರ್ಯವುಂ.

ಗರ್ಧ—ಅಭಿಕಾಂಕ್ಷಾಯಾಂ, ಬಲುಬಯಕೆಯೊಳ್ :

ಗರ್ಧಯತಿ = ಬಲುಬಯಸಿದಪಂ ; ಗರ್ಧಃ = ಬಲುಬಯಸಿದಂ ; ಗರ್ಧನಂ = ಬಲುಬಯಕೆ.

ಪೂರ್ವ—ನಿಕೇತನೇ, ಮನೆಯೊಳ್ :

ಪೂರ್ವಯತಿ = ಮನೆಯಾದಪುದು ; ಪೂರ್ವಃ = ಮನೆಯಾಗುವಂ.

ರುಷ—ರೋಷೇ, ರೋಸದೊಳ್ :

ರೋಷಯತಿ=ರೋಸಿಸಿದಪಂ ; ರೋಷಕಃ=ರೋಸೀ ; ರೋಷಣಂ, ರೋಷಣೀಯಂ, ಈ ೨ ರೋಸಂ.

ಮುಡಿ—ಭೂಷಾಯಾಂ, ತೊಡಿಗೆಯೊಳ್ :

ಮುಂಡೂಕಃ = ಕಪ್ಪೆ ; ಮುಂಡಾ = ತಲೆ ; ತಿಲಮುಂಡಿಕಾ = ಎಳ್ಳ ಮುಂಡಿಗೆ ; ಮುಂಡೀ = ಮೊಳಕಾಲು ; ಮುಂಡುಃ = ಋಷಿ ; ಮಾಂಡವ್ಯಃ = ಮುಂಡುವಿನ ಮಗಂ ; ಮುಂಡೋದರಿ = ಪಾಲ್ಗಡಲ ಕಡೆತದಲ್ಲಿ ಕಪ್ಪೆಯ ಹೊಟ್ಟೆಯಲ್ಲಿ ಹುಟ್ಟಿದ ಶಿವನಿಂ ಪಡೆಯಲ್ಪಟ್ಟ ರಾವಣನ ಹೆಂಡತಿ ; ಮುಂಡನಂ, ಮುಂಡನೀಯಂ, ಈ ೨ ತೊಡುಗೆ.

ಶ್ರಣ—ದಾನೇ, ಈವಿಯೊಳ್ :

ಶ್ರಾಣಯತಿ=ಇತ್ತಪಂ ; ಶ್ರಣನ್, ಶ್ರಣಕಃ, ಈ ೨ ಈವಂ ; ಶ್ರಣನಂ, ಶ್ರಣನೀಯಂ, ಈ ೨ ಈವಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಡಿ—ಕಲ್ಯಾಣೇ, ಲೇಸಿನೊಳ್ :
ಭಂಡಯತಿ = ಲೇಸಾದಪಂ ; ಭಂಡಾರಂ = ಹೊನ್ನ ಸಂಚವುಂ, ಅರಿಸಿನದ ಪುಡಿಯುಂ.

ವಜ—ಮಾರ್ಗಣಸಂಸ್ಕಾರೇ, ಅಂಬಿನಮಾಟದೊಳ್ :
ವಾಜಯತಿ = ಅಂಬಂ ಮಾಡಿದಪಂ ; ವಜನ್, ವಜಕಃ, ಈ ೨ ಅಂಬುಗಾರಂ ; ವಾಜಂ = ಅಂಬು ; ವಜಾ = ಬಜೆ.

ಘುಷ—ಉತ್ಸರ್ಗೇ, ಸಾಮಾನ್ಯದೊಳ್ :
ಘೋಷಯತಿ = ಸಾಮಾನ್ಯವಾದಪುದು ; ಘೋಷಃ = ಗೊಲ್ಲನ ಹಟ್ಟಿ.

ಜಸ—ಹಿಂಸಾಯಾಂ, ಕೊಲೆಯೊಳ್ :
ಜಾಸಯತಿ = ಕೊಂದಪಂ ; ಜಸಕಃ = ಕೊಲೆಗಂ ; ಜಸನಂ, ಜಸನೀಯಂ, ಈ ೨ ಕೊಲೆ.

ತತ್ರಿ—ಕುಟುಂಬಧಾರಣೇ, ದಂಡುಗದತಾಳ್ಕೆಯೊಳ್ :
ತಂತ್ರಯತಿ = ದಂಡುಗವಂ ತಾಳ್ದಪಂ ; ತಂತ್ರಕಃ = ಕುಟುಂಬಧಾರಿ ; ತಂತ್ರಣಂ = ಕುಟುಂಬಧಾರಣಂ.

ಮತ್ರಿ—ಗುಪ್ತಭಾಷಣೇ, ಗುಟ್ಟಿನ ನುಡಿಯೊಳ್ :
ಮಂತ್ರಯತಿ = ಗುಟ್ಟುಮಾಡಿದಪಂ ; ಮಂತ್ರೀ = ಸ್ಥಾನಾಧಿಪತಿ ; ಮಂತ್ರಣಂ = ಸ್ಥಾನಾಪತ್ಯಂ.

ವಸ್ತ, ಗಂಧ—ಅರ್ದನೇ, ಪ್ರೇರಣೆಯೊಳ್ :
ವಸ್ತಯತಿ = ಪ್ರೇರಿಸಿದಪಂ ; ವಸ್ತನ್, ವಸ್ತಕಃ, ಈ ೨ ಪ್ರೇರಿಸುವಂ ; ವಸ್ತು, ವಸ್ತುಕಂ, ಈ ೨ ಪ್ರೇರಣೆ.
ಗಂಧಯತಿ = ಪರಿಮಳಿಸಿದಪಂ ; ಗಂಧನ್, ಗಂಧೀ, ಈ ೨ ಪರಿಮಳಿಸುವಂ ; ಗಂಧ್ಯಂ, ಗಂಧನಂ, ಗಂಧನೀಯಂ, ಗಂಧಃ, ಈ ೪ ಪರಿಮಳಂ ; ಗಂಧಕಂ = ಗಂದಕಂ ; ಸುಗಂಧಿಃ = ಪುಷ್ಪಜಾತಿ ; ಗಂಧಾ = ಗಂದೆ.

ಹಿಷ್ಕ, ಹಿಕ್ಕ—ಹಿಂಸಾಯಾಂ, ಬೇನೆಯೊಳ್ :
ಹಿಷ್ಕಯತಿ = ಬೇನೆವಡಿಸಿದಪುದು ; ಹಿಷ್ಕಾ = ಬಿಕ್ಕಳಿಕೆ.
ಹಿಕ್ಕಯತಿ = ಬಿಕ್ಕಿಸಿದಪುದು ; ಹಿಕ್ಕಾ = ಬಿಕ್ಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಷ್ಕ—ಪರಿಮಾಣೇ, ಅಳತೆಯೊಳ್ :
ನಿಷ್ಕಯತಿ = ಅಳೆದಪುದು ; ನಿಷ್ಕಂ = ವರಂ.

ಲಲ—ಈಪ್ಸಾಯಾಂ, ಬಯಕೆಯೊಳ್ :
ಲಾಲಯತಿ = ಬಯಸಿದಪುದು ; ಲಾಲಸಂ, ಲಾಲನೀಯಂ, ಈ ೨ ಬಯಕೆ ; ಲಲನಾ = ಹೆಣ್ ; ಲಲಿತಂ = ಕೋಮಲವುಂ, ರಾಗವುಂ, ಆಗಮವುಂ ; ಲಾಲಾ = ಜೊಲ್ಲು ; ಲಾಲಃ = ರಕ್ಕಸಂ ; ಲಾಳಿಃ = ಜಾಡನ ನೂಲಗಂಡಿಕೆಯ ತುರೀ.

ಚಿತ—ಸಂದೇಹೇ, ಸಂಶಯದೊಳ್ :
ಚೇತಯತೆ = ಸಂಶಯವಾದಪುದು ; ಚಿತ್ತಂ = ಬಗೆ ; ಚಿತಿಃ = ಸಿದಿ(ದ್ದಿ)ಗೆ.

ದಶಿ—ದಶನೇ, ಕಡಿತದೊಳ್ :
ದಂಶಯತೆ = ಕಡಿದಪಂ ; ದಂಶನ್, ದಂಶಕಃ, ಈ ೨ ಕಡಿವಂ ; ದಷ್ಟಂ, ದಷ್ಟಿಃ, ದಂಶನಂ, ದಂಶನೀಯಂ, ಈ ೪ ಕಡಿತಂ.

ದಶ—ದರ್ಶನೇ, ಕಾಣಿಕೆಯೊಳ್ :
ದಾಶಯತೆ = ಕಂಡಪಂ ; ದಾಶಃ = ಅಂಬಿಗಂ ; ದಶಾ = ಅವಸ್ಥೆ.

ಕುಣ—ಸಂಕೋಚೇ, ಮುಗಿತದೊಳ್ :
ಕುಣಯತೆ = ಮುಗಿದಪಂ ; ಕುಣಿಃ = ಸೊಟ್ಟಂ.

ಡಸ, ಡಿಪ—ಸಂಘಾತೇ, ಸಂಗಡದೊಳ್ :
ಡಾಪಯತೆ = ಸಂಗಡಿಸಿದಪಂ ; ಡಪನ್, ಡಪಕಃ, ಈ ೨ ಸಂಗಡಿಸುವಂ ; ಡಪನಂ, ಡಪನೀಯಂ, ಈ ೨ ಸಂಗಡಂ.
ಡೇಪಯತೆ = ಸಡಗರಿಸಿದಪಂ ; ಡೇಪನ್, ಡೇಪಕಃ, ಈ ೨ ಸಡಗರಿಸುವಂ ; ಡೇಪನಂ, ಡೇಪನೀಯಂ, ಈ ೨ ಸಡಗರಂ.

ತೂಣ—ಪೂರಣೇ, ತುಂಬುಗೆಯೊಳ್ :
ತೂಣಯತೆ = ತುಂಬಿದಪುದು ; ತೂಣೀರಂ = ಅಂಬಿನ ಹೊದೆ.

ತರ್ಜ, ಭರ್ತ್ಸ—ಸಂತರ್ಜನೇ, ಬೆದರಿಕೆಯೊಳ್ :
ತರ್ಜಯತೆ = ಬೆದರಿಸಿದಪಂ ; ತರ್ಜನ್, ತರ್ಜಕಃ, ಈ ೨ ಬೆದರಿಸುವಂ ; ತರ್ಜನಂ, ತರ್ಜನೀಯಂ, ಈ ೨ ಬೆದರಿಕೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭರ್ತ್ಸಯತೆ = ಬೈದಪಂ ; ಭರ್ತ್ಸನ್, ಭರ್ತ್ಸಕಃ, ಈ ೨ ಬೈವಂ ; ಭರ್ತ್ಸನಂ, ಭರ್ತ್ಸನೀಯಂ, ಈ ೨ ಬಯಲ್.

ತೂಣ—ಆಶಾಯಾಂ, ಬಯಕೆಯೊಳ್ :
ತೂಣಯತಿ = ಬಯಸಿದಪಂ ; ತೂಣನ್, ತೂಣಕಃ, ತೂಣಃ, ಈ ೩ ಬಯಸುವಂ ; ತೂಣನಂ, ತೂಣನೀಯಂ, ಈ ೨ ಬಯಕೆ.

ಯಕ್ಷ—ಪೂಜಾಯಾಂ, ಹಿರಿಯತನದೊಳ್ :
ಯಕ್ಷಯತಿ = ಹಿರಿಯನಾದಪಂ ; ಯಕ್ಷಃ = ಗಾರುಡಿಗಂ ; ಯಕ್ಷಿಣೀ = ಗಾರುಡಿಗಿತ್ತಿ.

ಶಠ—ಶ್ಲಾಘಾಯಾಂ, ಹಿರಿಯತನದೊಳ್ :
ಶಾಠಯತಿ = ಹಿರಿಯನಾದಪಂ, ಹುಸಿದಪಂ ; ಶಠನ್, ಶಠಕಃ, ಶಠಃ, ಈ ೩ ಹಿರಿಯನುಂ, ಹುಸಿಗನುಂ ; ಶಠಾ, ಶಠನಂ, ಶಠನೀಯಂ, ಈ ೩ ಹುಸಿ.

ಶ್ಯಮ—ವಿತರ್ಕೇ, ವಿವಾದದೊಳ್ :
ಶ್ಯಾಮಯತಿ = ವಿವಾದಿಸಿದಪಂ ; ಶ್ಯಾಮಲಃ = ಕರಿಯ ಕೆಂಪಿನ ಬಣ್ಣದವಂ ; ಶ್ಯಾಮಲಾ = ಚಂಚ ಗೌರಿ ; ಶ್ಯಾಮಾ = ಕರಿಯ ಕೆಂಪಿನ ಬಣ್ಣದವಳ್ ; ಶ್ಯಾಮಃ = ಕರಿಯ ಕೆಂಪಿನ ಬಣ್ಣಂ.

ಗುರೀ—ಉದ್ಯಮೇ, ಉಜ್ಜುಗದೊಳ್ :
ಗೂರಯತೆ = ಉಜ್ಜುಗಿಸಿದಪಂ ; ಗುರುಃ = ಉದ್ಯೋಗವಂತಂ ; ಗುರ್ವೀ = ಉದ್ಯೋಗವಂತೆ.

ಶಮ, ಲಕ್ಷ—ಆಲೋಚನೇ, ಯೋಚನೆಯೊಳ್ :
ಶಮಯತೆ = ಯೋಚಿಸಿದಪಂ ; ಶಾಮಾಕಃ = ಯೋಚನೆಕಾರನುಂ, ಸಾವೆಯುಂ ; ಶಾಮಾ = ಕರಿಗೆಂಪಿನವಳುಂ, ಕೆಸುವುಂ.

ಲಕ್ಷಯತೆ = ಗುರುತಿಟ್ಟಪಂ ; ಲಕ್ಷಿತಃ = ಗುರುತಾದಂ ; ಲಕ್ಷಂ = ನೂರುಸಾಸಿರಂ ; ಲಕ್ಷ್ಯಂ = ಗುರಿ ; ಲಕ್ಷಣಂ = ಗುರುತು ; ಲಾಕ್ಷಿಕಃ = ಗುರಿಕಾರಂ ; ಲಾಕ್ಷಾ = ಅರಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುತ್ಸ—ಅವಕ್ಷೇಪೇ, ಬೈಯಿಲೊಳ್ :
ಕುತ್ಸಯತೆ = ಬೈದಪಂ ; ಕುತ್ಸನ್, ಕುತ್ಸಕಃ, ಈ ೨ ಬೈವಂ ; ಕುತ್ಸನಂ, ಕುತ್ಸನೀಯಂ, ಕುತ್ಸಿತಂ, ಕುತ್ಸಾ, ಈ ೪ ಬಯಿಲ್.

ಭಲ—ಆಭಂಡನೇ, ಮೆಚ್ಚಿನೊಳ್ :
ಭಾಲಯತಿ = ಮೆಚ್ಚಿದಪಂ ; ಭಲಸಃ, ಭಾಳಕಃ, ಈ ೨ ಮೆಚ್ಚಿದಂ ; ಭಳೀ, ಭಲಾ, ಭಲಲಾ, ಈ ೩ ಮೆಚ್ಚು ; ಭಾಳಃ = ಹಣೆ.

ಕೂಟ—ಪ್ರಮಾದೇ, ಮೋಸದೊಳ್ :
ಕೂಟಯತೆ = ಮೋಸವಾದಪುದು ; ಕೂಟಃ = ಕೋಡು ; ಕಾಳ ಕೂಟಃ = ವಿಷಂ ; ಕೂಟಸ್ಥಃ = ಪರಮಾತ್ಮಂ.

ವಂಚು—ಪ್ರಲಂಭನೇ, ಮಾಜಿಕೊಂಬುದರೊಳ್ :
ವಂಚಯತೆ = ಮಾಜಿಕೊಂಡಪಂ ; ವಂಚಕಃ, ವಂಚಾನಃ, ವಂಚನ್, ಈ ೩ ಮಾಜಿಕೊಂಬಂ ; ವಂಚನಂ, ವಂಚನೀಯಂ, ಈ ೨ ಮಾಜಿಕೊಂಬುದು ; ಪರಿವಂಚನ್ = ಮಡಗಿದುದನಪಲಪಿಸುವಂ.

ಧೃಷು—ಶಕ್ತಿಸಂಬಂಧೇ, ಕಸಿಕೊಂಬಲ್ಲಿ :
ಧೃಷ್ಟುಃ, ಧೃಷ್ಟಃ, ಧರ್ಷಕಃ, ಧರ್ಷಾಣಃ, ಈ ೪ ಕಸಿಕೊಂಬಂ ; ಧೃಷ್ಟಿಃ, ಧರ್ಷಣಂ, ಧರ್ಷಣೀಯಂ, ಧರ್ಷಃ, ಈ ೪ ಕಸಿ ಕೊಂಬುದು.

ಮುದ—ತೃಪ್ತಿಯೋಗೇ, ತಣಿವಿನ ಕೂಟದೊಳ್ :
ಮಾದಯುತೆ = ದಮ್ಮನೆ ತಣಿದಪಂ ; ಮತ್ತಃ, ಮುದೀ, ಮುದಾನಃ, ಈ ೩ ತಣಿದಂ ; ಮುದಂ = ತಣಿವು.

ದಿವು—ಪರಿಕೂಜನೇ, ಹಾಡಿನೊಳ್ :
ದೇವಯುತೆ = ಹಾಡಿದಪಳ್ ; ದೇವತಾ = ಶಕ್ತಿ ; ದೇವನಂ, ದೇವ ನೀಯಂ, ಈ ೨ ಹಾಡು.

ಗೄ—ವಿಜ್ಞಾನೇ, ಬಿನ್ನಾಣದೊಳ್ :
ಗರಯುತೆ = ಬಿನ್ನಾಣಿಸಿದಪಂ; ಗರಾಣಃ = ಬಿನ್ನಾಣಿ ; ಗಾರಣಂ = ಹಗರಣಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ—ವೇತನಾಶ್ಯಾಸನಿವಾಸನೇಷು, ಕೂಲಿಯೊಳಂ, ಪೆಸರೊಳಂ, ಹಳ್ಕಿಯೊಳಂ :

ವೇದಯತೆ = ಕೂಲಿಯಂ ಮಾಡಿದಪಂ ; ವೇದಾನಃ = ಕೂಲಿಕಾರಂ ; ವೇದಕಃ = ಪೆಸರುಗಂ ; ವೇದೀ = ಹಳ್ಕಿಗಂ ; ವೇದನಂ, ವೇದನೀಯಂ, ಈ ೨ ಕೂಲಿ.

ಮನ—ಸ್ತಂಭೇ, ನಿಲ್ಕೆಯೊಳ್ :

ಮಾನಯತಿ = ನಿಲ್ತಪಂ ; ಮನಾನಃ = ನಿಲ್ತಂ ; ಮನಸ್ = ಬಗೆ ; ಮನನಂ = ನೆನಹು ; ಮನನೀಯಂ = ನೆನೆಯಲ್ತಕ್ಕುದು.

ಯುಜು—ಜುಗುಪ್ಸಾಯಾಂ, ಹೇಯದೊಳ್ :

ಯೋಜಯತೆ = ಹೇಸಿದಪಂ ;

ಯಜೋಃ ಕಗೌ—ಯಜಂಗಳ್ಗೆ ಕಗಂಗಳಕ್ಕುಂ.

ಯೋಗೀ = ಸಂಸಾರಕ್ಕೆ ಹೇಸಿದಂ ; ಯೋಜನಂ = ಗಾವುದಂ.

ಕುಸ್ಮ—ಕುಸ್ಮಯನೇ, ಕೆಟ್ಟ ನಗೆಯೊಳ್ :

ಕುಸ್ಮಯತೆ = ಕೆಟ್ಟ ನಗೆಯಾಡಿದಪಂ ; ಕುಸ್ಮಾನಃ, ಕುಸ್ಮಕಃ, ಈ ೨ ಕೆಟ್ಟ ನಗೆವಂತಂ ; ಕುಸ್ಮಂ, ಕುಸ್ಮನಂ, ಕುಸ್ಮನೀಯಂ, ಕುಸ್ಮಿತಂ, ಈ ೪ ಕೆಟ್ಟ ನಗೆ.

ಚರ್ಚ—ಅಧ್ಯಯನೇ, ಪಾಠದೊಳ್ :

ಚರ್ಚಯತಿ = ಪಠಿಸಿದಪಂ ; ಚರ್ಚನ್, ಚರ್ಚಕಃ, ಈ ೨ ಪಠಿಸುವಂ ; ಚರ್ಚನಂ, ಚರ್ಚನೀಯಂ, ಈ ೨ ಪಾಠಂ ; ಚರ್ಚಾ, ಚರ್ಚಿಕಾ, ಈ ೨ ವಿಚಾರಣೆ.

ಬುಕ್ಕ—ಭಷಣೇ, ಬಯಿಲೊಳ್ :

ಬುಕ್ಕಯತಿ = ಬಯಿದಪಂ ; ಬುಕ್ಕನ್, ಬುಕ್ಕಃ, ಈ ೨ ಬಯ್ವಂ ; ಬುಕ್ಕನಂ, ಬುಕ್ಕನೀಯಂ, ಈ ೨ ಬಯಿಲ್.

ಶಬ್ದ—ಉಪಸರ್ಗಾದಾವಿಷ್ಕಾರೇ, ಪ್ರಾದಿಯತ್ತಣಿಂದಾಗುವಲ್ಲಿ :

ವಿಶಬ್ದಯತಿ = ಕೂಗಿದಪಂ ; ವಿಶಬ್ದನ್, ವಿಶಬ್ದಿತಃ, ಈ ೨ ಬಲು ಕೂಗುಗಂ ; ವಿಶಬ್ದಃ, ವಿಶಬ್ದನಂ, ವಿಶಬ್ದನೀಯಂ, ಈ ೩ ಬಲು ಕೂಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಣ—ನಿಮೀಲನೇ, ದೃಷ್ಟಿಮಾಂದ್ಯದಲ್ಲಿ :
ಕಾಣಯತೆ = ಕಾಣದೆ ಹೋದಪಂ ; ಕಾಣಃ = ಒರ್ಕಣ್ಣಂ; ಕಣಿಃ = ದೇವತಾ ದೃಷ್ಟಿಯಿಂ ಕಾಣ್ಬುದು ; ಕಣನಂ, ಕಣನೀಯಂ, ಈ ೨ ದೃಷ್ಟಿಮಾಂದ್ಯಂ ; ಕಾಣಿಃ = ನಾಣ್ಯಂ ; ಕಣಾ = ಅಲಾ ; ಕಾಣಿಕಾ = ಕಪ್ಪಂ.

ಜಭಿ—ನಾಶೇ, ಬಡಿತದೊಳ್ :
ಜಂಭಯತಿ = ಬಡಿದಪಂ ; ಜಂಭಃ = ರಕ್ಕಸಂ ; ಜಂಭಾ = ಮರಂ ; ಜಂಭೆ = ಬಡಿದಪಂ ; ಜಂಭನಂ, ಜಂಭನೀಯಂ, ಈ ೨ ಬಡಿತಂ.

ಸೂದ—ಆಶ್ರಯೇ, ನೆಲೆಯೊಳ್ :
ಸೂದಯತಿ = ನೆಲೆಯಾದಪಂ ; ಸೂದಃ = ನೆಲೆವಂತಂ.

ಜಸ—ತಾಡನೇ, ಪೆಟ್ಟಿನೊಳ್ :
ಜಸಯತಿ = ಹೆಟ್ಟಿದಪಂ ; ಜಸ್ಯತಿ = ಹೆಟ್ಟಿದಪಂ ; ಜಾಸಃ, ಜಸಃ, ಜಸಕಃ, ಜಸನ್, ಈ ೪ ಹೆಟ್ಟುವಂ ; ಜಸನಂ, ಜಸನೀಯಂ, ಈ ೨ ಪೆಟ್ಟು.

ಪಷ, ಪಶ—ಬಂಧೇ, ಕಟ್ಟಿನೊಳ್ :
ಪಾಷಯತಿ = ಕಟ್ಟಿದಪುದು ; ಪಾಷಃ = ಕಗ್ಗಂ.
ಪಾಶಯತಿ = ಸುತ್ತಿದಪುದು ; ಪಾಶಃ = ನೇಣ್.

ಅಮ—ರೋಗೇ, ಬೇನೆಯೊಳ್ :
ಆಮಯತಿ = ಬೇನೆವಡಿಸಿದಪುದು ; ಆಮನ್ = ಹೊಟ್ಟೇ ಬೇನೆ ; ಆಮಯಂ = ಬೇನೆ.

ಚಟ, ಸ್ಫುಟ—ಭೇದೇ, ವಿಭಾಗದೊಳ್ :
ಚಾಟಯತಿ = ವಿಭಾಗಿಸಿದಪುದು ; ಚಾಟಃ = ಮೋರಂ ; ಚಟಕಃ = ಗುಬ್ಬಿ ; ಚಾಟಕಾ = ಹೆಣ್ಗುಬ್ಬಿ ; ಚಾಟುಃ = ಬಲುಮಾತುಗಂ.
ಸ್ಫೋಟಯತಿ = ವಿಂಗಡಿಸಿದಪುದು ; ಸ್ಫುಟಂ = ವಿಂಗಡಂ.

ಘಟ—ಸಂಘಾತೇ, ಸಂಗಡದೊಳ್ :
ಘಾಟಯತಿ = ಸಂಗಡಿಸಿದಪುದು; ಘಟಃ = ಗಡಿಗೆಯುಂ, ಹನ್ನೊಂದನೆಯ ರಾಶಿಯುಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೇ ಹಿಂಸಾರ್ಥಾಃ ಚುರಾದೌ ಪರಸ್ಮೈಪದಿನೋ ಜ್ಞೇಯಾಃ—ಎಲ್ಲಾ ಕೊಲೆಯ ಪುರುಳಧಾತುಗಳ್ ಪರಗಾಮಿಗಳೆಂದು ತಿಳಿಯಲ್ತಕ್ಕುವು.

ತರ್ದ—ಹಿಂಸಾಯಾಂ, ಕೊಲೆಯೊಳ್ :
ತರ್ದಯತಿ = ಕೊಂದಪುದು ; ತರ್ದ್ದುರ್ಗಃ = ತರ್ದ್ದು.

ದಿವು—ಅರ್ದನೇ, ಪೆರ್ಚುಗೆಯೊಳ್ :
ದೇವಯತಿ = ಪೆರ್ಚಿದಪುದು ; ದೇವನಂ = ಪೆರ್ಚುಗೆ.

ಅರ್ಜ—ಪ್ರತಿಯತ್ನೇ, ಗಳಿಕೆಯೊಳ್ :
ಅರ್ಜಯತಿ = ಗಳಿಸಿದಪಂ; ಅರ್ಜುನಃ = ಕುಂತೀಪುತ್ರಂ; ಆರ್ಜನಂ, ಆರ್ಜನಂ, ಅರ್ಜನೀಯಂ, ಆರ್ಜನೀಯಂ, ಆರ್ಜಿತಂ, ಈ ೫ ಗಳಿಕೆ.

ಘುಷಿರ್—ವಿಶಬ್ದೇ, ಬೊಬ್ಬೆಯೊಳ್ :
ಘೋಷಯತಿ = ಬೊಬ್ಬೆಯಾದಪುದು ; ಘೋಷಾ = ಬೊಬ್ಬೆ.

ಬುಬ್ಬ, ಬಿಬ್ಬ, ಬುಂಬ, ಭುಂಭ—ಆರ್ಭಟೇ, ಗದ್ದಲದೊಳ್ :
ಬುಬ್ಬಯತಿ = ಗದ್ದಲಿಸಿದಪುದು; ಬುಬ್ಬಾ = ಬೊಬ್ಬೆ; ಬುಬ್ಬೋಕಃ = ಬೊಬ್ಬಾಟಿ.
ಬಿಬ್ಬಯತಿ = ಬಜಾರಿಸಿದಪಂ ; ಬಿಬ್ಬೋಕಃ = ಬಜಾರಿ.
ಬುಂಬಯತಿ = ಆಳಾಪಿಸಿದಪಂ ; ಬುಂಬಾಳಃ = ಆಲಾಪಿಸುವಂ.
ಭುಂಭಯತಿ = ಊದಿದಪಂ; ಭುಂಭಕಃ = ಊದುವಂ; ಭುಂಭೂಃ = ಊದುಹಣಂ.

ಆಜಃ ಕ್ರಂದ—ಸಾತತ್ಯೇ, ಎಡೆವಿಡದಿಹಣದೊಳ್ :
ಆಕ್ರಂದಯತಿ = ಎಡೆವಿಡದಿರ್ದ್ದಪಂ ; ಆಕ್ರಂದಃ = ಎಡೆವಿಡದಂ ; ಆಕ್ರಂದನಂ = ಎಡೆವಿಡದಿಹಣಂ.

ಲಶ—ಶಿಲಾಯೋಗೇ, ಕಲ್ಲಕೂಟದೊಳ್ :
ಲಾಶಯತಿ = ಕಲ್ಲೂಡಿದಪುದು; ಲಾಶಕಃ = ಕಲ್ಕುಟಿಕಂ; ಲಶುನಂ = ಬೆಳ್ಳುಳ್ಳಿ.

ಭೂಷ—ಅಲಂಕಾರೇ, ಸಿಂಗಾರದೊಳ್ :
ಭೂಷಯತಿ = ಸಿಂಗರಿಸಿದಪುದು ; ಭೂಷಣಂ, ಭೂಟ್, ಭೂಷಾ, ಭೂಷಣೀಯಂ, ಈ ೪ ಸಿಂಗಾರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೋಕ್ಷ—ಅಸನೇ, ವಿದ್ಯಮಾನದೊಳ್ :
ಮೋಕ್ಷಯತಿ = ವರ್ತಿಸಿದಪಂ ; ಮೋಕ್ಷ್ಯಃ = ಯತೀ ; ಮೋಕ್ಷಃ = ಮುಕ್ತಿ.

ಅರ್ಹ—ಪೂಜಾಯಾಂ, ಯೋಗ್ಯದೊಳ್ :
ಅರ್ಹಯತಿ = ಯೋಗ್ಯನಾದಪಂ ; ಅರ್ಹನ್ = ನಾಭಿರಾಜಮೇರುದೇವೀಕುಮಾರಂ ; ಅರ್ಹಣಂ, ಅರ್ಹಂ, ಅರ್ಹಣೀಯಂ, ಈ ೩ ಯೋಗ್ಯಂ.

ಜ್ಞಾ—ನಿಯೋಜನೇ, ಪ್ರೇರಣದೊಳ್ :
ಜ್ಞಾಪಯತಿ = ಪ್ರೇರಿಸಿದಪುದು ; ಜ್ಞಪಕಂ, ಜ್ಞಾಪಕಂ, ಈ ೨ ಜ್ಞಾಪಕಂ.

ಶೃಧು—ಪ್ರಹಸನೇ, ಬಿರುಸಗೆಯೊಳ್ :
ಶರ್ಧಯತಿ = ಬಿರುನಕ್ಕಂ; ಶರ್ಧಕಃ = ಬಿರುಸಗೆಕಾರಂ; ಶರ್ಧನಂ = ಬಿರುನಗೆ.

ಭಜ—ವಿಶ್ರಾಣನೇ, ಈವಿಯೊಳ್ :
ಭಾಜಯತಿ = ಇತ್ತಪಂ ; ಭಾಕ್ = ಈವಂ ; ಅನ್ಯತ್ರ = ಈವಿಯಲ್ಲದಲ್ಲಿ ; ಭಜತೆ = ಸೇವಿಸಿದಪಂ ; ಭಾಜಕಃ = ಸೇವಕಂ.

ಯತ—ಖೇದಬಿಂಬಾಚ್ಛಾದನೇಷು, ದುಕ್ಕದೊಳಂ, ನೆಳಲೊಳಂ, ಹೊದೆಪಿನೊಳಂ :
ಯಾತಯತಿ = ದುಕ್ಕಿಸಿದಪಂ ; ಯಾತಕಃ = ದುಕ್ಕಿ ; ಯಾತನಾ = ದುಃಕ್ಕಂ.

ನಿರಃಪರೋಯತಿಃ ಪ್ರತಿದಾನ ಧನ ಧಾನ್ಯ ವಿಷಯ ವ್ಯತಿಹಾರಾರ್ಥೇ ಚುರಾದೌ ವರ್ತತೆ—ನಿರಿನಕಡೆಯಣ ಯತಧಾತು ತೆಗೆಕೊಮ್ಬಲ್ಲಿ, ಪೊನ್ನೊಳಂ, ದವಸದೊಳಂ, ವಿಸಯದೊಳಂ, ಅತಿಕ್ರಮದೊಳಂ, ಚುರಾದಿಯಲ್ಲಿ ವರ್ತಿಪುದು.

ನಿರ್ಯಾತಯತಿ = ಪೊನ್ನಂ ಮೇಣ್ ದವಸಮಂ ಕೊಂಡಪಂ, ಭೋಗಿಸಿದಪಂ, ವಿಾರಿದಪಂ ; ನಿರ್ಯಾತಃ = ಕೊಂಡಂ ; ನಿರ್ಯಾತನಂ = ಬೆಲೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ—ಸ್ನೇಹನ ಛೇದಾವಹರಣೇ, ಮಣಕಿಸೊಳಂ, ಮುರಿಕಿಸೊಳಂ, ಕೊಯಿಲೊಳಂ :

ವಾಸಯತಿ = ಮಣಕಿಸಿದಪಂ ; ವಸುಃ = ದೇವಜಾತಿ ; ವಾಸುಃ = ಮುರಿಕು ; ವಾಸನಾ = ಕೊಯಿಲ್.

ಚರ—ಅಸಂಶಯೇ, ದಿಟದೊಳ್ :

ಚಾರಯತಿ = ದಿಟವಾದಪಂ ;

ಚರಾದಂತಿನ್—ಚರದತ್ತಣಿಂ ಅಂತಿನ್ ಬಕ್ಕುಗಂ.

ಚರಂತೀ = ದೇಶಾಂತರಿ.

ಚ್ಯವ—ಹಸನೇ, ನಗೆಯೊಳ್ :

ಚ್ಯಾವಯತಿ = ನಕ್ಕಪಂ ; ಚ್ಯವನಃ = ಮುನಿ.

ಭೂ, ಕ್ಲಪ್, ಅವ—ಅವಕಲ್ಪನೇ, ಊಹೆಯೊಳ್ :

ಭಾವಯತಿ = ಊಹಿಸಿದಪುದು ; ಭಾವನಾ = ಊಹೆ.

ಕಲ್ಪಯತಿ = ಉಪಮಿಸಿದಪುದು ; ಕಲ್ಪನಾ = ಉಪಮೆ.

ಆವಯತಿ = ನಿರೂಪಿಸಿದಪುದು ; ಅವನಾ = ನಿರೂಪಣಂ.

ರಕ, ಲಕ—ಆಸ್ವಾದನೇ, ಸವಿಯೊಳ್ :

ರಾಕಯತಿ = ಸವಿದಪುದು ; ರಾಕಾ = ಹುಣಿವೆ.

ಲಾಕಯತಿ = ಹೊದೆಯಲ್ತಕ್ಕುದು ; ಲಾಕೀ = ಕುರಿಯ ತುಪ್ಪಟದ ಹಚ್ಚಡಂ.

ಅಂಚು—ವಿಶೇಷಣೇ, ಹಿರಿದರೊಳ್ :

ಅಂಚಯತಿ = ಹಿರಿದಾದಪುದು ; ಅಂಚನಂ = ಹಿರಿದು.

ಲಿಗಿ—ವೈಚಿತ್ರ್ಯೇ, ಅರಿವಿನೊಳ್ :

ಲಿಂಗಯತಿ = ವಿಚಿತ್ರಿಸಿದಪುದು ; ಲಿಂಗಂ = ವಿಚಿತ್ರಂ.

ಸ್ತ್ರೀಪುನ್ನಪುಂಸಕಲಿಂಗೇ ವಿಚಿತ್ರೀಕರೋತಿ—ಪೆಣ್ಣ ಗಂಡಿನ ಸಂದದ ಗುರುತುಗಳಿಂದೆ ಪ್ರತ್ಯಯಭೇದದಿಂ ಧಾತು ಪಲವು ಬಗೆಯರೂಪಪ್ಪುದು.

ಮುದ—ಸಂಸರ್ಗೇ, ಸಂಗದೊಳ್ :

ಮೋದಯತಿ = ಕೂಡಿದಪುದು ; ಮೋದಕಂ = ಕಡುಬು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ರಸ—ಧಾರಣೇ, ತಾಳಿಕೆಯೊಳ್ :
ತ್ರಾಸಯತಿ = ತಾಳ್ದಪುದು ; ತ್ರಾಸುಃ = ತಕ್ಕಡಿ.

ಉದ್ಧ್ರಸ—ಉತ್ಕ್ಷೇಪೇ, ಹಾರಿಕೆಯೊಳ್ :
ಧ್ರಾಸಯತಿ = ಹಾರ್ದ್ದಪಂ ; ಧ್ರಸನ್, ಧ್ರಸಕಃ, ಧ್ರಾಸಃ, ಈ ೩ ಹಾರ್ವಂ ; ಧ್ರಸನಂ, ಧ್ರಸನೀಯಂ, ಈ ೨ ಹಾರಿಕೆ.

ಮುಚ—ಪ್ರಮೋಚನೇ, ಬಿಡುಗೆಯೊಳ್ :
ಮೋಚಯತಿ = ಬಿಟ್ಟಪುದು ; ಮೋಚಕಃ = ಸುಗ್ಗಿ.

ಗ್ರಸ—ಗ್ರಹಣೇ, ಹಿಡಿತದೊಳ್ :
ಗ್ರಸಯತಿ = ಹಿಡಿದಪುದು ; ಗ್ರಾಸಃ = ಹಿಡಿತಂ.

ಪುಷ—ಧಾರಣೇ, ತಾಳಿಕೆಯೊಳ್ :
ಪೋಷಯತಿ = ತಾಳ್ದಪುದು ; ಪೋಷಣಂ = ತಾಳಿಕೆ.

ದಳ—ವಿದಾರಣೇ, ಸೀಳಿಕೆಯೊಳ್ :
ದಾಳಯತಿ = ಸೀಳ್ದಪುದು ; ದಳಃ = ತಳಿರ್.

ಪಟ, ಪುಟ, ಲುಟ, ತುಜಿ, ಪಿಜಿ, ಲುಜಿ, ಭಜಿ, ಲಘಿ, ತ್ರಸಿ, ಪಿಶಿ, ಕುಸಿ, ದಶಿ, ಕುಶಿ, ಘಟ, ಘಟಿ, ಬೃಹಿ, ಬೃಹ, ಬಲ್ಹ, ಗುಪ, ಧೂಪ, ವಿಛ, ಚೀವೃ, ಷುಘು, ಲೋಛ, ಲೋಕೃ, ಣದ, ಕುಪ, ತರ್ಕ, ವೃತು, ಬೃಧು—ಭಾಷಾರ್ಥಾಃ :

ಪಾಟಯತಿ = ಕೂಗಿದಪಂ ; ಪಟುಃ = ಬಂಟಂ ; ಪಟೋಲೀ = ಪಡಲಂ ; ಪಟಲಃ = ಸಂಧಿ ; ಪಟಃ = ಹೊದಕೆ ; ದ್ವಿಪಟೀ = ದುಪ್ಪಟೀ ; ಪಟಿಕಂ = ಮದ್ದು ; ಪಾಟವಂ = ಬಂಟತನಂ ; ಪಟಲೀ = ಮೊತ್ತಂ ; ಪಟೀರಃ = ಶ್ರೀಗಂಧಂ ; ಪಟನಂ, ಪಟನೀಯಂ, ಪಟ್ಯಂ, ಪಾಟ್ಯಂ, ಈ ೪ ಕೂಗು.
ಪೋಟಯತಿ = ಹೋಲ್ದಪುದು ; ಪೋಟಾ = ಹೋಲ್ಕೆಯುಂ, ವಿಾಸೆ ಬಂದವಳುಂ ; ಪುಟಂ = ಬಣ್ಣಂ ; ಪೋಟನಂ, ಪೋಟನೀಯಂ, ಪೋಟ್ಯಂ, ಪೌಟ್ಯಂ, ಈ ೪ ಹೋಲ್ಕೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೋಟಯತಿ = ತುಳಿದಪಂ ; ಲೋಟಕಃ = ತುಳಿವಂ ; ಲೋಟುಃ, ಲೋಟನಂ, ಲೋಟನೀಯಂ, ಲೋಟ್ಯಂ, ಲೌಟ್ಯಂ, ಈ ೫ ತುಳಿ.

ತುಂಜಯತಿ = ಬೈದಪಂ ; ತುಂಜಕಃ = ಬೈವಂ ; ತುಂಜನಂ, ತುಂಜನೀಯಂ, ಈ ೨ ಬಯಿಲ್.

ತಂಜಯತಿ = ಕೇಕರಿಸಿದಪಂ ; ತಂಜಕಃ = ಕೇಕರಿಸುವಂ ; ತಂಜನಂ, ತಂಜನೀಯಂ, ಈ ೨ ಕೇಕರಿಕೆ.

ಪಿಂಜಯತಿ = ಹಿಕ್ಕಿದಪಂ ; ಪಿಂಜಾರಃ = ಹಿಕ್ಕುವಂ ; ಪಿಂಜರೀ = ಮೇಲ್ಕಟ್ಟು ; ಪಿಂಜನಂ, ಪಿಂಜನೀಯಂ, ಈ ೨ ಹಿಕ್ಕು.

ಲುಂಜಯತಿ = ಸೆಳೆದಪಂ; ಲುಂಜಕಃ = ಸೆಳೆವಂ; ಲುಂಜನಂ, ಲುಂಜನೀಯಂ, ಈ ೨ ಸೆಳೆ.

ಲಂಘಯತಿ = ಹಾರ್ದ್ರಪಂ ; ಲಂಘಕಃ = ಹಾರ್ದ್ರಂ ; ಲಂಘನಂ, ಲಂಘನೀಯಂ, ಲಂಘ್ಯಂ, ಈ ೩ ಹಾರಿಕೆ.

ತ್ರಂಸಯತಿ = ಅಂಜಿದಪಂ ; ತ್ರಂಸಃ, ತ್ರಂಸಕಃ, ಈ ೨ ಅಂಜುವಂ ; ತ್ರಂಸನಂ, ತ್ರಂಸನೀಯಂ, ಈ ೨ ಅಂಜಿಕೆ.

ಪಿಂಶಯತಿ = ಹೀಕರಿಸಿದಪಂ ; ಪಿಂಶಃ, ಪಿಂಶಕಃ, ಈ ೨ ಹೀಕರಿಸುವಂ ; ಪಿಂಶನಂ, ಪಿಂಶನೀಯಂ, ಈ ೨ ಹೀಕರ್.

ಕುಂಸಯತಿ = ಅಳ್ತಪಂ ; ಕುಂಸಃ, ಕುಂಸಕಃ, ಈ ೨ ಅಳ್ವಂ.

ದಂಶಯತಿ = ಕಚ್ಚಿದಪಂ ; ದಂಶಕಃ = ಕಚ್ಚುವಂ ; ಉಪದಂಶಕಂ = ಉಪ್ಪಿನಕಾಯಿ ; ದಂಷ್ಟ್ರಾ = ಕೋರೆವಲ್ ; ದಂಶನಂ, ದಂಶನೀಯಂ, ಈ ೨ ಕಚ್ಚುಹಣಂ.

ಕುಂಶಯತಿ= ಕೊಸರ್ದ್ರಪಂ; ಕುಂಶಃ, ಕುಂಶಕಃ, ಈ ೨ ಕೊಸರ್ವಂ; ಕುಂಶನಂ, ಕುಂಶನೀಯಂ, ಈ ೨ ಕೊಸರ್.

ಘಾಟಯತಿ = ಆದಪುದು ; ಘಟನಾ = ಮೊತ್ತಂ ; ಘಟಿಕಾ = ಗಳಿಗೆ ; ಘಟಃ = ದೇಹಂ ; ಘಟಕಃ = ಗಡಿಗೆ ; ಘಟನಂ, ಘಟನೀಯಂ, ಘಟ್ಯಂ, ಘಾಟ್ಯಂ, ಉದ್ಘಾಟಃ, ಈ ೫ ಆಗು.

ಘಂಟಯತಿ = ಸುಡಿದಪುದು ; ಘಂಟಾ = ಗಂಟೆ ; ದೇವಘಂಟಾ = ದೇವಗಂಟೆ ಪತ್ರೆ ; ಕ್ಷುದ್ರಘಂಟಿಕಾ = ಕಿರುಗೆಜ್ಜೆ ; ಘಂಟನಂ, ಘಂಟನೀಯಂ, ಈ ೨ ಸುಡಿ.

ಬೃಂಹಯತಿ = ಹಿರಿದಪ್ಪುದು ; ಬೃಂಹಣಂ = ಹಿರಿದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೃಹಯತಿ = ಪೆರ್ಚಿದಪಂ ; ಬೃಹ್ಮಾ = ಧಾತಾರಂ.
ಬಲ್ಹಯತಿ = ಬಲಿದಪುದು; ಬಲ್ಹಃ = ನಾಡು; ಬಾಲ್ಹೀಕಃ= ಕುದುರೆ.
ಗೋಪಯತಿ, ಗೋಪಾಯತಿ= ಪೊರೆದಪಂ; ಗೋಪಃ= ಪೊರೆವಂ;
ಗೋಪನಂ, ಗೋಪನೀಯಂ, ಈ ೨ ಪೊರೆತಂ.
ಧೂಪಯತಿ, ಧೂಪಾಯತಿ = ದೂಪಿಸಿದಪಂ ; ಧೂಪಃ = ದೂಪಂ.
ವಿಚ್ಛಯತಿ = ತುಡುಗಿದಪಂ ; ವಿಚ್ಛಕಃ = ತುಡುಗುಣಿ ; ವಿಚ್ಛಾ = ತುಡುಗು.
ಚೀವಯತಿ = ಸಿಡಿದಪುದು ; ಚೀವರಃ = ಹಕ್ಕಿ.
ಪೋಥಯತಿ = ಗದ್ದಲಿಸಿದಪಂ ; ಪೋಥಃ = ಕೋಣಂ.
ಲೋಚಯತಿ = ಕಂಡಪುದು ; ಲೋಚನಂ = ಕಣ್.
ಲೋಕಯತಿ = ನೋಡಿದಪುದು ; ಲೋಕಃ = ಭುವನವುಂ, ಜನವುಂ.
ನಾದಯತಿ = ಝೇಂಕರಿಸಿದಪುದು ; ನಾದಃ = ಝೇಂಕಾರಂ.
ಕೋಪಯತಿ = ಕಿನಿಸಿದಪುದು ; ಕೋಪಃ = ಕಿನಿಸು.
ತರ್ಕಯತಿ = ತರ್ಕಿಸಿದಪುದು ; ತರ್ಕಃ = ವಿವಾದಂ.
ವರ್ತಯತಿ = ಬಳಸಿದಪುದು ; ವರ್ತನಂ = ಬಳಕೆ.
ವರ್ಧಯತಿ = ಪೆರ್ಚ್ಚಿದಪುದು ; ವರ್ಧನಂ = ಪೆರ್ಚ್ಚುಗೆ.

ಪೂರಿ—ಆಪ್ಯಾಯನೇ, ತೃಪ್ತಿಯೊಳ್ :
ಪೂರಯತಿ = ತೃಪ್ತಿವಟ್ಟಪುದು ; ಪೂರಣಂ = ತೃಪ್ತಿ.

ರುಜ—ಹಿಂಸಾಯಾಂ, ಕೊಲೆಯೊಳ್ :
ರೋಜಯತಿ = ಕೊಂದಪಂ ; ರೋಜಕಃ = ಕೊಲೆಗಾರಂ ; ರೋಜನಂ = ಕೊಲೆ.

ಷ್ವದ—ಆಸ್ವಾದನೇ, ಸವಿತದೊಳ್ :
ಆಸ್ವಾದಯತಿ = ಸವಿದಪಂ ; ಆಸ್ವಾದೀ = ಸವಿವಂ ; ಆಸ್ವಾದನಂ = ಸವಿ.

ಆಸ್ವಾದಃ ಸಕರ್ಮಕಾತ್—ಆಙ್‌ಪೂರ್ವದ ಕರ್ಮದೊಡಗೂಡಿದ ಸ್ವಾದದತ್ತಣಿಂದೆ ಇನ್‌ಬಕ್ಕುಂ.

ಆಸ್ವಾದಯತಿ = ಸೀಕರಿಸಿದಪಂ ; ಆಸ್ವಾದಯನ್, ಆಸ್ವಾದಕಃ, ಈ ೨ ಸೀಕರಿಸುವಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥ—ವಾಕ್ಯಪ್ರಬಂಧೇ, ನುಡಿಗಡಣದೊಳ್ :
ಕಥಯತಿ = ನಿರೂಪಿಸಿದಪಂ ; ಕಥಿಕಃ = ನುಡಿಗಡಣವಂತಂ ; ಕಥಾ, ಕಥನಂ, ಕಥನೀಯಂ, ಈ ೩ ನುಡಿಗಡಣಂ.

ನಾದಂತಾತ್ಸನ್—ಆಕಾರಾಂತದತ್ತಣಿಂ ಸನಾಗಮಂ ಬಾರದು.

ವರ—ಈಪ್ಸಾಯಾಂ, ಇಚ್ಛೆಯೊಳ್ :
ವರಯತಿ = ಇಚ್ಛಿಸಿದಪಂ ; ವರಃ = ಮದುವೆಗೆ ಯೋಗ್ಯಂ.

ಗಣ—ಸಂಖ್ಯಾನೇ, ಎಣಿಕೆಯೊಳ್ :
ಗಣಯತಿ = ಎಣಿಸಿದಪಂ ; ಗಣಕಃ = ಎಣಿಸುವಂ ; ಗಣಿಕಾ = ಸೂಳೆ ; ಗಣಃ = ಶಿವಶರಣಂ ; ಗಣನಂ = ಲೆಕ್ಕಂ.

ಶಠ, ಶ್ವಠ—ಸಮ್ಯಗಾಭಾಷಣೇ, ಒಳ್ಪಿನ ಮಾತಿನೊಳ್ :
ಶಠಯತಿ = ಒಳ್ಪಿನ ಮಾತನಾಡಿದಪಂ ; ಶಠಃ = ಚದುರಂ.
ಶ್ವಠಯತಿ = ಸರಸವಾಡಿದಪಂ ; ಶ್ವಠಃ = ಸರಸಿ.

ಭಟ, ವಟ—ಗ್ರಂಥೇ, ಉಗ್ಗಡಣೆಯೊಳ್ :
ಭಟಯತಿ = ಉಗ್ಗಡಿಸಿದಪಂ ; ಭಟಃ = ಉಗ್ಗಡಿಸುವಂ.
ವಟಯತಿ = ನುಡಿದಂತೆ ನುಡಿದಪಂ ; ವಟುಃ = ಸಣ್ಣವಂ.

ರಹ—ತ್ಯಾಗೇ, ಬಿಡುಗೆಯೊಳ್ :
ರಹಯತಿ = ಬಿಟ್ಟಪಂ ; ರಾಟ್, ರಾಡ್, ರಹಃ, ರಹಕಃ, ಈ ೪ ಬಿಡುವಂ ; ರಾಹುಃ = ಆಕಾಶಸರ್ಪಂ.

ಸ್ತನ, ಗದ—ದೇವಶಬ್ದೇ, ಗುಡುಗಿನೊಳ್ :
ಸ್ತನಯತಿ = ಗುಡುಗಿದಪುದು ; ಸ್ತನಯಿತ್ನುಃ = ಮೋಡಂ ; ಸ್ತನಃ = ಮೊಲೆ.
ಗದಯತಿ = ತೊದಲಿಸಿದಪುದು ; ಗದ್ಗದಃ = ಗದುಗದುಕೆ.

ಪತ—ಗತೌ, ನಡೆಯೊಳ್ :
ಪತಯತಿ = ನಡೆದಪಂ ; ಪತಿಃ = ಒಡೆಯಂ.

ಪಷಅನುಪಸರ್ಗಾತ್ ಗತೌ—ಉಪಸರ್ಗವಿಲ್ಲದ ಪಷಕ್ಕೆ ಇಚ್ಛಬರ್ಕ್ಕುಂ ನಡೆಯೊಳ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಠಯತಿ = ನಡೆದಪಂ ; ಪಾಟ್, ಪಾಡ್, ಪಷಃ, ಪಷಕಃ, ಈ ೪ ನಡವಳಿಕಾರಂ.

ಸ್ವರ—ಆಕ್ಷೇಪೇ, ಬೆಸಗೊಂಬಲ್ಲಿ :
ಸ್ವರಯತಿ = ಸ್ವತಂತ್ರದಿಂ ನುಡಿದಪುದು.
ಸ್ವರಃ—ಅಕಾರಾದಿ ಅಃಕಾರಪರ್ಯಂತವಿರ್ಪ್ಪ ಪದಿನಾರಕ್ಕರಂ.

ಚರ—ಪ್ರತಿಯತ್ನೇ, ಕೂರ್ತ ಕೆಲಸದೊಳ್ :
ಚರಯತಿ = ಕೂರ್ತ ಕೆಲಸಮಂ ಮಾಡಿದಪಂ ; ಚರಃ = ಬಂಟಂ.

ಕಲ—ಗತೌ, ಸಂಖ್ಯಾನೇಚ, ನಡೆಯೊಳಂ, ಲೆಕ್ಕದೊಳಂ :
ಕಲಯತಿ = ನಡೆದಪುದು ; ಕಾಲಃ = ವೇಳೆ ; ಕಲನಾ = ಎಣಿಕೆ.

ಚಹ—ಪರಿಕಲ್ಕನೇ, ಗುಳಿಗೆಯೊಳ್ :
ಚಹಯತಿ = ಗುಳಿಗೆಯಾದಪುದು ; ಚಹನಂ = ಗುಳಿಗೆ.

ಮಹ—ಪೂಜಾಯಾಂ, ಹಿರಿಯ ತನದೊಳ್ :
ಮಹಯತಿ = ಹಿರಿಯನಾದಪಂ ;
ಮಹಾದೇರಂತಃ—ಮಹಾಪ್ರಭೃತಿಗೆ ಅಂತಪ್ರತ್ಯಯಮುಕ್ಕುಂ.
ಮಹಂತಃ = ಪೂಜ್ಯಂ.

ಸ್ಸಾರ, ಕೃಪ, ಶ್ರಥ—ದೌರ್ಬಲ್ಯೇ, ಕಡು ಬಲ್ಮೆಯೊಳ್ :
ಸಾರಯತಿ = ಕಡು ಬಲಿದಪುದು ; ಸಾರಃ = ಸೇತು.
ಕೃಪಯತಿ = ಕರುಣಿಸಿದಪಂ ; ಕೃಪಾಳುಃ = ದಯಾಳು ; ಕೃಪಾ = ದಯೆ.
ಶ್ರಥಯತಿ = ಸಡಿಲ್ದಪಂ ; ಶ್ರಥಃ = ಸಡಿಲ್ದಂ ; ಶ್ರಥನಂ = ಸಡಿಲಿಕೆ.

ಸ್ಪೃಹ—ಈಪ್ಸಾಯಾಂ, ಬಯಕೆಯೊಳ್ :
ಸ್ಪೃಹಯತಿ= ಬಯಸಿದಪಂ; ಸ್ಪೃಹನ್ = ಬಯಸುವಂ; ಸ್ಪೃಹಾ= ಬಯಕೆ.

ಭಾಮ—ಕ್ರೋಧೇ, ಮುಳಿಸಿನೊಳ್ :
ಭಾಮಯತಿ = ಮುಳಿಸಿದಪಳ್ ; ಭಾಮಾ, ಭಾಮಿನೀ, ಈ ೨ ಮುಳಿಸುವಳ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚ—ಪೈಶುನ್ಯೇ, ಕೊಂಡೆಯದೊಳ್ :
ಸೂಚಯತಿ= ಕೊಂಡೆಯುವನಾಡಿದಪಂ; ಸೂಚಕಃ = ಕೊಂಡೆಯಂ; ಸೂಚನಂ = ಕೊಂಡೆ.

ಖೇಟ—ಭಕ್ಷಣೇ, ತೀನಿಯೊಳ್ :
ಖೇಟಯತಿ = ತಿಂದಪುದು ; ಖೇಟಕಂ = ಹರಿಗೆ.

ಖೋಟ್ಟ—ಕ್ಷೇಪೇ, ಬಿಸಸುಹಣದೊಳ್ :
ಖೋಟ್ಟಯತಿ = ಬಿಸಸಿದಪಂ ; ಖೋಟ್ಟಕಃ = ಬಿಸಸುವಂ ; ಖೋಟ್ಟನಂ = ಬಿಸಸುಹಣಂ.

ಗೋಮ—ಉಪಲೇಪೇ, ಬಳಿತದೊಳ್ :
ಗೋಮಯತಿ = ಬಳಿದಪಂ ; ಗೋಮಯನ್ = ಬಳಿವಂ ; ಗೋಮನಂ = ಬಳಿತಂ.

ಕುಮಾರ—ಕ್ರೀಡಾಯಾಂ, ಆಟದೊಳ್ :
ಕುಮಾರಯತಿ = ಆಡಿದಪಂ ; ಕುಮಾರಃ = ಷಣ್ಮುಖಂ.

ಶೀಲ—ಉಪಧಾರಣೇ, ನೋಂಪಿಯೊಳ್ :
ಶೀಲಯತಿ = ನೋಂತಪಂ, ನೋಂಬಂ ; ಶೀಲಂ = ನೋಂಪಿ ; ಸುಶೀಲಾ = ಕಾಮಧೇನು.

ಸಾಮ—ಸಾಂತ್ವನೇ, ಸಾದನೆಯೊಳ್ :
ಸಾಮಯತಿ = ಸಾದಿಸಿದಪಂ ; ಸಾಮಂತಃ = ಸಾದಕಂ ; ಸಾಮನ್ = ಶಿವನ ತತ್ಪುರುಷಮುಖದಲ್ಲಿ ಹುಟ್ಟಿದ ಸಹಸ್ರಶಾಖಾತ್ಮದ ರೇಣುಕನ ವೇದಂ.

ವೇಲ—ಕಾಲೋಪದೇಶೇ, ಅವಸರಭಣಿತದೊಳ್ :
ವೇಲಯತಿ = ಅವಸರಿಸಿದಪಂ ; ವೇಳಾ = ಕಾಲಂ.

ಪಲ—ಲವನಪವನಯೋಃ, ಕೊಯಿಲೊಳಂ, ಹಾರಿಕೆಯೊಳಂ :
ಪಲಯತಿ = ಕೊಯ್ದಪಂ, ಹಾರ್ದಪಂ ; ಪಲಾಯನ್ = ಕೊಯ್ವಂ, ಹಾರ್ವಂ ; ಪಲಾಯನಂ = ಕೊಯಿಲುಂ, ಹಾರಿಕೆಯುಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾತ—ಗತಿ ಸುಖಸೇಚನಯೋಃ, ನಡೆಯೊಳಂ, ಸುಕದ ತಳಿತದೊಳಂ :
ವಾತಯುತಿ = ನಡೆದಪುದು ; ವಾತಃ = ಗಾಳಿ.

ಗವೇಷ—ಮಾರ್ಗಣೇ, ಬೆದಕುಹಣದೊಳ್ :
ಗವೇಷಯುತಿ = ಬೆದಕಿದಪಂ ; ಗವೇಷಯುನ್ = ಬೆದಕುವಂ ; ಗವೇಷಣಂ = ಬೆದಕುಹಣಂ.

ವಾಸ—ಉಪಸೇವಾಯಾಂ, ಬಳಿಗೆಲಸದೊಳ್ :
ವಾಸಯುತಿ = ಬಳಿಗೆಲಸವಂ ಮಾಡಿದಪಂ ; ವಾಸಯುನ್ = ಬಳಿಗೆಲಸಿಗಂ ; ವಾಸನಾ = ಬಳಿಗೆಲಸಂ.

ನಿವಾಸ—ಆಚ್ಛಾದನೇ, ಹೊದಪಿನೊಳ್ :
ನಿವಾಸಯುತಿ = ಹೊದೆದಪಂ ; ನಿವಾಸಯುನ್ = ಹೊದೆವಂ ; ನಿವಾಸನಂ = ಹೊದೆಪು.

ಭಾಜ—ಪೃಥಕ್ಕರ್ಮಣೀ, ಬೇರೆ ಮಾಡುವಲ್ಲಿ :
ಭಾಜಯುತಿ = ಬೇರೆ ಮಾಡಿದಪಂ ; ಭಾಜಯುನ್ = ಬೇರೆ ಮಾಡುವಂ ; ಭಾಜನಂ = ಗಡಿಗೆ.

ಸಭಾಜ—ಪ್ರೀತಿಸೇವನಯೋಃ, ಅಳ್ಕರೊಳಂ, ಕೆಲಸದೊಳಂ :
ಸಭಾಜಯುತಿ = ಅಳ್ಕರ್ತ್ತಪಂ ; ಸಭಾಜಯುನ್ = ಅಳ್ಕರುವಂ ; ಸಭಾಜನಂ = ಅಳ್ಕರು.

ಊನ—ಪರಿಹರಣೇ, ಕಡಮೆಯೊಳ್ :
ಊನಯುತಿ = ಕಡಮೆಯಾದಪಂ ; ಊನಯುನ್ = ಕಡಮೆಯಾಗುವಂ ; ಊನಂ = ಕಡಮೆ.

ಧ್ವನ—ಶಬ್ದೇ, ಕೂಗಿನೊಳ್ :
ಧ್ವನಯುತಿ = ಕೂಗಿದಪಂ ; ಧ್ವನಯುನ್ = ಕೂಗುವಂ ; ಧ್ವನಿಃ, ಧ್ವಾನಃ, ಈ ೨ ಕೂಗು.

ಕೂಟ—ದಾಹೇ, ಬೇಗೆಯೊಳ್ :
ಕೂಟಯುತಿ = ಬೇಯಿಸಿದಪುದು ; ಕಾಷ್ಠಕೂಟಃ = ಕಾಲಾಗ್ನಿರುದ್ರಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇತ, ಶ್ರಾಮ, ಕುಣ, ಗುಣ—ಆಮಂತ್ರಣೇ, ಇದಿರ್ಮೊಖದ ಮಾತಿನೊಳ್ :
ಕೇತಯತಿ = ಇದಿರ್ಮೊಕವಾದಪುದು ; ಕೇತುಃ = ಠೆಕ್ಕೆ ; ನಿಕೇತನಂ = ಮನೆ.
ಶ್ರಾಮಯತಿ = ಬಳಲ್ದಪಂ ; ಶ್ರಮಣಃ = ತಪಸ್ವಿ.
ಕುಣಯತಿ = ಕುಣದಪಂ ; ಕುಣಯನ್ = ಕುಣಿವಂ ; ಕುಣನಂ, ಕುಣನೀಯಂ, ಕುಣಕಂ, ಈ ೩ ಆಟಂ.
ಗುಣಯತಿ = ಗುಣಿಸಿದಪಂ ; ಗುಣಯನ್ = ಗುಣಿಸುವಂ ; ಗುಣನಂ, ಗುಣನೀಯಂ, ಗುಣಕಂ, ಈ ೩ ಲೆಕ್ಕಂ.

ಸ್ತೇನ—ಚೌರ್ಯೇ, ಕಳವಿನೊಳ್ :
ಸ್ತೇನಯತೆ = ಕಳ್ದಪಂ ; ಸ್ತೇನಾನಃ = ಕಳ್ವಂ ; ಸ್ತೇನಂ, ಸ್ತೇನನಂ, ಸ್ತೇನನೀಯಂ, ಈ ೩ ಕಳವು.

ಪದ—ಗತೌ, ನಡೆಯೊಳ್ :
ಪದಯತೆ = ನಡೆದಪಂ ; ಪದಾನಃ = ನಡೆವಂ ; ಪದಂ, ಪದನಂ, ಪದನೀಯಂ, ಪದ್ಯಂ, ಈ ೪ ನಡೆ.

ಗೃಹ—ಗ್ರಹಣೇ, ಹಿಡಿತದೊಳ್ :
ಗೃಹತೆ = ಹಿಡಿದಪುದು ; ಗ್ರಹಃ = ಮರುಳ್.

ಮೃಗ—ಅನ್ವೇಷಣೇ, ಹುಡುಕುಹಣದೊಳ್ :
ಮೃಗಯತೆ = ಹುಡುಕಿದಪುದು ; ಮೃಗಃ = ಮಿಕಂ.

ಕುಹ—ವಿಸ್ಮಾಪನೇ, ಕೃತಕದೊಳ್ :
ಕುಹಯತೆ = ಕೃತಕಮಂ ಮಾಡಿದಪಂ ; ಕುಹಾನಃ, ಕುಹಕಃ, ಈ ೨ ಕೃತಕಿ.

ಶೂರ, ವೀರ—ವಿಕ್ರಾಂತೌ, ಬಂಟತನದ ನಡೆಯೊಳ್ :
ಶೂರಯತಿ = ಮುಂದುವರಿದಪಂ ; ಶೂರಃ = ಬಂಟಂ.
ವೀರಯತಿ = ಜಗಳಕ್ಕೆ ಹೊಗರ್ದಪಂ ; ವೀರಃ = ಮಾಸಾಳ್.

ಸ್ಥೂಲ—ಪರಿಬೃಂಹಣೇ, ತೋರಿತ್ತದೊಳ್ :
ಸ್ಥೂಲಯತೆ = ತೋರಿತ್ತಾದಪಂ ; ಸ್ಥೂಲಾನಃ = ತೋರಿದಂ ; ಸ್ಥೂಲಂ = ತೋರಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥ—ಉಪಯಾಚ್ಞಾಯಾಂ, ಬೇಡುಗೆಯೊಳ್ :
ಅರ್ಥಯತೆ = ಬೇಡಿದಪಂ ; ಅರ್ಥಾನಃ = ಬೇಡುವಂ ; ಅರ್ಥಃ = ಪುರುಳ್.

ಸತ್ರ—ಸಂತಾನಕ್ರಿಯಾಯಾಂ, ಧರ್ಮಸಂಘಾತದೊಳ್ :
ಸತ್ರಯತೆ= ಧರ್ಮಸಂತಾನವಾದಪುದು; ಸತ್ರಂ=ಧರ್ಮಸಂತಾನಂ.

ಸಂಗ್ರಾಮ—ಯುದ್ಧೇ, ಜಗಳದೊಳ್ :
ಸಂಗ್ರಾಮಯತೆ = ಜಗಳವಾದಪುದು ; ಸಂಗ್ರಾಮಃ = ಜಗಳಂ.

ಗರ್ವ—ಮಾನೇ, ಗರುವಿಕೆಯೊಳ್ :
ಗರ್ವಯತೆ = ಗರುವಿಸಿದಪಂ ; ಗರ್ವಿತಃ, ಗರ್ವಾಣಃ, ಈ ೨ ಗರ್ವೀ ; ಗರ್ವಃ, ಗರ್ವಣಂ, ಗರ್ವಣೀಯಂ, ಈ ೩ ಗರುವಿಕೆ.

ಸೂತ್ರ--ಅವಮೋಚನೇ, ಪೋಣಿಕೆಯೊಳ್ :
ಸೂತ್ರಯತಿ = ಪೋಣಿಸಿದಪಂ ; ಸೂತ್ರೀ, ಸೂತ್ರಕಃ, ಸೂತ್ರನ್, ಈ ೩ ಪೋಣಿಸುವಂ ; ಸೂತ್ರಂ, ಸೂತ್ರಿತಂ, ಸೂತ್ರಣಂ, ಸೂತ್ರಣೀಯಂ, ಈ ೪ ಪೋಣಿಗೆ.

ಮೂತ್ರ—ಪ್ರಸ್ರವಣೇ, ಸೋರ್ಕೆಯೊಳ್ :
ಮೂತ್ರಯತಿ = ಸೋರ್ದಪಂ ; ಮೂತ್ರೀ, ಮೂತ್ರವಾನ್, ಮೂತ್ರಿಕಃ, ಮೂತ್ರಕಃ, ಈ ೪ ಸೋರ್ವಂ ; ಮೂತ್ರಂ, ಮೂತ್ರಣಂ, ಮೂತ್ರಣೀಯಂ, ಈ ೩ ಸೋರ್ಕೆ.

ರೂಕ್ಷ—ಪಾರುಷ್ಯೇ, ಬೆಟ್ಟಿತ್ತರೊಳ್ :
ರೂಕ್ಷಯತಿ = ಬೆಟ್ಟಿದನಾದಪಂ ; ರೂಕ್ಷವಾನ್, ರೂಕ್ಷೀ, ರೂಕ್ಷಕಃ, ಈ ೩ ಬೆಟ್ಟಿದಂ ; ರೂಕ್ಷಂ, ರೂಕ್ಷಣಂ, ರೂಕ್ಷಣೀಯಂ, ಈ ೩ ಬೆಟ್ಟಿತ್ತು.

ಪಾರ, ತೀರ—ಕರ್ಮಸಮಾಪ್ತೌ, ಕೆಲಸದ ಮುಗಿತೆಯೊಳ್ :
ಪಾರಯತಿ = ಮುಗಿಸುವಂ ; ಪಾರಯನ್, ಪಾರಕಃ, ಈ ೨ ಮುಗಿದಂ ; ಪಾರಂ, ಪಾರಾಯಣಂ, ಪಾರಣಂ, ಪಾರಣೀಯಂ, ಈ ೪ ಮುಗಿತೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೀರಯತಿ = ತೀರಿಸಿದಪಂ ; ತೀರಯನ್, ತೀರಕಃ, ಈ ೨ ತೀರಿದಂ ; ತೀರಂ, ತೀರಣಂ, ತೀರಣೀಯಂ, ಈ ೩ ತೀರಿಕೆ.

ಪುಟ—ಸಂಸರ್ಗೇ, ಬೆರಕೆಯೊಳ್ :
ಪುಟಯತಿ = ಬೆರೆದಪಂ ; ಪುಟಯನ್, ಪುಟಃ, ಪುಟಕಃ, ಈ ೩ ಬೆರೆವಂ ; ಪುಟನಂ, ಪುಟನೀಯಂ, ಈ ೨ ಬೆರಕೆ.

ಕಥ್ರ—ಶೈಥಿಲ್ಯೇ, ಸಡಿಲ್ಕೆಯೊಳ್ :
ಕಥ್ರಯತಿ = ಸಡಿಲ್ದಪಂ ; ಕಥ್ರಃ, ಕಥ್ರಕಃ, ಕಥ್ರಯನ್, ಈ ೩ ಸಡಿಲ್ವಂ ; ಕಥ್ರಣಂ, ಕಥ್ರಣೀಯಂ, ಈ ೨ ಸಡಿಲ್ಕೆ.

ಅಂಶ—ಸಂಘಾತೇ, ಸಂಗಡದೊಳ್ :
ಅಂಶಯತಿ = ಸಂಗಡಿಸಿದಪಂ ; ಅಂಶಕಃ = ಸಂಗಡಿಸುವಂ ; ಅಂಶುಮಾನ್ = ಸೂರ್ಯಂ ; ಅಂಶುಃ = ಕಿರಣಂ ; ಅಂಶಃ = ಬಲಿ ; ಅಂಶನಂ, ಅಂಶನೀಯಂ, ಈ ೨ ಸಂಗಡಂ.

ಚಿತ್ರ—ವಿಚಿತ್ರ ದರ್ಶನಯೋಃ, ಅರಿವಿನೊಳಂ, ನೋಟದೊಳಂ :
ಚಿತ್ರಯತಿ = ಅರಿದಾದಪಂ ; ಚಿತ್ರೀ, ಚಿತ್ರಕಃ, ಈ ೨ ಅರಿದುಗಂ ; ಚಿತ್ರಂ, ಚಿತ್ರಣಂ, ಚಿತ್ರಣೀಯಂ, ಈ ೩ ಅರಿದು.

ವಟ—ವಿಭಾಜನೇ, ಕೈಗೆಲಸದೊಳ್ :
ವಟಯತಿ = ಕೈಗೆಲಸವಂ ಮಾಡಿದಪಂ ; ವಟುಃ = ಕೈಗೆಲಸದ ಹುಡುಗಂ ; ವಟನಂ, ವಟನೀಯಂ, ಈ ೨ ಕೈಗೆಲಸಂ ; ವಟಃ = ಆಲಂ ; ವಾಟೀ = ಬೀದಿಯುಂ, ತೋಟವುಂ ; ವಟಾ = ವಡೆ ; ವಟಕಃ = ಹುಡುಗಂ ; ಅವಟಂ = ಗುಂಡೀ ; ಅವಟ್ಯಃ = ಗುಂಡಿಯವಂ.

ಜ್ವಲ—ಪ್ರಕಾಶನೇ, ಬೆಳಕಿನೊಳ್ :
ಜ್ವಲಯತಿ = ಬೆಳಕಾದಪಂ ; ಜ್ವಲಯನ್ = ಬೆಂಕಿ ; ಜ್ವಾಲಃ, ಜ್ವಾಲಾ, ಈ ೨ ಉರಿ ; ಜ್ವಾಲುಃ = ಕೀಲ್.

ಮಿಶ್ರ—ಸಂಪರ್ಚನೇ, ಬೆರಕೆಯೊಳ್ :
ಮಿಶ್ರಯತಿ = ಬೆರೆದಪುದು ; ಮಿಶ್ರಾಪಣಂ = ಬೆರೆದ ತಣಿವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ತೋಮ—ಶ್ಲಾಘಾಯಾಂ, ಪೂಜ್ಯದೊಳ್ :
ಸ್ತೋಮಯತಿ = ಪೂಜ್ಯವಾದಪುದು ; ಜ್ಯೋತಿಷ್ಟೋಮೇನ ಸ್ವರ್ಗ ಕಾಮೋ ಯಜೇತ—ಸ್ವರ್ಗಕಾಮಃ = ಮೋಕ್ಷಾರ್ಥೀ, ಜ್ಯೋತಿಷ್ಟೋಮೇನ = ಸ್ಫಟಿಕಲಿಂಗದಿಂದೆ, ಯಜೇತ = ಪೂಜಿಸಬೇಕು.

ಛಿದ್ರ—ಕರ್ಣಭೇದೇ, ಕಿವಿಗಳ ತೂತಿನೊಳ್ :
ಛಿದ್ರಯತಿ = ತೂತಂ ಮಾಡಿದಪಂ ; ಛಿದ್ರಕಃ = ತೂತಂ ಕೊರೆವಂ.

ಅಂಧ—ದೃಷ್ಟ್ಯುಪಸಂಹಾರೇ, ಕಂಗಳ ನೋಟದ ಹೋಕಿನೊಳ್ :
ಅಂಧಯತಿ = ಕಂಗಳಿಂ ಕಾಣಂ ; ಅಂಧಕಃ = ರಕ್ಕಸಂ ; ಅಂಧಕಾರಃ = ಕಳ್ತಲೆ ; ಅಂಧತಾಮಿಸ್ರಂ = ನರಕಂ.

ದಂಡ—ದಂಡನಿಪಾತನೇ, ದಂಡದೊಳ್ :
ದಂಡಯತಿ = ದಂಡಿಸಿದಪಂ ; ದಂಡಕಃ, ದಂಡಯನ್, ಈ ೨ ದಂಡಿಸುವಂ ; ದಂಡಂ = ಪ್ರಜಾಸರ್ವಸ್ವಹರಣವುಂ, ಕೋಲುಂ, ದಂಡುಂ ; ದಂಡೀ = ಏಕವಾರಪಾತಗ್ರಾಹಕನುಂ, ರಾಜನುಂ, ಯಮನುಂ, ಭಿಕ್ಷುಕನುಂ.

ಅಂಕ—ಲಕ್ಷಣೇ, ಗುರುತಿನೊಳ್ :
ಅಂಕಯತಿ = ಗುರುತಾದಪಂ ; ಅಂಕಕಃ, ಅಂಕವಾನ್, ಅಂಕೀ, ಈ ೩ ಗುರುತುಗಂ ; ಅಂಕಃ = ತೊಡೆಯುಂ, ಗುರುತುಂ, ರಣವುಂ ; ಅಂಕನಂ, ಅಂಕನೀಯಂ, ಅಂಕಿತಂ, ಈ ೩ ಗುರುತು ; ಅಂಕಾ = ಗುರುನಾಥಭಾರ್ಯೆಯುಂ, ಸ್ಮಶಾನವುಂ, ಆಜ್ಞೆಯವುಂ.

ಸುಖ, ದುಃಖೇ—ತತ್ಕ್ರಿಯಾಯಾಂ, ಸೊಕದೊಳಂ, ದುಕ್ಕದೊಳಂ :
ಸುಖಯತಿ = ಸುಕಿಸಿದಪಂ ; ಸುಖೀ = ಸುಕಿ ; ಸುಖಂ = ಸೊಕಂ.
ದುಃಖಯತಿ = ದುಕ್ಕಿಸಿದಪಂ ; ದುಃಖೀ = ದುಕ್ಕಿ ; ದುಃಖಂ = ದುಕ್ಕಂ.

ರಸ—ಆಸ್ವಾದನ ಸ್ನೇಹನಯೋಃ, ಸವಿಯೊಳಂ, ಜಿಡ್ಡಿನೊಳಂ :
ರಸಯತಿ = ಸವಿದಪಂ ; ರಸಿಕಃ = ಸವಿವಂ ; ರಸಃ = ಜಿಡ್ಡು ; ರಸಜ್ಞಾ, ರಸನಾ, ಈ ೨ ನಾಲಗೆ.

19

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಯ—ವಿತ್ತಸಮುತ್ಸರ್ಗೇ, ಹಣದ ವೆಚ್ಚದೊಳ್ :
ವ್ಯಯಯತಿ = ವೆಚ್ಚವಾದಪುದು; ವ್ಯಯಂ = ವೆಚ್ಚಂ; ಅವ್ಯಯಂ = ಬಳಸಲ್ಬಾರದು.

ರೂಪ—ರೂಪಕ್ರಿಯಾಯಾಂ, ರೂಹಿಸೊಳ್ :
ರೂಪಯತಿ = ರೂಹಿಸಿದಪುದು; ರೂಪಕಃ = ಅಲಂಕಾರಂ; ರೂಪಂ = ರೂಹು ; ನಿರೂಪಂ, ನಿರೂಪಣಂ, ನಿರೂಪಿತಂ, ಈ ೩ ಗುರು ವಾಕ್ಯಂ ; ರೂಪಿಣೀ, ರೂಪಜೀವನಾ, ಈ ೨ ಸೂಳೆ ; ರೌಪ್ಯಂ = ಬೆಳ್ಳಿ ; ಮಹಾರೌಪ್ಯಂ = ಚಿನ್ನಂ.

ಭೇದ—ದ್ವೈಧೀಕರಣೇ, ಒಂದೆರಡಹಣದೊಳ್ :
ಭೇದಯತಿ = ಒಂದನೆರಡಂ ಮಾಡಿದಪಂ ; ಭೇತ್ತಾ, ಭೇದಕಃ, ಭೇದೀ, ಈ ೩ ಸೀಳ್ವಂ ; ಭೇದನಂ, ಭೇದನೀಯಂ, ಭೇದ್ಯಂ, ಈ ೩ ಸೀಳಿಕೆ.

ವ್ರಣ—ಗಾತ್ರವಿಚೂರ್ಣನೇ, ಮೈಯ್ಯ ಒಡಕಿನೊಳ್ :
ವ್ರಣಯತಿ = ಮೈ ಒಡೆದಪುದು ; ವ್ರಣಂ = ಹುಣ್.

ವರ್ಣ—ವರ್ಣಕ್ರಿಯಾವಿಸ್ತಾರಗುಣವಚನೇಷು, ಬಣ್ಣಗಾರಿಕೆಯೊಳಂ, ಬಿತ್ತರದೊಳಂ, ಕೊಂಡಾಟದೊಳಂ :
ವರ್ಣಯತಿ = ಬಣ್ಣವಿಟ್ಟಪಂ, ಬಿತ್ತರಿಸಿದಪಂ, ಬಣ್ಣಿಸಿದಪಂ ; ವರ್ಣಂ = ಬಣ್ಣಂ ; ವರ್ಣಕಂ = ರಾಗಪದ್ಯಂ ; ವರ್ಣನಂ, ವರ್ಣನೀಯಂ = ಬಣ್ಣನೆ ; ವರ್ಣಿ = ಜಾತಿಮಂತಂ.

ಪರ್ಣ—ಹರಿತಭಾವೇ, ಹಚ್ಚನೆಯ ಪರಿಯೊಳ್ :
ಪರ್ಣಯತಿ = ಹಚ್ಚನೆಯಾದಪುದು ; ಪರ್ಣಂ = ಎಲೆ ; ಪರ್ಣ್ಯಂ = ಎಲೆಗಾರಂ ; ಪರ್ಣಶಾಲಾ = ಎಲೆಗುಡಿಸಿಲ್ ; ಅಪರ್ಣಾ = ಗೌರೀ.

ಲಾಭ—ಪ್ರೇರಣೇ, ಆದಾಯದೊಳ್ :
ಲಾಭಯತಿ = ಆದಾಯುವಾದಪುದು ; ಲಾಭಂ, ಲಾಭನಂ, ಲಾಭನೀಯಂ, ಈ ೩ ಆದಾಯಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಷಿಪ—ಪ್ರೇರಣೇ, ನಿಯಾಮದೊಳ್ :
ಕ್ಷಿಪಯತಿ = ನಿಯಾಮಿಸಿದಪುದು ; ಕ್ಷಿಪ್ತಂ, ಕ್ಷಿಪ್ತಿಃ, ಕ್ಷೇಪಣಂ, ಕ್ಷೇಪಣೀಯಂ, ಈ ೪ ನಿಯಾಮಂ ; ಕ್ಷೇಪಣೀ = ಕವಣೆ.

ಅಘ—ಪಾಪಕರಣೇ, ಅಧರ್ಮದ ಮಾಟದೊಳ್ :
ಅಘಯತಿ = ಕೆಟ್ಟುನಡೆದಪುದು ; ಅಘಂ = ಪಾಪಂ ; ಅಘವಾನ್ = ಪಾಪಿ.

ಮೃಷ—ಕ್ಷಾಂತೌ, ತಾಳ್ಮೆಯೊಳ್ :
ಮೃಷಯತಿ = ತಾಳ್ದಪುದು ; ಮೃಷಾ = ಹುಸಿ ; ಮೃಷ್ಟಾನ್ನಂ = ಪರಮಾನ್ನಂ.

ನಾಮ್ನ ಇನ್ನಿರಸ್ಯತಿ—ನಾಮದತ್ತಣಿಂ ಇನ್ ಬರ್ಕ್ಕುಂ ಚಾಚುವ ಪುರುಳೊಳ್:

ಹಸ್ತೌ ನಿರಸ್ಯತಿ—ಹಸ್ತಯತಿ = ಕೈಗಳಂ ಚಾಚಿದಪಂ ; ಪಾದೌ ನಿರಸ್ಯತಿ—ಪಾದಯತಿ = ಕಾಲ್ಗಳಂ ಚಾಚಿದಪಂ ; ದೇಹಯತಿ = ಮೈಯುಂ ಚಾಚಿದಪಂ ; ಮಸ್ತಕಯತಿ = ತಲೆಯುಂ ಚಾಚಿದಪಂ ; ಜಿಹ್ವಯತಿ = ನಾಲಗೆಯುಂ ಚಾಚಿದಪಂ ; ಮೇಢ್ರಯತಿ = ಮೇಢ್ರಮುಂ ಚಾಚಿದಪಂ.

ಪ್ರಕಾಶಯತ್ಯಪಿ—ತೆರೆವ ಪುರುಳೊಳ್ ನಾಮದತ್ತಣಿಂ ಇನ್ ಬರ್ಕ್ಕುಂ.

ನೇತ್ರಯತಿ = ಕಣ್ಗಳಂ ತೆರೆದಪಂ ; ಮುಖಯತಿ = ಬಾಯುಂ ತೆರೆದಪಂ ; ಗುದಯತಿ = ಮುಕುಳಿಯುಂ ತೆರೆದಪಂ.

ಶೃಣೋತ್ಯಪಿ—ನಾಮದತ್ತಣಿಂ ಇನ್ ಬರ್ಕ್ಕುಂ ಕೇಳ್ವ ಪುರುಳೊಳ್ :

ವೇದಯತಿ = ವೇದಮುಂ ಕೇಳ್ದಪಂ ; ತಂತ್ರಯತಿ = ತಂತ್ರಮುಂ ಕೇಳ್ದಪಂ ; ಪುರಾಣಯತಿ = ಪುರಾಣಮುಂ ಕೇಳ್ದಪಂ.

ಶ್ವೇತಾಶ್ವತರಗಾಲೋಡಿತಾಹ್ವರಕಾಣಾಂ ತರೇತಕಲೋಪಶ್ಚ ಚಕ್ಷಣೇ—ಶ್ವೇತಾಶ್ವತರ ಗೋಲೋಡಿತ ಆಹ್ವರಕ ಶಬ್ದಂಗಳ ತರ, ಇತಕ ಎಂಬುವರ ಲೋಪಮಕ್ಕುಂ ಪೇಳ್ವ ಪುರುಳೊಳ್ :

ಶ್ವೇತಾಶ್ವತರ ಮಾಚಷ್ಟೆ = ಬಿಳಿಯ ಹೇಸರಗತ್ತೆಯಂ ಪೇಳ್ದಪಂ—ಶ್ವೇತಾಶ್ವಯತಿ = ಶ್ವೇತಾಶ್ವತರಮುಂ ಪೇಳ್ದಪಂ ; ಗಾಡೀಲೊತಮಾಚಷ್ಟೆ = ಗಾನಸಾರಮುಂ ಪೇಳ್ದಪಂ—ಗಾಲೋಡಯತಿ =

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮವೇದವಂ ಪೇಳ್ದಪಂ ; ಆಪ್ವರಕಮಾಚಷ್ಟೇ = ಮಾರಣ ಮಂತ್ರಮಂ ಪೇಳ್ದಪಂ—ಆಪ್ವರಯತಿ = ಅಥರ್ವಮಂ ಪೇಳ್ದಪಂ.

ಪ್ರಶಸ್ತಸ್ಯ ಶ್ರಾ—ಪ್ರಶಸ್ತ ಶಬ್ದಕ್ಕೆ ಶ್ರಾ ಬಕ್ಕುಂ.

ಶ್ರಾಬಯತಿ = ಪ್ರಶಸ್ತನಾದಪಂ.

ವೃದ್ಧಸ್ಯ ಚ ಜ್ಯಾ = ವೃದ್ಧ ಶಬ್ದಕ್ಕೆ ಜ್ಯಾ ಬಕ್ಕುಂ.

ಜ್ಯಾಯಯತಿ = ವೃದ್ಧನಾದಪಂ.

ಅಂತಿಕ ಬಾಢಯೋರ್ನೇದ ಸಾಧೌ—ಅಂತಿಕ ಬಾಢಾ ಎಂಬುವಕ್ಕೆ ಇನಾಗಮಂ ನೇದ ಸಾಧ ಎಂಬುವಕ್ಕುಂ.

ಅಂತಿಕಮಾಚಷ್ಟೆ—ನೇದಯತಿ = ಸನಿಹಮಂ ಪೇಳ್ದಪಂ ; ಬಾಢಮಾಚಷ್ಟೆ—ಸಾಧಯತಿ = ಶೀಘ್ರಮಂ ಪೇಳ್ದಪಂ.

ಲುವಾಲ್ಪಯೋಃ ಕನ್ವಾ—ಯುವಾ ಅಲ್ಪ ಎಂಬುವಕ್ಕೆ ಕನ್ ಮೇಣಕ್ಕುಂ.

ಯುವಾನಮಾಚಷ್ಟೆ—ಯುವಯತಿ, ಕನಯತಿ = ಹರಯದವನ ನುಡಿದಪಂ ; ಅಲ್ಪಯತಿ, ಕನಯತಿ = ಕಿರಿಯನ ನುಡಿದಪಂ.

ಸ್ಥೂಲದೂರಯುವಕ್ಷಿಪ್ರಕ್ಷುದ್ರಾಣಾಂ—ಸ್ಥೂಲದೂರಯುವಕ್ಷಿಪ್ರಕ್ಷುದ್ರ ಎಂಬುವರ, ಅಂತ್ಯಸ್ವರಾದೇಃ ಲೋಪೋಗುಣಶ್ಚ ನಾಮಿನಾಂ—ಕಡೆಯಣ ಸ್ವರವೇ ಮೊದಲಾಗುಳ್ಳುದಕ್ಕೆ ಅದರ್ಶನಮುಕ್ಕುಂ, ನಾಮಿಗಳ್ಗೆ ಗುಣವುಮಕ್ಕುಂ.

ಸ್ಥೂಲಮಾಚಷ್ಟೆ—ಸ್ಥವಯತಿ = ಸ್ಥೂಲಮಂ ಪೇಳ್ದಪಂ; ದೂರಮಾಚಷ್ಟೆ—ದವಯತಿ = ದೂರಮಂ ಪೇಳ್ದಪಂ ; ಯುವಾನಮಾಚಷ್ಟೆ—ಯುವಯತಿ = ಹರೆಯದವನಂ ಪೇಳ್ದಪಂ ; ಕ್ಷಿಪ್ರಮಾಚಷ್ಟೆ—ಕ್ಷೇಪಯತಿ = ಶೀಘ್ರಮಂ ಪೇಳ್ದಪಂ ; ಕ್ಷುದ್ರಮಾಚಷ್ಟೆ—ಕ್ಷೋದಯತಿ = ಕ್ಷುದ್ರನಂ ಪೇಳ್ದಪಂ.

ಬಹೋರಿಯಾದಿ ಭೂ ಚ—ಬಹು ಎಂಬುದಕ್ಕೆ ಯಕಾರವೇ ಮೊದಲಲ್ಲಿಯುಳ್ಳ ಇನ್ನರಮಾಗೆ ಭೂ ಎಂಬುದು ಬಕ್ಕುಂ.

ಬಹು ಆಚಷ್ಟೆ—ಭೂಯಯತಿ = ಬಾಳಮಂ ಪೇಳ್ದಪಂ.

ಪ್ರಿಯಸ್ಥಿರಸ್ಫಿರೋರುಗುರುಬಹುಳತೃಪದೀರ್ಘಹ್ರಸ್ವವೃದ್ಧವೃಂದಾರಕಾಣಾಂ, ಪ್ರಾ, ಸ್ಥಾ, ಸ್ಫಾ, ವರಾ, ಗರಾ, ಬೃಂಹಾ, ತ್ರಪ್, ದ್ರಾಘ, ಹ್ರಸ, ವರ್ಷ, ವೃಂದಾಃ—ಪ್ರಿಯ, ಸ್ಥಿರ, ಸ್ಫಿರ, ಉರು, ಗುರು, ಬಹುಳ, ತೃಪ, ದೀರ್ಘ, ಹ್ರಸ್ವ, ವೃದ್ಧ, ವೃಂದಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಕ ಎಂಬರ್ಕ್ಕೆ ಪ್ರಾ, ಸ್ಥಾ, ಸ್ಫಾ, ವರಾ, ಗರಾ, ಬೃಂಹಾ, ತ್ರಪ್, ದ್ರಾಘ, ಹ್ರಸ, ವರ್ಷ, ವೃಂದ ಎಂಬುವಕ್ಕುಂ.

ತದ್ವದಿಷ್ಠೇಮೇಯಸ್ಸು ಬಹುಳಂ—ಇನಾಗಮಂ ಪರವಾಗುವಂತೆ ಇಷ್ಠ, ಇಮನ್, ಈಯಸ್ ಗಳ್ಪರವಾಗೆ ಬಹುಳ ಮಕ್ಕುಂ.

ಸತ್ಯಾರ್ಥವೇದನಾ ಅಪ್ಯಕಾರಿತ ಏವ—ವರ್ತಮಾನದ ಪುರುಳಲ್ಲಿ ಬಂದ ಆಪ್ ಕಾರವೇ ಪ್ರಯೋಜ್ಯಕರ್ತೃವೆಂದರಿಯಬೇಕು.

ಪ್ರಿಯಮಾಚಷ್ಟೆ—ಪ್ರಾಯಯತಿ = ಪ್ರಿಯನಂ ಪೇಳ್ದಪಂ ; ಸ್ಥಿರಮಾಚಷ್ಟೆ—ಸ್ಥಾಪಯತಿ = ಸ್ಥಿರಮಂ ಪೇಳ್ದಪಂ ; ಸ್ಫಿರಮಾಚಷ್ಟೆ—ಸ್ಫಾಯಯತಿ = ನೆನೆಹಂ ಪೇಳ್ದಪಂ ; ಉರುಮಾಚಷ್ಟೆ—ವರಯತಿ = ಉರುವಂ ಪೇಳ್ದಪಂ ; ಗುರುಮಾಚಷ್ಟೆ—ಗರಯತಿ = ಗುರುವಂ ಪೇಳ್ದಪಂ ; ಬಹುಳಮಾಚಷ್ಟೆ—ಬೃಂಹಯತಿ = ಬಹುಳಮಂ ಪೇಳ್ದಪಂ ; ತೃಪಮಾಚಷ್ಟೆ—ತ್ರಪಯತಿ=ತೃಪ್ತಿಯಂ ಪೇಳ್ದಪಂ ; ದೀರ್ಘಮಾಚಷ್ಟೆ—ದ್ರಾಘಯತಿ = ದೀರ್ಘಮಂ ಪೇಳ್ದಪಂ ; ಹ್ರಸ್ವಮಾಚಷ್ಟೆ—ಹ್ರಸಯತಿ = ಹ್ರಸ್ವಮಂ ಪೇಳ್ದಪಂ; ವೃದ್ಧಮಾಚಷ್ಟೆ—ವರ್ಷಯತಿ = ವೃದ್ಧನಂ ಪೇಳ್ದಪಂ ; ವೃಂದಾರಕಮಾಚಷ್ಟೆ—ವೃಂದಯತಿ = ವೃಂದಾರಕನಂ ಪೇಳ್ದಪಂ ; ನೇದಿಷ್ಠಃ, ನೇದಿಮಾ, ನೇದೀಯಾನ್, ಈ ೩ ಅಂತಿಕನಾದಂ ; ಸಾಧಿಷ್ಠಃ, ಸಾಧಿಮಾ, ಸಾಧೀಯಾನ್, ಈ ೩ ಬಾಢ್ಯನಾದಂ ; ಯವಿಷ್ಠಃ, ಯವಿಮಾ, ಯವೀಯಾನ್, ಕನಿಷ್ಠಃ, ಕನಿಮಾ, ಕನೀಯಾನ್, ಈ ೬ ಯುವಾನಂ ; ಅಲ್ಪಿಷ್ಠಃ, ಅಲ್ಪಿಮಾ, ಅಲ್ಪೀಯಾನ್, ಕನಿಷ್ಠಃ, ಕನಿಮಾ, ಕನೀಯಾನ್, ಈ ೬ ಅಲ್ಪನಾದಂ ; ಸ್ಥವಿಷ್ಠಃ, ಸ್ಥವಿಮಾ, ಸ್ಥವೀಯಾನ್, ಈ ೩ ಸ್ಥೂಲನಾದಂ ; ದವಿಷ್ಠಃ, ದವಿಮಾ, ದವೀಯಾನ್, ಈ ೩ ದೂರನಾದಂ ; ಕ್ಷೇಪಿಷ್ಠಃ, ಕ್ಷೇಪಿಮಾ, ಕ್ಷೇಪೀಯಾನ್, ಈ ೩ ಕ್ಷಿಪ್ರನಾದಂ ; ಕ್ಷೋದಿಷ್ಠಃ, ಕ್ಷೋದಿಮಾ, ಕ್ಷೋದೀಯಾನ್, ಈ ೩ ಕ್ಷುದ್ರನಾದಂ ; ಭೂಯಿಷ್ಠಃ, ಭೂಯಿಮಾ, ಭೂಯಾನ್, ಈ ೩ ಬಹುವಾದಂ ; ಪ್ರಾಯಿಷ್ಠಃ, ಪ್ರಾಯಿಮಾ, ಪ್ರೇಯಾನ್, ಈ ೩ ಪ್ರಿಯನಾದಂ ; ಸ್ಥಾಯಿಷ್ಠಃ, ಸ್ಥಾಯಿಮಾ, ಸ್ಥೇಯಾನ್, ಈ ೩ ಸ್ಥಿರನಾದಂ ; ಸ್ಫಾಯಿಷ್ಠಃ, ಸ್ಫಾಯಿಮಾ, ಸ್ಫೇಯಾನ್,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಇ ಸ್ಥಿರನಾದಂ; ವರಿಷ್ಠಃ, ವರಿಮಾ, ವರೀಯಾನ್, ಈ ಇ ಉರುವಾದಂ; ಗರಿಷ್ಠಃ, ಗರಿಮಾ, ಗರೀಯಾನ್, ಈ ಇ ಗುರುವಾದಂ; ಬೃಂಹಿಷ್ಠಃ, ಬೃಂಹಿಮಾ, ಬೃಂಹೀಯಾನ್, ಈ ಇ ಬಹುಳನಾದಂ; ತ್ರಪಿಷ್ಠಃ, ತ್ರಪಿಮಾ, ತ್ರಪೀಯಾನ್, ಈ ಇ ತೃಪ್ತನಾದಂ; ದ್ರಾಘಿಷ್ಠಃ, ದ್ರಾಘಿಮಾ, ದ್ರಾಘೀಯಾನ್, ಈ ಇ ದೀರ್ಘನಾದಂ; ಹ್ರಸಿಷ್ಠಃ, ಹ್ರಸಿಮಾ, ಹ್ರಸೀಯಾನ್, ಈ ಇ ಹ್ರಸ್ವನಾದಂ; ವರ್ಷಿಷ್ಠಃ, ವರ್ಷಿಮಾ, ವರ್ಷೀಯಾನ್, ಈ ಇ ವೃದ್ಧನಾದಂ; ವೃಂದಿಷ್ಠಃ, ವೃಂದಿಮಾ, ವೃಂದೀಯಾನ್, ಈ ಇ ವೃಂದಾರಕನಾದಂ; ಜ್ಯೇಷ್ಠಃ, ಜ್ಯೇಮಾ, ಜ್ಯೇಯಾನ್, ಈ ಇ ವೃದ್ಧನಾದಂ; ಶ್ರೇಷ್ಠಃ, ಶ್ರೇಮಾ, ಶ್ರೇಯಾನ್, ಈ ಇ ಪ್ರಶಸ್ತನಾದಂ.

ಗುಣವಚನಾತ್—ವಿಶೇಷಸಿಪ್ಪನಾಮುದತ್ತಣಿಂ ಇನ್ಸ್ವಕ್ಕುಂ ಇಷ್ಠ, ಇಮಾ, ಈಯಾನ್ ಗಳ್ಸರಮಾಗೆ.

ಪಟಯತಿ = ಪಟುವಾದಪಂ; ಪಟಿಷ್ಠಃ, ಪಟಿಮಾ, ಪಟೀಯಾನ್, ಈ ಇ ಪಟುವಾದಂ; ಲಘಯತಿ = ಲಘುವಾದಂ; ಲಘಿಷ್ಠಃ, ಲಘಿಮಾ, ಲಘೀಯಾನ್, ಈ ಇ ಲಘುವಾದಂ; ಪಾಪಯತಿ = ಪಾಪಿಯಾದಪಂ; ಪಾಪಿಷ್ಠಃ, ಪಾಪಿಮಾ, ಪಾಪೀಯಾನ್, ಈ ಇ ಪಾಪಿಯಾದಂ—ಇತ್ಯಾದಿ ತಿಳಿಯಲ್ಪಡುವುದು.

ಏಕಸ್ವರಾ ಅದಂತಾಶ್ಚ ಕೈಶ್ಚಿಚ್ಚುರಾದಿಷು ಪಠ್ಯಂತೇ—ಒಂದು ಸ್ವರವುಳ್ಳ ಧಾತುಗಳುಂ ಅಕಾರಾಂತವಾದ ಧಾತುಗಳುಂ ಕೆಲರಿಂ ಚುರಪ್ರಭೃತಿಗಳಲ್ಲಿ ಪಠಿಸಲ್ಪಡುಗುಂ.

ಯುಜ, ಪೃಚ—ಸಂಯಮನೇ, ತಪಸ್ಸಿನೊಳ್ :

ಯೋಜಯತಿ = ತಪಿಸಿದಪಂ; ಯೋಗೀ = ತಪಸ್ವಿ.

ಪರ್ಚಯತಿ = ನೋಂತಪಂ; ಪರ್ಚಕಃ = ನೋಂತಂ.

ಷಹ—ಮರ್ಷಣೇ, ತಾಳ್ಮೆಯೊಳ್ :

ತುರಾಂ ಸಹಯತಿ = ಗದ್ದಲಮುಂ ತಾಳಿಕೊಂಡಪಂ; ತುರಾಷಾಟ್ = ದೇವೇಂದ್ರಂ.

ಈರ—ಕ್ಷೇಪೇ, ಕಾಲಕ್ರಮಣದೊಳ್ :

ಈರಯತಿ = ಕಾಲಕ್ಷೇಪಮಂ ಮಾಡಿದಂ; ಈರಃ = ಕಾಲಕ್ಷೇಪೀ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾಲೀ—ದ್ರವೀಕರಣೇ, ತೇವದ ಮಾಟದೊಳ್ :
ಲಾಲಯತಿ = ತೇವಿಸಿದಪುದು ; ಲಾಲಾ = ಜೊಲ್ಲು.

ವೃಜೀ—ವರ್ಜನೇ, ತೊಲಗಿಕೆಯೊಳ್ :
ವರ್ಜಯತಿ = ತೊಲಗಿದಪಂ ; ವರ್ಜಕಃ = ತೊಲಗುವಂ ; ವರ್ಜನಂ = ತೊಲಗಿಕೆ.

ಜ್ಯಾ—ವಯೋಹಾನೌ, ಜರಿಸುಹಣದೊಳ್ :
ಜರಯತಿ = ಜರಿಸಿದಪುದು ; ಜರಾ = ಮುಪ್ಪು.

ಚಿರ—ವಿಯೋಜನ ಸಂಪರ್ಚನಯೋಃ, ವಿಯೋಗದೊಳಂ, ಕೂಟದೊಳಂ :
ಚೇರಯತಿ = ಕೂಡಿದಪಂ ; ಚೇರಮಃ = ಶಿವಶರಣಂ ; ಚಿರಂ = ಬಹುಕಾಲಂ.

ಶಿಷ—ಅಸರ್ವೋಪಯೋಗೇ, ಎಲ್ಲಾ ಪ್ರಯೋಜನದೊಳ್ :
ಶೇಷಯತಿ = ಪ್ರಯೋಜಿಸಿದಪುದು ; ಶೇಷಃ = ಸರ್ಪರಾಜಂ ; ಶಿಷ್ಟಕಃ, ಶಿಷ್ಯಃ, ಈ ೨ ಚಿಟ್ಟಿಗಂ.
ವಿಪೂರ್ವೋತಿಶಯೇ—ವಿಶಬ್ದಂ ಮೊದಲಲ್ಲಿಯುಳ್ಳ ಶಿಷಂ ಪೆರ್ಗ್ಗಳದೊಳ್ :
ವಿಶೇಷಃ = ಪೆರ್ಗ್ಗಳಂ.

ತೃಪ—ಪ್ರೀಣನೇ, ತಣಿವಿನೊಳ್ :
ತರ್ಪಯತಿ = ತಣಿದಪಂ ; ತೃಪ್ತಃ, ತರ್ಪಕಃ, ಈ ೨ ತಣಿದಂ ; ತರ್ಪಣಂ, ತೃಪ್ತಿಃ, ತರ್ಪಣೀಯಂ, ಈ ೩ ತಣಿವು.

ಛದ—ಅಪವಾರಣೇ, ಕಪಟದೊಳ್ :
ಛದಯತಿ = ಕಪಟಿಸಿದಪಂ ; ಛದ್ಮನ್, ಛದಕಃ, ಈ ೨ ಕಪಟಿ.

ಮಿಾ—ಗತೌ, ನಡೆಯೊಳ್ :
ಮಾಯಯತಿ = ನಡೆದಪಳ್ ; ಮಾಯಾ = ನಡೆವಳಿಕಾತಿ ; ಮಾಯಿಾ, ಮಾಯಾವೀ, ಈ ೨ ಮಾಯಕಾರಂ.

ಅನಾಕೌಣಾನುಬಂಧವತ್—ಅನ, ಅಕ ಎಂಬ ಪ್ರತ್ಯಯಂಗಳ ಣಕಾರಾನುಬಂಧದಂತೆ ಅತಿದೇಶಿಸಲ್ಪಡುಗುಂ.

ಮಾಯನಂ, ಮಾಯಕಂ, ಈ ೨ ಮನದ ಕೂವಾಡಂ.

ಕ್ರಥ—ಹಿಂಸಾಯಾಂ, ಕೊಲೆಯೊಳ್ :
ಕ್ರಾಥಯತಿ = ಕೊಂದಪಂ ; ಕ್ರಥಕಃ = ಕೊಲೆಗಂ ; ಕ್ರಥನಂ, ಕ್ರಥನೀಯಂ, ಈ ೨ ಕೊಲೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರಥ—ಬಂಧನೇ, ತೊಡಕಿನೊಳ್ :

ಶ್ರಾಥಯತಿ = ತೊಡಕಿದಪಂ ; ಶ್ರಥಕಃ = ತೊಡಕುಗಂ ; ಶ್ರಥನಂ, ಶ್ರಥನೀಯಂ, ಈ ೨ ತೊಡಕು.

ಚೀಕ, ಸೀಕ—ಆಮರ್ಷಣೇ, ಪರಂಬರಿಕೆಯೊಳ್ :

ಚೀಕಯತಿ = ಪರಂಬರಿಸಿದಪುದು.

ಸೀಕಯತಿ = ಪರಂಬರಿಸಿದಪುದು ; ಚೀಕಾ, ಸೀಕಾ, ಈ ೨ ಸೀಗೆ.

ಆಙಃಪರಃ ಸದಿಃ—ಗತ್ಯರ್ಥೇ, ಆಙಿನಕಡೆಯಣ **ಷದ್ಲೃ**—ಗಮನದೊಳ್ :

ಆಸಾದಯತಿ = ಆಗಮನಿಸಿದಪುದು ; ಆಸಾದನಂ = ಆಗಮನಂ ; ಆಸಾದೀ = ಮಾರೀಪೂಜಕಂ.

ಜುಷ—ಪರಿತರ್ಕೇ, ವಿವೇಕದೊಳ್ :

ಜೋಷಯತಿ = ವಿವೇಕಿಸಿದಪಂ ; ಜೋಟ್, ಜೋಡ್, ಜೋಷಕಃ, ಈ ೩ ವಿವೇಕಿ ; ಜೋಷಣಂ, ಜೋಷಣೀಯಂ, ಜೋಷ್ಯಂ, ಈ ೩ ವಿವೇಕಂ.

ಶ್ರಂಥ, ಗ್ರಂಥ—ಸಂದರ್ಭೇ, ಸೇರುವೆಯೊಳ್ :

ಶ್ರಂಥಯತಿ = ಸೇರಿಸಿದಪಂ; ಶ್ರಂಥಃ, ಶ್ರಂಥಕಃ, ಈ ೨ ಸೇರಿಸುವಂ; ಶ್ರಂಥನಂ, ಶ್ರಂಥನೀಯಂ, ಈ ೨ ಸೇರುವೆ.

ಗ್ರಂಥಯತಿ =ಅತಿಕಿಸಿದಪಂ ; ಗ್ರಂಥನ್, ಗ್ರಂಥಕಃ, ಈ ೨ ಅತಿಕಿಸುವಂ ; ಗ್ರಂಥಃ, ಗ್ರಂಥನಂ, ಗ್ರಂಥನೀಯಂ, ಈ ೩ ಅತಿಕು.

ಆಪೃ—ಲಂಭನೇ, ಅವಲಂಬದೊಳ್ :

ಆಪಯತಿ = ಅವಲಂಬಿಸಿದಪಂ ; ಆಪನ್, ಆಪಕಃ, ಈ ೨ ಅವಲಂಬಿಸುವಂ ; ಆಪನಂ, ಆಪನೀಯಂ, ಈ ೨ ಅವಲಂಬಂ.

ತನು—ಶಬ್ದೋಪಕರಣಯೋಃ, ಶಬ್ದದೊಳಂ, ಉಪಕರಣದೊಳಂ :

ತಾನಯತಿ = ಕೂಗಿದಪಂ ; ತಾನನ್, ತಾನಕಃ, ತಾನ್, ಈ ೩ ಕೂಗುವಂ ; ತಾನಂ = ರಾಗದ ಗತಿ ; ತಾನಕಂ = ಶಸ್ತ್ರಸಾಧಕ ಸಂಧಾನಂ.

ವಚ—ಸಂದೇಶೇ, ಒಳ್ವಾತಿನೊಳ್ :

ವಾಚಯತಿ = ಒಳ್ವಾತನಾಡಿದಪಂ ; ವಾಚನ್, ವಾಚಕಃ, ಈ ೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಳ್ಪಾತುಗಂ ; ವಾಚಸಂ, ವಾಚ್ಯಂ, ವಾಚನೀಯಂ, ಈ ೩ ಒಳ್ಪಾತು.

ಭೂ ಪ್ರಾಪ್ತಾವಾತ್ಮನೇಪದಿ—ಭೂ ಎಂಬುದು ಗಮನದೊಳ್ ಆತ್ಮನೇಪದಿ ; ಇನಾನುಬಂಧವತ್—ಇನಾಗಮಂ ನಕಾರಾನುಬಂಧದಂತೆ ಅತಿದೇಶಿಸಲ್ಪಡುಗುಂ.

ವೃದ್ಧಿರಾದ್ ಸಣೆ—ಧಾತುವಿನಾದಿಯ ನಾವಿಗೆ ವೃದ್ಧಿಯಕ್ಕುಂ, ಣಕಾರಾನುಬಂಧದ ಪ್ರತ್ಯಯಂ ಪರಮಾಗೆ.

ವಯತೆ = ನಡೆದಪಂ ; ಭಾವನಂ, ಭಾವನೀಯಂ, ಈ ೨ ನಡೆ.

ಮಾನ—ಪೂಜಾಯಾಂ, ಪೂಜೆಯೊಳ್ :

ಮಾನಯತಿ = ಪೂಜ್ಯನಾದಪಂ ; ಮಾನ್ಯಃ = ಪೂಜ್ಯಂ.

ಗರ್ಹ—ನಿಂದಾಯಾಂ, ಹಳಿತದೊಳ್ :

ಗರ್ಹಯತಿ = ಹಳಿದಪಂ ; ಗರ್ಹನ್, ಗರ್ಹಕಃ, ಈ ೨ ಹಳಿವಂ ; ಗರ್ಹಣಂ, ಗರ್ಹಣೀಯಂ, ಈ ೨ ಹಳಿತಂ.

ಛರ್ದೀ—ಸಂದೀಪೇ, ಉದ್ಗಾರದೊಳ್ :

ಛರ್ದಯತಿ = ಉದ್ಗಾರಿಸಿದಪಂ ; ಛರ್ದಕಃ = ಉದ್ಗಾರೀ ; ಛರ್ದಿಃ, ಛರ್ದನಂ, ಈ ೨ ಉದ್ಗಾರಂ.

ದೄ—ಭಯೇ, ಅಂಜಿಕೆಯೊಳ್ :

ದಾರಯತಿ = ಅಂಜಿಸಿದಪಂ ; ದಾರಕಃ = ಅಘೋರಮುಖದಲ್ಲಿ ಹುಟ್ಟಿದ ಅಥರ್ವಶಾಖೆಯ ತ್ರೇತಾಯುಗದ ಶಿವಾಚಾರ್ಯಂ ; ದಾರುಣಂ = ಅಂಜಿಕೆ ; ದಾರು = ಮರಂ.

ದಾರಾಃಪುಂಸಿ ಭೂಮ್ನಿ—ದಾರಶಬ್ದಂ ಪುಲ್ಲಿಂಗದಲ್ಲಿ ಬಹುವಚನದಲ್ಲಿ ಹೆಂಡಿರ್.

ದೇವದಾರುಃ = ದೇವದಾರೆಯ ಮರಂ.

ದೃಭ—ಸಂದರ್ಭೇ, ಸೇರುವೆಯೊಳ್ :

ದರ್ಭಯತಿ = ಸೇರಿಸಿದಪಂ ; ದರ್ಭಕಃ = ಸೇರಿಸುವಂ ; ದರ್ಭಃ = ದಬ್ಬೆಯ ಹುಲ್ಲು ; ದರ್ಭಳಂ = ದಬ್ಬಳಂ ; ದರ್ಭಣಂ, ದರ್ಭಣೀಯಂ, ಈ ೨ ಸೇರಿಸುವಂ.

ಮಾರ್ಗ—ಅನ್ವೇಷಣೇ, ಹುಡುಕುಹಣದೊಳ್ :

ಮಾರ್ಗಯತಿ = ಹುಡುಕಿದಪಂ ; ಮಾರ್ಗನ್, ಮಾರ್ಗೀ, ಮಾರ್ಗಕಃ, ಈ ೩ ಹುಡುಕುವಂ ; ಮಾರ್ಗಣಂ = ಅಂಬು ; ಮಾರ್ಗಃ = ದಾರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಠಿ—ಶೋಕೇ, ದುಕ್ಕದೊಳ್ :
ಕಂಠಯುತಿ = ದುಕ್ಕಿಸಿದಪಂ ; ಕಂಠೀರವಃ = ಸಿಂಹಂ ; ಕಂಠಃ = ನಾರಾಚಂ.

ಮೃಜೂ—ಶೌಚಾಲಂಕಾರಯೋಃ, ಶುಚಿತ್ವದೊಳಂ, ಸಿಂಗಾರದೊಳಂ :
ಮಾರ್ಜಯುತಿ = ಶುಚಿಯಾದಪಂ ; ಮಾರ್ಜನ್, ಮಾರ್ಜಕಃ, ಈ ೨ ಶುಚಿಯಾದಂ ; ಮಾರ್ಜನಂ, ಮಾರ್ಜನೀಯಂ, ಈ ೨ ಶುಚಿತ್ವಂ.

ಧೃಷ—ಪ್ರಹಸನೇ, ಬಿರುನಗೆಯೊಳ್ :
ಧರ್ಷಯುತಿ = ಬಿರುನಕ್ಕಪಂ ; ಧರ್ಷನ್, ಧರ್ಷಕಃ, ಈ ೨ ಬಿರುನಗುವಂ ; ಧೃಷ್ಟಂ, ಧೃಷ್ಟಿಃ, ಧರ್ಷಣಂ, ಧರ್ಷಣೀಯಂ, ಈ ೪ ಬಿರುನಗೆ.

ಮೃಷ—ತಿತಿಕ್ಷಾಯಾಂ, ತಾಳ್ಮೆಯೊಳ್ :
ಮರ್ಷಯುತಿ = ತಾಳ್ದಪಂ ; ಮರ್ಷನ್, ಮರ್ಷಕಃ, ಮೃಷ್ಟಃ, ಮೃಷ್ಟವಾನ್, ಈ ೪ ತಾಳ್ಮೆಯುಳ್ಳಂ ; ಮರ್ಷಣಂ, ಮರ್ಷಣೀಯಂ, ಈ ೨ ತಾಳ್ಮೆ.

ತಪ—ದಾಹೇ, ಸೀರಡಿಕೆಯೊಳ್ :
ತಾಪಯುತಿ = ಸೀರಡಿಸಿದಪಂ ; ತಪನ್, ತಾಪಕಃ, ಈ ೨ ಸೀರಡಿಸಿದಂ ; ತಾಪಃ, ಸಂತಾಪಃ, ಈ ೨ ಸೀರಡಿಕೆ ; ತಾಪಿನೀ = ಹೊಳೆ ; ಆತಪಂ = ಬಿಸಿಲ್ ; ಆತಪತ್ರಂ = ಸತ್ತಿಗೆ.

ವದ—ಭಾಷಣೇ, ಮಾತಿನೊಳ್ :
ವಾದಯುತಿ = ಮಾತಾಡಿದಪಂ ; ವಾದಯನ್, ವಾದೀ, ವಾದಕಃ, ಈ ೩ ಮಾತಾಳಿ ; ವಾದಃ, ವಾದನಂ, ವಾದನೀಯಂ, ಈ ೩ ಮಾತು ; ವಾದ್ಯಂ = ಬಾಜನೆ.

ಅರ್ಚ—ಪೂಜಾಯಾಂ, ಪೂಜನೆಯೊಳ್ :
ಅರ್ಚಯುತಿ = ಪೂಜಿಸಿದಪಂ ; ಅರ್ಚನ್, ಅರ್ಚಕಃ, ಈ ೨ ಪೂಜಾರಿ ; ಅರ್ಚನಂ, ಅರ್ಚನೀಯಂ, ಈ ೨ ಪೂಜನೆ.

ಅರ್ದ—ಹಿಂಸಾಯಾಂ, ಕೊಲೆಯೊಳ್ :
ಜನಾನರ್ದಯುತಿ = ಜನರಂ ಕೊಂದಪಂ ; ಜನಾರ್ದನಃ = ಕಾಲಾಗ್ನಿರುದ್ರಂ ; ಅರ್ದನಂ, ಅರ್ದನೀಯಂ, ಈ ೨ ಕೊಲೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶುಂಥ—ಶುದ್ಧೌ, ಸುದ್ದಿಯೊಳ್ :
ಶುಂಥಯತಿ = ಸುದ್ದಿಸಿದಪಂ ; ಶುಂಥನ್, ಶುಂಥಕಃ, ಈ ೨ ಸುದ್ದದವಂ ; ಶುಂಥನಂ, ಶುಂಥನೀಯಂ, ಈ ೨ ಸುದ್ದಂ ; ಶುಂಥಂತಾಂ ಪಿತರಃ = ಸುದ್ದರಾಗಲಿ ಪಿತರ್.

ವೃಞ್—ಆವರಣೇ, ಬಳಸಿನೊಳ್ :
ವಾರಯತಿ = ಬಳಸಿದಪುದು ; ವಾರಂ = ವಾಸರಂ ; ವಾರಣಃ = ಆನೆ ; ವರಣಾ = ಕಾಶಿಯ ಹೊಳೆ ; ವಾರ್, ವಾರಿ, ಈ ೨ ನೀರ್ ; ವಾರುಣೀ = ಮದ್ಯವುಂ, ವರುಣಪಾಶವುಂ.

ಧೂಞ್—ಕಂಪನೇ, ನಡುಕದೊಳ್ :
ಧಾವಯತಿ = ನಡುಗಿದಪಂ ; ಧಾವನ್, ಧಾವಕಃ, ಈ ೨ ನಡುಗುವಂ ; ಧಾವನಂ, ಧಾವನೀಯಂ, ಈ ೨ ನಡುಕಂ.

ಪ್ರೀಞ್—ತರ್ಪಣೇ, ತೃಪ್ತಿಯೊಳ್ :
ಪ್ರಾಪಯತಿ = ತಣಿದಪಂ ; ಪ್ರಾಯನ್, ಪ್ರಾಯಕಃ, ಈ ೨ ತಣಿವಂ ; ಪ್ರಾಯಃ, ಪ್ರಾಯಣಂ, ಪ್ರಾಯಣೀಯಂ, ಈ ೩ ತಣಿವು ; ಪ್ರಾಯಶಃ = ಮಿಗಿಲ್.

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತೈತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ
ಮುಖೋದ್ಭೂತಸ್ಯ ಗಜಕರ್ಣಪುತ್ರಸ್ಯಾತ್ರಿಗೋತ್ರಸ್ಯ ವೀರಮಾಹೇಶ್ವರ ತಂತ್ರ
ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡಸ್ಯ
ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ ಪಿತೃವ್ಯನಂಬ್ಯಣಗುರುಕರಜಾ
ತಸ್ಯ ಸಹ್ಯಾದ್ರಿಕಟಕಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ
ಚನ್ನವೀರಕವಿಕೃತೌ ಕಾಶಕೃತ್ಸ್ನಧಾತುಕರ್ಣಾಟ ಟೀಕಾ
ಯಾಂ ಉಭಯಭಾಷಾ ಲೇಖಕ ಪಾಠಕ ಶ್ರೋತೄ
ಣಾಂ ಸಂಸ್ಕೃತಾರ್ಥಪ್ರಕಾಶಿಕಾ ಭೂಯಾತ್

ಇತಿ ಇನ್ನಿಕರಣಶ್ಚುರಾದಿಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಣಿಜನ್ತಾಃ

ಪ್ರಯೋಜ್ಯಕರ್ತರಿ ಣಿಚ್—ಪ್ರೇರಿಪ ಪುರುಷನ ಪುರುಳಲ್ಲಿ ಣಿಜಾಗಮುಂಬಕ್ಕುಂ, ಆಖ್ಯಾತಪ್ರತ್ಯಯವುಂ ಕೃತ್ಪ್ರತ್ಯಯವುಂ ಪರಮಾಗೆ; ಣಕಾರಂ ವೃದ್ಧಿಗೋಸುಗಂ; ವೃದ್ಧಿರಾದೌಸಣೆ—ಧಾತುವಿನ ಮೊದಲ ಸಾವಿಯಲ್ಲಿ ಆಕೈಗಳಕ್ಕುಂ.

ಭಾವಯತಿ = ಆಗಿಸಿದಪಂ ; ಭಾವಯನ್, ಭಾವಯಿತಾ, ಭಾವಕಃ, ಈ ೩ ಆಗಿಸುವಂ ; ಭಾವಿತಂ = ಆಗಿಸಲ್ಪಟ್ಟುದು ; ಭಾವನಂ, ಭಾವನೀಯುಂ, ಈ ೨ ಆಗಿಸುವುದು; ಭಾವಃ = ಆಗು ; ಭಾವೀ = ಆಗುವಂ ; ಭಾವಿನೀ = ಆಗುವಳ್ ; ಭಾವುಕಂ = ಲೇಸು ; ಭಾವ್ಯಂ, ಭಾವನೀಯುಂ, ಈ ೨ ಆಗಲ್ತಕ್ಕುದು.

ಕಾರಯತಿ = ಮಾಡಿಸಿದಪಂ ; ಕಾರಯನ್, ಕಾರಯಿತಾ, ಈ ೨ ಮಾಡಿಸುವಂ ; ಕಾರಣಂ, ಕಾರಕಂ, ಈ ೨ ಮಾಡಿಸುವುದು ; ಕಾರಣೀಯುಂ, ಕಾರಕಂ, ಈ ೨ ಮಾಡಿಸಲ್ತಕ್ಕುದು ; ಕಾರಿತಂ = ಮಾಡಿಸಲ್ತಕ್ಕುದು ; ಕಾರೀ = ಮಾಡಿಸುವಂ ; ಕಾರಿಣೀ = ಮಾಡಿಸುವಳ್ ; ಕಾರಯಿತ್ರೀ = ಮಾಡಿಸುವಳ್.

ಪಾಚಯತಿ = ಅಡಿಸಿದಪಂ ; ಪಾಚಯನ್, ಪಾಚಯಿತಾ, ಪಾಚಕಃ, ಈ ೩ ಅಡಿಸುವಂ ; ಪಾಚಿನೀ, ಪಾಚಕೀ, ಪಾಚಯಿತ್ರೀ, ಈ ೩ ಅಡಿಸುವಳ್—ಇತ್ಯಾದಿ ಪ್ರಯೋಜ್ಯಕರ್ತೃವಸರಿವುದು.

ಸಾಮ್ನ ಉಪಮಾನಾದಾಚಾರೇ ಆಯಜೀಯ—ಹೇಳಿಕೆಯನಾಮದತ್ತಣಿಂ ಆಯಙ, ಈಯಾ ಎಂಬಾಗಮುಂಗಳ್ಬಕ್ಕುಂ, ಆಖ್ಯಾತಪ್ರತ್ಯಯುಂ ಪರಮಾಗೆ ಆಚರಿಸುವ ಪುರುಳೊಳ್ ; ಙಕಾರಮಾತ್ಮನೇ ಪದಕ್ಕೋಸುಗಂ.

ವೃಷಭಃ ಶಿವಾಯತೆ = ಬಸವಂ ಶಿವನಂತೆ ಆಚರಿಸಿದಪಂ ; ಶಿವೋ ವೃಷಭಾಯತೆ = ಶಿವಂ ಬಸವನಂತೆ ಆಚರಿಸಿದಪಂ.

ಭಾಗವಾಟೀ ವೃಷೇಂದ್ರಾಯು, ಮೇರುಃ ಕ್ರೀಡಾಚಲಾಯತೇ |
ಕೂಪಾಯತೇ ದೇವಗಂಗಾ ಚರಾಯಂತೇ ಶಿವಾ ಭೃಶಂ ||

ಭಾಗವಾಡಿಯು ಬಸವಂಗೆ ಮಹಾಮೇರುಪರ್ವತಂ ಜಾಸುಗುಪ್ಪಾಳೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಡುವ ಬೆಟ್ಟದಂತೆ ಆಚರಿಸಿದಪುದು, ಸಗ್ಗದ ಹೊಳೆ ಈಸುವ ಕೆರೆಯಂತೆ ಆಚರಿಸಿದಪುದು.

ಶಿವಾಃ = ರುದ್ರರ್ಕಳ್ ; ಚರಾಯತೆ = ಜಂಗಮರಂತೆ ಆಚರಿಸಿದಪರ್ ; ಭೃಶಂ = ದಿಟಂ.

ಕಲ್ಯಾಣಪತ್ತನಾವಾಸಾ ವೃಷಭೀಯಂತಿ ಲಿಂಗಿನಃ |
ಶಂಕರಾ ಅಲ್ಲಮಾಯಂತಿ ಕೈಲಾಸೀಯತಿ ತತ್ಪುರಂ ||

ಕಲ್ಯಾಣ ಪಟ್ಟಣದಲ್ಲಿ ಮನೆಗಳುಳ್ಳ ಲಿಂಗಧಾರಿಗಳ್ ಬಸವನಂತೆ ಆಚರಿಸಿದಪರ್, ಶಿವರ್ಕಳ್ ಅಲ್ಲಮ ಪ್ರಭುವಿನಂತೆ ಆಚರಿಸಿದಪರ್, ಆ ಕಲ್ಯಾಣಂ ಕೈಲಾಸದಂತೆ ಆಚರಿಸಿದಪುದು.

ಆಯಙ್ಯಯೋರ್ಲುಕ್—ಆಯಙ, ಈಯಾ ಎಂಬುವರ್ಕ್ಕೆ ಲೋಪಮಕ್ಕುಂ ನಾಮದತ್ತಣಿಂ ಆಖ್ಯಾತಂ ಪರಮಾಗೆ.

ಕುಲಿಶಂಕುಸುಮತಿ ದಹನಸ್ತುಹಿನತಿ ವಾರಾಂನಿಧಿಃ ಧ್ರುವಂ ಸ್ಥಲತಿ |
ಶತ್ರುರ್ಮಿತ್ರತಿ ವಿಷಮಪ್ಯಮೃತತಿ, ಶಿವಶಿವೇತಿ ಪ್ರಲಪತೋ ಭಕ್ತ್ಯಾ ||

ವಿಶ್ವಾಸದಿಂ ಶಿವನೇ ಎಂದು ಜಪಿಸುತ್ತಿರ್ದ್ದಂಗೆ ಸಿಡಿಲ್ ಹೂವಿನ ಮಾಲೆಯಂತೆ ಆಚರಿಸಿದಪುದು, ಬೆಂಕಿ ಮಂಜಾದಪುದು, ಕಡಲ್ ನೆಲನಾದಪುದು, ಪಗೆ ನೆಂಟನಾದಪಂ, ವಿಸವುಂ ಪಾಲಾದಪುದು.

ಅಕರ್ಮಕೇಭ್ಯೋ ಧಾತುಭ್ಯೋ ಭಾವೇಕರ್ಮಣಿ ಯಙ್ ಸ್ಮೃತಃ ||

ಅಹಣವೆಂಬ ಬಗೆಯಪುರುಳೊಳ್ ಪಟ್ಟಪಡುವೆಂಬ ಕರ್ತೃನಿಷ್ಠ ವ್ಯಾಪಾರದಪುರುಳ್ ದ್ವಿತೀಯಾವಿಭಕ್ತಿಗಳನೊಲ್ಲದ ಧಾತುಗಳತ್ತಣಿಂದೆ ಯಙಾಗಮುಂಬಕ್ಕುಂ ಆಖ್ಯಾತಪ್ರತ್ಯಯಂ ಪರಮಾಗೆ; ಙಕಾರ ವಾತ್ಮನೇ ಪದಕ್ಕೋಸುಗಂ.

ಭೂಯತೆ ಪ್ರಭುಣಾ ಭಕ್ತೋ ಭಕ್ತೇನ ಸ್ತೂಯತೇ ಪ್ರಭುಃ |
ಉಭಾಭ್ಯಾಂ ತೃಪ್ಯತೇವಸ್ತು ಷಟ್ಸ್ಥಲಬ್ರಹ್ಮ ಶಾಶ್ವತಂ ||

ಬಸವನೆಂಬ ಭಕ್ತಂ ಅಲ್ಲಮನಿಂ ಅನುಭವಿಸುವಹಣ, ಭಕ್ತನಾದ ಬಸವನಿಂ ಒಡೆಯನಾದ ಅಲ್ಲಮಂ ಕೊಂಡಾಡುಪಹಣ, ಭಕ್ತನಾದ ಬಸವನೆಂಬ ಒಡೆಯನಾದ ಅಲ್ಲಮನೆಂಬ ಇಬ್ಬರಿಂ ನಿತ್ಯವಾದ ಸರ್ವಾಂತರ್ಯಾಮಿಯಾದ ನಿರಂಜನಂ ತಣಿಯಲ್ಪಟ್ಟಪುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸ್ತ್ಯಲ್ಲವೋವೃಷಸ್ತ್ವಾಂತೆ ಪೂಜಯತ್ಯಲ್ಲಮಂ ವೃಷಾ |
ವೃಷಭಂ ಯಾಚತೇ ಭಿಕ್ಷಾಂ ಭುಙ್ಕ್ತೇ ದತ್ತಾಮ್ ಗುಹೇಶ್ವರಃ ||
ತನುರ್ಮನೋಧನಂ ಭಕ್ತ್ಯಾ ದೀಯತೆ ವೃಷಭೇಣ ವೈ |
ಭುಜ್ಯತೇ ಪ್ರಭುಲಿಂಗೇಣ ಪುನರ್ಭವನಿವೃತ್ತಯೇ ||

ಇತಿ ಶ್ರೀಯಾಗಂಟಿಶರಭಲಿಂಗಪ್ರಸಾದಿನಸ್ತಿತ್ತಿರಯಜುಶ್ಶಾಖಾಧ್ಯಯನಸ್ಯ ವಾಮದೇವ
ಮುಖೋದ್ಭೂತಸ್ಯ, ಗಜಕರ್ಣಪುತ್ರಸ್ಯ, ಅತ್ರಿಗೋತ್ರಸ್ಯ, ವೀರಮಾಹೇಶ್ವರ ತಂತ್ರ
ಸೂತ್ರಸ್ಯ ಶಿವಲಂಕಮಂಚನಪಂಡಿತಾರಾಧ್ಯಪ್ರವರಸ್ಯ ಕೋಕಿಲಾಕುಂಡ
ಪುರಸ್ಯ ಮಹಾಮಠಸ್ಯ ಸಂಗನಗುರುಲಿಂಗನಂದ್ಯಂಬಾಕುಮಾರಸ್ಯ
ತುಮುಕೂರ ಮಹಾಮಠ ಕಂಥಾಚಾರ್ಯ ಪಿತೃವ್ಯನಂಬ್ಯಣ್ಣ
ಗುರುಕರಜಾತಸ್ಯ ಸಹ್ಯಾದ್ರಿಕಟಕಕೆಳದಿನಗರಸಮೀಪಸ್ಯ
ಷಡ್ದೇಶಸ್ಯ, ಕುಂಟಿಕಾಪುರಸ್ಯ, ಕಾಶೀಕಾಂಡ ಚನ್ನವೀರ
ಕವಿಕೃತೌ ಕಾಶಕೃತ್ಸ್ನ ಶಬ್ದಕಲಾಪಸ್ಯ, ದ್ವಾದಶ
ಸಹಸ್ರ ಧಾತುಪಾಠಸ್ಯ, ಕರ್ಣಾಟ ಟೀಕಾ
ಯಾಂ ಇನ್ವಿಕರಣಶ್ಚುರಾದಿಃ.

ಸಮಾಪ್ತಂ

ಮಂಗಳಂ

ಮಹಾ ಶ್ರೀ ಕೆಳದಿವೀರೇಶಾಯನಮಃ
ಶುಭಮಸ್ತು, ಶೋಭನಮಸ್ತು, ನಿರ್ವಿಘ್ನಮಸ್ತು,
ಆಯುರಾರೋಗ್ಯೈಶ್ವರ್ಯಮಸ್ತು,
ಶ್ರೀ ಗುರವೇನಮಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಾತುಪಾಠಃ

ಅ

ಅಕ—ಕುಟಿಲಾಯಾಂ ಗತೌ, ೧೩೯
ಅಕಿ—ಲಕ್ಷಣೇ, ೮೮
ಅಕ್ಕ—ಬಂಧನೇ ಪಾಲನೇಚ, ೪೨
ಅರ್ಕ—ಆದಾನೇ, ೮೮
ಅರ್ಕ—ಸ್ತುತೌ, ೨೬೬
ಅಕ್ಷ—ಖೇಲನೇ, ೧೧೮
ಅಕ್ಷ—ಸಂಘಾತೇ, ೫೫
ಅಖ—ಗತೌ, ೯
ಅಗ—ಆದಾನೇ, ೮೮
ಅಗಿ—ಗತೌ, ೯
ಅಘ—ಗತ್ಯಾಕ್ಷೇಪೇ, ೯೨
ಅಘ—ಪಾಪಕರಣೇ, ೨೯೧
ಅಘಿ—ಗತ್ಯಾಕ್ಷೇಪೇ, ೯೨
ಅಚ್ಛ—ಗತೌ, ೭೫
ಅರ್ಚ—ಪುಜಾಯಾಂ, ೧೨
ಅರ್ಚ—ಪೂಜಾಯಾಂ, ೨೯೮
ಅಜ—ಕ್ಷೇಪಣೇಚ, ೧೩
ಅಜ—ಕುಟಿಲಾಯಾಂ ಗತೌ, ೧೩೯
ಅರ್ಜ—ಅರ್ಜನೇ, ೧೩
ಅರ್ಜ—ಪ್ರತಿಯತ್ನೇ, ೨೭೬
ಅಟ—ಗತೌ, ೧೮
ಅಟ್ಟ—ಮಂಚಿಕಾಯಾಂ, ೨೦
ಅಟ್ಟ—ಅನಾದರೇ, ೨೫೬
ಅಡ—ಉದ್ಯಮೇ, ೨೨
ಅಡ್ಡ—ಅಭಿಯೋಗೇ, ೨೩
ಅಡಿ—ಆವರಣೇ, ೨೫
ಅಡಿ—ಗತೌ, ೯೮
ಅಣ—ಶಬ್ದೇ, ೩೩
ಅತ—ಸಾತತ್ಯಗಮನೇ, ೫
ಅತಿ—ಬಂಧನೇ, ೬
ಅತಿ—ಕ್ರಮಹಿಂಸಯೋಃ, ೯೭
ಅತ್ರಿ—ಜೀವನೇ, ೨೫೨
ಅರ್ಥ—ಉಪಯಾಚ್ಞಾಯಾಂ, ೨೮೭
ಅದ—ಭಕ್ಷಣೇ, ೧೬೨
ಅರ್ದ—ಗತೌ ಯಾಚನೇಚ, ೭
ಅರ್ದ—ಹಿಂಸಾಯಾಂ, ೨೯೮
ಅದಿ—ಬಂಧನೇ, ೬
ಅದಿ—ಕ್ರಮಹಿಂಸಯೋಃ, ೯೭
ಅನ—ಪ್ರಾಣನೇ, ೧೬೮
ಅನ—ಪ್ರಾಣನೇ,೨೦೩
ಅನು—ಧಾರಣೇ, ೨೪೧
ಅನುರುಧ—ಕಾಮೇ, ೨೦೨
ಅಪ—ಪಾಲನೇ, ೪೨
ಅಪ್ಪ—ಪಾಲನೇ, ೪೨
ಅಬ್ಬ—ಜನನೇ, ೪೨
ಅಬಿ—ಮರ್ದನೇ, ೩೧
ಅಬಿ—ಶಬ್ದೇ, ೧೦೪
ಅಭ್ರ—ಗತೌ, ೫೨
ಅಭಿ—ದ್ರವಣೇ, ೭೭
ಅಭಿ—ಶಬ್ದೇ, ೧೦೫
ಅಮ—ಗತೌ, ೪೧
ಅಮ—ರೋಗೇ, ೨೭೫
ಅಮ್ಮ—ಗತೌ, ೪೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಯ—ಗತೌ, ೧೦೯
ಅಲರ್ಕ—ಆದಾನೇ, ೮೮
ಅಲಙ್—ಭೂಷಣಪರ್ಯಾಪ್ತಿ ವಾರಣೇಷು, ೧೫೭
ಅಲ್ಲ—ಬಂಧನೇ ಪಾಲನೇಚ, ೪೨
ಅವ—ಪಾಲನೇ, ೫೪
ಅಪ—ಕಲ್ಪನೇ, ೨೭೮
ಅವ್ಯ—ಬಂಧನೇ ಪಾಲನೇಚ, ೪೨
ಅರ್ವ—ಹಿಂಸಾಯಾಂ, ೩೦
ಅವ್ವ—ಬಂಧನೇ ಪಾಲನೇಚ, ೪೨
ಅಶ—ಭೋಜನೇ, ೨೪೯
ಅಶೂಙ್—ವ್ಯಾಪ್ತೌ, ೨೧೧
ಅಷ—ದೀಪ್ತ್ಯಾದಾನಯೋಶ್ಚ, ೧೫೧
ಅಸ—ದೀಪ್ತ್ಯಾದಾನಯೋಶ್ಚ, ೧೫೧
ಅಸ—ಭುವಿ, ೧೬೭
ಅಸ್ತ—ನಾಶೇ, ೨೬೦
ಅಸು—ಕ್ಷೇಪಣೇ, ೧೯೧
ಅಹ—ಹಿಂಸಾಗತ್ಯೋಃ, ೬೬
ಅಹ—ಆಸ್ವಾದನೇ, ೧೭೪
ಅಹಿ—ಕಲುಷೇ, ೬೭
ಅಹಿ—ವಕ್ರಗತೌ, ೧೨೨
ಅರ್ಹ—ಪೂಜಾಯಾಂ, ೬೭, ೨೭೭
ಅಂಕ—ಲಕ್ಷಣೇ, ೨೮೯
ಅಂಚು—ಗತಿಪೂಜನಯೋಃ, ೧೧
ಅಂಚು—ವ್ಯಯಗತೌ, ೧೫೧
ಅಂಚು—ವಿಶೇಷಣೇ, ೨೭೮
ಅಂಜೂ—ವ್ಯಕ್ತಿಮ್ರಕ್ಷಣ ಕಾನ್ತಿಗತಿಷು, ೨೩೬
ಅಂಧ—ದೃಷ್ಟ್ಯುಪಸಂಹಾರೇ, ೨೮೯
ಅಂಶ—ಸಂಘಾತೇ, ೨೮೮

ಆ

ಆಛಿ—ಆಯಾಮೇ, ೧೨
ಆಪ್ಲ—ವ್ಯಾಪ್ತೌ, ೨೦೮
ಆಪ್ಯ—ಲಂಭನೇ, ೨೯೬
ಆಸು—ಉಪವೇಶನೇ, ೧೭೦

ಇ

ಇ—ಗತೌ, ೧೮
ಇಕ್—ಸ್ಮರಣೇ, ೧೬೪
ಇಕ್ಷ—ಆಸ್ವಾದನೇ, ೧೧೯
ಇಖಿ—ಗತೌ, ೯
ಇಗಿ—ಗತೌ, ೯
ಇಘಿ—ಪಾಲನೇ, ೧೦
ಇಙ್—ಅಧ್ಯಯನೇ, ೧೭೨
ಇಜ—ಗತೌ, ೯೫
ಇಟ—ಗತೌ, ೧೮
ಇಡ—ಧಾರಣೇ, ೩೮
ಇಡಿ—ಹಿಂಸಾಗತ್ಯೋಃ, ೨೬
ಇಣ್—ಗತೌ, ೧೬೪
ಇಣ—ಶಬ್ದೇ, ೩೩
ಇದಿ—ಪರಮೈಶ್ವರ್ಯೇ, ೭
ಇರಣ—ಶಬ್ದೇ, ೩೩
ಇಲ—ಗತೌ, ೪೬
ಇಲ—ಪ್ರೇರಣೇ, ೨೬೮
ಇಲ—ಗತೌ ಧಾರಣೇಚ, ೨೨೫
ಇಲ್ಲ—ಗತೌ, ೪೬
ಇವಿ—ವ್ಯಾಪ್ತೌ, ೫೫
ಇಷ—ಉಂಛೇ, ೫೭
ಇಷ—ಇಚ್ಛಾಯಾಂ, ೨೨೫
ಇಷ—ಗತೌ, ೧೮೪
ಇಷ—ಅಭೀಕ್ಷ್ಣೇ, ೨೫೦
ಇಂಧೀ—ದೀಪ್ತೌ, ೨೩೭

ಈ

ಈಕ್ಷ—ದರ್ಶನೇ, ೧೧೯
ಈಙ್—ಗತೌ, ೧೯೯
ಈಜೀ—ಗತೌ, ೯೫
ಈಟ—ಗತೌ, ೧೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈಡ—ಧಾರಣೇ, ೩೮
ಈಡ—ಸ್ತುತೌ, ೧೨೦
ಈಡ—ಸ್ತುತೌ, ೨೬೬
ಈರ—ಗತೌ, ೧೨೦
ಈರ—ಕ್ಷೇಪೇ, ೨೯೪
ಈಶ—ಐಶ್ವರ್ಯೇ, ೧೨೦
ಈಶುಚಿರ್—ಪೂತೀಭಾವೇ, ೨೦೪
ಈಷ—ಉಂಛೇ, ೫೭
ಈರ್ಕ್ಷ್ಯ—ಈರ್ಷಾಯಾಂ, ೪೨
ಈರ್ಷಾ—ಗತಿಹಿಂಸಾದಾನೇಷು, ೧೨೦
ಈಹ—ಚೇಷ್ಟಾಯಾಂ, ೧೨೨
ಈಳ—ಸ್ತುತೌ, ೧೨೦

ಉ

ಉ—ಶೋಷಣೇ, ೭೦
ಉಕ್ಷ—ಸೇಚನೇ, ೫೯
ಉಕ್ಷ—ವಹನೇ, ೧೧೯
ಉಖ—ಗತೌ, ೯
ಉಙ್—ಶಬ್ದೇ,
ಉಚ—ಸಮವಾಯೇ, ೧೯೪
ಉಛಿ—ಉಂಛೇ, ೧೩
ಉಚ್ಛೀ—ವಿಸಾಶೇ, ೧೩
ಉಚ್ಛೀ—ವಿಪಾಶೇ, ೨೧೬
ಉಛೃದಿರ್—ದೀಪ್ತಿದೇವನಯೋಃ, ೨೩೪
ಉಜ್ಝ—ಉತ್ಸರ್ಗೇ, ೨೧೭
ಉಟ—ಗತೌ, ೧೮
ಉಡಿ—ಹಿಂಸಾಗತ್ಯೋಃ, ೨೬
ಉತೃದಿರ್—ಹಿಂಸಾನಾದರಯೋಃ, ೨೩೪
ಉರ್ದ—ಮಾನೇ ಕ್ರೀಡಾಯಾಂಚ, ೮೩
ಉಧ್ರಸ—ಉತ್ಕ್ಷೇಪೇ, ೨೭೯
ಉಧ್ರಶು—ಉಂಛೇ, ೨೪೯
ಉನ—ಸಂಭಕ್ತೌ, ೩೮
ಉಬ್ಜ—ಆರ್ಜನೇ, ೨೧೭
ಉಭ—ಪೂರಣೇ, ೨೧೯
ಉರ್ವೀ—ಹಿಂಸಾಯಾಂ, ೫೩
ಉಷ—ರುಜಾಯಾಂ, ೫೭
ಉಷು—ದಾಹೇ, ೬೧
ಉಂಛಿ—ಉಂಛೇ, ೨೨೬
ಉಂದೀ—ಕ್ಲೇದನೇ, ೨೩೫
ಉಂಭ—ಪೂರಣೇ, ೨೧೯

ಊ

ಊಙ್—ಶಬ್ದೇ, ೧೨೫
ಊರ್ಜ—ಗತೌ, ೯೫
ಊರ್ಜ—ಬಲಪ್ರಾಣನಯೋಃ, ೨೫೫
ಊರ್ಣುಞ್—ಆಚ್ಛಾದನೇ, ೧೭೪
ಊನ—ಪರಿಹರಣೇ, ೨೮೫
ಊಯೀ—ತಂತುಸಂತಾನೇ, ೧೧೦
ಊಷ—ರುಜಾಯಾಂ, ೫೭
ಊಹ—ವಿತರ್ಕೇ, ೧೨೪

ಋ

ಋ—ಗತೌ, ೭೪
ಋ—ಗತೌ, ೧೭೬
ಋಕ್ಷ—ಹಿಂಸಾಯಾಂ ದೀಪ್ತೌ ಚ, ೧೧೮
ಋಙ್—ಶಬ್ದೇ, ೧೨೫
ಋಚ—ಸ್ತುತೌ, ೨೧೭
ಋಛ—ಗತೌ, ೭೫
ಋಛ—ಗತೀಂದ್ರಿಯಪ್ರಳಯಮೂರ್ತಿಭಾವೇಷು, ೨೧೬
ಋಜ—ಗತೌ, ೯೫
ಋಜಿ—ಭರ್ಜನೇ, ೯೬
ಋಣು—ದುರ್ಗತೌ, ೨೩೯
ಋಫ—ಭರ್ತ್ಸನಹಿಂಸಯೋಃ, ೨೯
ಋಫ—ಹಿಂಸಾಯಾಂ, ೨೧೮
ಋಭುಕ್ಷ—ಘಾತನೇ, ೧೧೮
ಋಷೀ—ಗತೌ, ೨೧೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಋಂಫ—ಭರ್ತ್ಸನಹಿಂಸಯೋಃ, ೨೯
ಋಂಫ—ಹಿಂಸಾಯಾಂ, ೨೮೦

ಋೂ

ಋೂ—ಪ್ರಾಪಣೇಚ, ೭೪
ಋೂ—ಗತೌ, ೨೪೭
ಋೂಙ್—ಶಬ್ದೇ, ೧೨೫

ಌ

ಌಙ್—ಶಬ್ದೇ, ೧೨೫
ೡಙ್—ಶಬ್ದೇ, ೧೨೫

ಏ, ಐ

ಏನ—ಸಂಭಕ್ತೌ, ೩೮
ಏಕ್ಯ—ಶಂಕಾಯಾಂ, ೮೭
ಏಙ್—ಶಬ್ದೇ, ೧೨೫
ಏಜೃ—ಕಂಪನೇ, ೧೪
ಏಜೃ—ದೀಪ್ತೌ, ೯೬
ಏಠ—ವಿಬಾಧಾಯಾಂ, ೯೯
ಏಡ—ಧಾರಣೇ, ೩೮
ಏಧ—ವೃದ್ಧೌ, ೮೧
ಏಷ—ಗತೌ, ೧೨೦
ಐಙ್—ಶಬ್ದೇ, ೧೨೫

ಓ, ಔ

ಓಖೃ—ಶೋಷಣಾಲಮರ್ಥಯೋಃ, ೯
ಓಙ್—ಶಬ್ದೇ, ೧೨೫
ಓಪ್ಯಾಯೀ—ವೃದ್ಧೌ, ೧೧೧
ಓಲಜೀ—ವ್ರೀಡಾಯಾಂ, ೨೩೨
ಓಲಡಿ—ಉತ್ಕ್ಷೇಪೇ, ೨೫೪
ಓಲಸ್ಜೀ—ವ್ರೀಡಾಯಾಂ, ೨೩೨
ಓವಿಜೀ—ಭಯಚಲನಯೋಃ, ೨೩೨
ಓವಿಜೀ—ಭಯಚಲನಯೋಃ, ೨೩೬
ಓಹಾಕ್—ತ್ಯಾಗೇ, ೧೭೬
ಓಹಾಙ್—ಗತೌ, ೧೮೦
ಔಙ್—ಶಬ್ದೇ, ೧೨೫

ಕ

ಕಕ—ಲೌಲ್ಯೇ, ೮೮
ಕಕ್ಕ—ಲೌಲ್ಯೇ, ೮೮
ಕರ್ಕ್ಕ—ಲೌಲ್ಯೇ, ೮೮
ಕಕಿ—ಗತೌ, ೯೦
ಕಕ್ಷ—ಧಾರಣೇ, ೧೧೮
ಕಖ—ಹಸನೇ, ೧೩೮
ಕಖಿ—ಚಲನೇ, ೧೦೩
ಕಗೆ—ಗತೌ, ೧೩೯
ಕಚ—ಬಂಧನೇ, ೯೪
ಕಚ್ಛ—ಧಾರಣೇ, ೧೨
ಕಚ—ಗತೌ, ೭೫
ಕಚಿ—ದೀಪ್ತೌ, ೯೬
ಕಜಿ—ಹಿಂಸಾಗತ್ಯೋಃ, ೬೫
ಕಟ—ವರ್ಷಾವರಣಯೋಃ, ೧೫
ಕಟಿ—ವೇದನಾಯಾಂ, ೧೭
ಕಠ—ಕೃಚ್ಛ್ರಜೀವನೇ, ೨೧
ಕಠಿ—ಗಿಳನೇ, ೨೨
ಕಠಿ—ಶೋಕೇ, ೯೯
ಕಠಿ—ಶೋಕೇ, ೨೯೮
ಕಡ—ಮದೇ, ೨೩
ಕಡ—ಮದೇ, ೨೨೯
ಕಡ—ಭೇದೇ, ೨೫೯
ಕಡಬಿ—ಮರ್ದನೇ, ೩೧
ಕಡ್ಡ—ಕಾರ್ಕಶ್ಯೇ, ೨೩
ಕಡಿ—ಮಾಂಸಪೃಥುಳೇ, ೨೫
ಕಡಿ—ಮದೇ, ೧೦೧
ಕಣ—ಶಬ್ದೇ, ೩೩
ಕಣ—ಗತೌ, ೧೩೯
ಕಣ—ನಿಮಾಲನೇ, ೨೭೫
ಕತ್ರಿ—ಉಪಾಯೇ, ೨೫೨
ಕಥ—ವಾಕ್ಯಪ್ರಬಂಧೇ, ೨೮೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತ್ಥ—ಶ್ಲಾಘಾಯಾಂ, ೮೬
ಕಥಿ—ಹಿಂಸಾಸಂಕ್ಲೇಶನಯೋಃ, ೬
ಕಥ್ರ—ಶೈಥಿಲ್ಯೇ, ೨೮೮
ಕರ್ದ—ಕುತ್ಸಿತೇ ಶಬ್ದೇ, ೭
ಕರ್ದ್ದ—ಕುತ್ಸಿತೇ ಶಬ್ದೇ, ೮೫
ಕದಿ—ಆಹ್ಲಾದನೇ ರೋದನೇಚ, ೮
ಕನಿ—ವ್ಯಾಪ್ತಿಕಾಂತಿಗತಿಷು, ೩೮
ಕನು—ಶೋಭಾಯಾಂ, ೨೪೧
ಕಪಿ—ಕ್ಷಾಂತೌ, ೨೫೮
ಕರ್ಬ—ದರ್ಪೇ, ೫೪
ಕಬಿ—ಮರ್ದನೇ, ೩೧
ಕಭಿ—ಸ್ತಂಭನೇ, ೭೭
ಕಬೃ—ವರ್ಣೇ, ೧೦೫
ಕಮು—ಕಾಂತೌ, ೧೦೯
ಕಲ—ಧಾರಣೇ, ೪೫
ಕಲ—ಸಂಖ್ಯಾನೇ, ೧೧೪
ಕಲ—ಕ್ಷೇಪೇ, ೨೬೩
ಕಲ—ಗತೌ, ೨೮೩
ಕಲಜ—ಹಿಂಸಾಗತ್ಯೋಃ, ೬೫
ಕಲ್ಲ—ಧಾರಣೇ, ೪೫
ಕಲ್ಲ—ಅವ್ಯಕ್ತೇ ಶಬ್ದೇ, ೧೧೪
ಕಲ್ಲ—ಪ್ರಾಧಾನ್ಯಪರಿಭಾಷಣಹಿಂಸಾದಾನೇಷು, ೧೨೩
ಕರ್ವ—ಗತೌ, ೩೦
ಕಶಿರ್—ದೀಪ್ತೌ, ೭೯
ಕಷ—ಹಿಂಸಾಯಾಂ, ೫೮
ಕಷ—ಧಾರಣೇ, ೧೧೮
ಕಷ—ಸಂವರಣಾದಾನಯೋಃ, ೧೫೪
ಕಷ್ಟ—ಪ್ರತಿಘಾತೇ, ೧೩೮
ಕಸ್ತ—ಆಮೋದೇ, ೨೬೦
ಕಸಿ—ಗತಿಶಾತನಯೋಃ, ೧೭೧
ಕಸೃ—ಗತೌ, ೧೫೦
ಕಹ—ಹಿಂಸಾಗತ್ಯೋಃ, ೬೬
ಕ್ನಥ—ಹಿಂಸಾಯಾಂ, ೧೪೦
ಕ್ಮರ—ಹೂರ್ಛನೇ, ೫೨
ಕ್ರಥ—ಹಿಂಸಾಯಾಂ, ೧೪೦
ಕ್ರಥ—ಹಿಂಸಾಯಾಂ, ೨೯೫
ಕ್ರದ—ವೈಕಲ್ಯೇ, ೧೩೬
ಕ್ರದಿ—ವೈಕಲ್ಯೇ, ೧೩೬
ಕ್ರದಿ—ಆಹ್ಲಾದನೇ ರೋದನೇಚ, ೮
ಕ್ರಂದ—ಸಾತತ್ಯೇ, ೨೭೬
ಕ್ರಪ—ಕೃಪಾಯಾಂ, ೧೩೬
ಕ್ರಮು—ಪಾದವಿಕ್ಷೇಪೇ, ೪೦
ಕ್ಲಥ—ಹಿಂಸಾಯಾಂ, ೧೪೦
ಕ್ಲದ—ವೈಕಲ್ಯೇ, ೧೩೬
ಕ್ಲದಿ—ಆಹ್ಲಾದನೇ ರೋದನೇಚ, ೮
ಕ್ಲದಿ—ವೈಕಲ್ಯೇ, ೧೩೬
ಕ್ಲಪಿ—ಅವಕಲ್ಪನೇ, ೨೭೮
ಕ್ಲಮು—ಗ್ಲಾನೌ, ೧೯೧
ಕ್ವಣ—ಶಬ್ದೇ, ೩೩
ಕ್ವಥ—ಪಾಕೇ, ೧೪೮
ಕ್ಷಜ—ದಾನೇ ಗತೌಚ, ೧೩೬
ಕ್ಷಜ—ಕೃಚ್ಛ್ರಜೀವನೇ, ೨೬೨
ಕ್ಷಣ—ಶಬ್ದೇ, ೩೩
ಕ್ಷಣು—ಹಿಂಸಾಯಾಂ, ೨೩೯
ಕ್ಷಪಿ—ಕ್ಷಾಂತೌ, ೨೫೮
ಕ್ಷಮೂಷ್—ಸಹನೇ, ೧೦೮
ಕ್ಷಮೂಷ್—ಸಹನೇ, ೧೯೧
ಕ್ಷರ—ಸಂಚಲನೇ, ೧೪೯
ಕ್ಷಲ—ಶೌಚೇ, ೨೬೧
ಕಾಕ್ಷಿ—ಕಾಂಕ್ಷಾಯಾಂ, ೫೬
ಕಾಡಿ—ಪರಿಚ್ಛೇದೇ, ೨೫
ಕಾಶೃ—ದೀಪ್ತೌ, ೧೨೧
ಕಾಸೃ—ಶಬ್ದಕುತ್ಸಾಯಾಂ, ೧೨೧
ಕಾಸೃ—ದೀಪ್ತೌ, ೨೦೧
ಕ್ಷ್ಮಾಯೀ—ವಿಧೂನನೇ, ೧೧೧
ಕಿಟ—ಗತೌ, ೧೮
ಕಿಟ್ಟ—ಚೂರ್ಣೇ, ೨೦
ಕಿಣ—ಶಬ್ದೇ, ೩೩ [೮೦
ಕಿತ—ನಿವಾಸೇ ರೋಗಾಪನಯನೇಚ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಿತ—ಜ್ಞಾನೇ, ೧೭೭
ಕಿಥಿ—ಹಿಂಸಾಸಂಕ್ಲೇಶನಯೋಃ, ೬
ಕ್ರಿಮು—ಪಾದವಿಕ್ಷೇಪೇ, ೪೦
ಕ್ಲಿದಿ—ಪರಿವೇದನೇ, ೮
ಕ್ಲಿದಿ—ಪರಿದೇವನೇ, ೮೩
ಕ್ಲಿನ್ದ್—ಆರ್ದ್ರಭಾವೇ, ೧೯೬
ಕ್ಲಿಲ—ಶೈತ್ಯಕ್ರೀಡನಯೋಃ, ೨೨೫
ಕ್ಲಿಶ—ಉಪತಾಪೇ, ೨೦೧
ಕ್ಲಿಶ—ವಿಬಾಧನೇ, ೨೪೯
ಕ್ಷಿ—ನಿವಾಸಗತ್ಯೋಃ, ೨೧೫
ಕ್ಷಿಣು—ಹಿಂಸಾಯಾಂ, ೨೩೯
ಕ್ಷಿಪ್—ಹಿಂಸಾಯಾಂ, ೨೪೭
ಕ್ಷಿಪ—ಪ್ರೇರಣೇ, ೧೮೩
ಕ್ಷಿಪ—ಪ್ರೇರಣೇ, ೨೧೩
ಕ್ಷಿಪ—ಪ್ರೇರಣೇ, ೨೯೧
ಕ್ಷಿವು—ನಿರಸನೇ, ೧೮೨
ಕೀಜ—ಅವ್ಯಕ್ತೇ ಶಬ್ದೇ, ೧೪
ಕೀಟ—ಗತೌ, ೧೮
ಕೀಲ—ಬಂಧೇ, ೪೩
ಕೀವೃ—ರುಜಾಯಾಂ, ೫೩
ಕ್ರೀಡೃ—ವಿಹಾರೇ, ೨೨
ಕ್ಲೀಬೃ—ಅಧಾರ್ಷ್ಟ್ಯೇ, ೧೦೫
ಕ್ಷೀ—ಕ್ಷಯೇ, ೧೪
ಕ್ಷೀಬೃ—ಮದೇ, ೧೦೫
ಕ್ಷೀವು—ನಿರಸನೇ, ೫೨
ಕ್ಷ್ಮೀಲ—ನಿಮೇಷಣೇ, ೪೩
ಕು—ಶಬ್ದೇ, ೧೬೪
ಕುಕ—ಆದಾನೇ, ೮೮
ಕುಕ್ಕ—ಆದಾನೇ, ೮೮
ಕುರ್ಕ—ಆದಾನೇ, ೮೮
ಕುಕಿ—ಗತೌ, ೯೦
ಕುಙ್—ಶಬ್ದೇ, ೧೨೫
ಕುಙ್—ಶಬ್ದೇ, ೨೩೧
ಕುಚ—ಸಂಪರ್ಜನಕೌಟಿಲ್ಯಪ್ರತಿಷ್ಟಂಭ
ವಿಲೇಖನೇಷು, ೧೫೦

ಕುಚ—ಶಬ್ದೋತ್ತರೇ, ೧೧
ಕುಚ—ಸಂಕೋಚನೇ, ೨೨೭
ಕುಚು—ಸ್ತೇಯಕರಣೇ, ೧೧
ಕುಜ—ಅವ್ಯಕ್ತೇ ಶಬ್ದೇ, ೧೪
ಕುಜಿ—ಹಿಂಸಾಗತ್ಯೋಃ, ೬೫
ಕುಟ—ಕೌಟಿಲ್ಯೇ, ೨೨೭
ಕುಟ—ಗತೌ, ೧೮
ಕುಟ—ಛೇದನೇ, ೨೫೫
ಕುಟ್ಟ—ವೈಕಲ್ಯೇ, ೧೯
ಕುಟಿ—ಗತಿವೈಕಲ್ಯೇ, ೧೭
ಕುಠ—ಛೇದನೇ, ೨೧
ಕುಠ—ಛೇದನೇ, ೨೫೫
ಕುಠಿ—ಆಲಸ್ಯೇ ಚ, ೨೨
ಕುಡ—ಬಾಲ್ಯೇ, ೨೨೯
ಕುಡಿ—ವೈಕಲ್ಯೇ, ೨೪
ಕುಡಿ—ದಾಹೇ, ೯೯
ಕುಡಿ—ಅನೃತಭಾಷಣೇ, ೨೫೩
ಕುಡಿ—ರಕ್ಷಣೇ, ೨೬೩
ಕುಣ—ಶಬ್ದೇ, ೩೩
ಕುಣ—ಶಬ್ದೋಪಕರಣಯೋಃ, ೨೨೧
ಕುಣ—ಆಮಂತ್ರಣೇ, ೨೮೬
ಕುಣ—ಸಂಕೋಚೇ, ೨೭೧
ಕುತ್ಸ—ಅವಕ್ಷೇಪೇ, ೨೭೩
ಕುಥ—ಪೂತೀಭಾವೇ, ೧೮೨
ಕುಥ—ಸಂಕ್ಲೇಶೇ, ೨೪೮
ಕುಥಿ—ಹಿಂಸಾಸಂಕ್ಲೇಶನಯೋಃ, ೬
ಕುರ್ದ—ಕ್ರೀಡಾಯಾಮೇವ, ೮೪
ಕುಪ—ರೋಷೇ, ೧೯೫
ಕುಪ—ಭಾಷಾರ್ಥೇ, ೨೭೯
ಕುಬಿ—ಛಾದನೇ, ೨೬೭
ಕುಭ—ಧಾರಣೇ, ೭೭
ಕುಭಿ—ಗರ್ವೇ, ೭೭
ಕುಮಾರ—ಕ್ರೀಡಾಯಾಂ, ೨೮೪
ಕುರ—ಶಬ್ದೇ, ೨೨೪
ಕುಲ—ಆವರಣೇ, ೪೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಲ—ಸಂಖ್ಯಾನೇ, ೧೪೭
ಕುಶಿ—ಭಾಷಾರ್ಥೇ, ೨೭೯
ಕುಶಿರ್—ಶ್ಲೇಷಣೇ, ೧೯೩
ಕುಕ್ಷ—ಪೂರಣೇ, ೧೧೯
ಕುಷ—ನಿಷ್ಕರ್ಷೇ, ೨೪೯
ಕುಕ್ಷ—ಅವಕಾಶೇ, ೨೫೩
ಕುಸಿ—ಭಾಷಾರ್ಥೇ, ೨೭೯
ಕುಸ್ಮ—ಕುಸ್ಮಯನೇ, ೨೭೪
ಕುಹ—ಹಿಂಸಾಗತ್ಯೋಃ, ೬೬
ಕುಹ—ವಿಸ್ಮಾಪನೇ, ೨೮೬
ಕ್ನಸ್—ಹ್ವರಣದೀಪ್ತ್ಯೋಃ, ೧೮೨
ಕ್ರುಡ—ಚಲನೇ, ೩೭
ಕ್ರುಡ—ಘಸನೇ, ೨೨೯
ಕ್ರುಧ—ರೋಷೇ, ೧೯೫
ಕ್ರುಶ—ಆಹ್ವಾನೇ, ೧೫೦
ಕ್ರುಂಚ—ಕೌಟಿಲ್ಯಾಲ್ಪೀಭಾವಯೋಃ, ೧೧
ಕ್ಲುಂಚ—ಕೌಟಿಲ್ಯಾಲ್ಪೀಭಾವಯೋಃ, ೧೧
ಕ್ಷುಜ—ಗತೌ, ೧೨೬
ಕ್ಷುದಿರ್—ಸಂಪೇಷಣೇ, ೨೩೪
ಕ್ಷುಧ—ಬುಭುಕ್ಷಾಯಾಂ, ೧೮೭
ಕ್ಷುಭ—ಸಂಚಲನೇ, ೧೩೨
ಕ್ಷುಭ—ಸಂಚಲನೇ, ೧೯೬
ಕ್ಷುಭ—ಸಂಚಲನೇ, ೨೪೯
ಕ್ಷುರ—ವಿಲೇಖನೇ, ೨೨೪
ಕ್ಷ್ಣು—ತೇಜನೇ, ೧೬೩
ಕೂಜ—ಅವ್ಯಕ್ತೇ ಶಬ್ದೇ, ೧೪
ಕೂಟ—ಗತೌ, ೧೮
ಕೂಟ—ಪ್ರಮಾದೇ, ೨೭೩
ಕೂಟ—ದಾಹೇ, ೨೮೫
ಕೂಬಿ—ಮರ್ದನೇ, ೩೧
ಕ್ನೂಙ್—ಶಬ್ದೇ, ೨೪೩
ಕ್ರೂಡ—ಚಲನೇ, ೩೭
ಕ್ರೂಯೀ—ಶಬ್ದೇ, ೧೧೧

ಕೃಞ್—ಹಿಂಸಾಯಾಂ, ೨೦೮
ಕೃಞು—ಅಪನಯನೇ, ೩೬
ಕೃತೀ—ಛೇದನೇ, ೨೧೪
ಕೃತೀ—ವೇಷ್ಟನೇ, ೨೩೪
ಕೃಪ—ದೌರ್ಬಲ್ಯೇ, ೨೮೩
ಕೃಪೂ—ಸಾಮರ್ಥ್ಯೇ, ೧೩೪
ಕೃಶ—ತನೂಕರಣೇ, ೧೯೪
ಕೃಷ—ವಿಲೇಖನೇ, ೫೭
ಕೃಷ—ವಿಲೇಖನೇ, ೨೧೩
ಕೄ—ವಿಕ್ಷೇಪೇ, ೨೧೬
ಕೄಞ್—ಹಿಂಸಾಯಾಂ, ೨೪೪
ಕೄತ—ಸಂಶಬ್ದೇ, ೨೬೭
ಕೄಷ್—ವಯೋಹಾನೌ, ೧೮೫
ಕೇಙೃ—ಗತಿಪ್ರೇಷಣಶ್ಲೇಷಣೇಷು, ೩೭
ಕೇತ—ಆಮಂತ್ರಣೇ, ೨೮೬
ಕೇಪೃ—ಗತೌಚ, ೧೦೪
ಕೇಲೃ—ಗತೌ, ೪೬
ಕೇವೃ—ಸೇಚನೇ, ೧೧೫
ಕ್ಷೇಲೃ—ಗತೌ, ೪೬
ಕ್ಲೇಶ—ಬಾಧನೇ, ೧೧೬
ಕೈ—ಶಬ್ದೇ, ೬೯
ಕೈಲೃ—ಗತೌ, ೪೬
ಕ್ಷೈ—ಕ್ಷಯೇ, ೭೦
ಕ್ಷ್ಮೈ—ಧಾರಣೇ, ೧೦೮
ಕೋಲ—ಆವರಣೇ, ೪೪
ಕೋಲೃ—ಗತಿಪ್ರತಿಘಾತೇ, ೫೧
ಕೌಲೃ—ಗತೌ, ೪೭

ಖ

ಖಗಿ—ಗತೌ, ೯
ಖಜ—ಮಂಥೇ, ೧೪
ಖರ್ಜ—ಮಾರ್ಜನೇಚ, ೧೩
ಖಜಿ—ಗತಿವೈಕಲ್ಯೇ, ೧೪
ಖಟ—ಕಾಂಕ್ಷಾಯಾಂ, ೧೭
ಖಟ್ಟ—ಸಂವರಣೇ, ೨೫೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಡ—ಭೇದೇ, ೨೫೯
ಖಡಿ—ಖಂಡನೇ, ೨೬
ಖಡಿ—ಮಂಥೇ, ೧೦೧
ಖಡಿ—ಭೇದೇ, ೨೫೯
ಖದ—ಹಿಂಸಾಯಾಂ, ೭
ಖರ್ದ—ದಂಶನೇ, ೭
ಖನು—ಅವದಾರಣೇ, ೧೫೪
ಖರ್ಬ—ದರ್ಪೇ, ೫೪
ಖಲ—ಚಲನೇ, ೪೮
ಖಲ—ವಿಲೇಖನೇ, ೨೨೭
ಖಲ್ಲ—ಚಲನೇ, ೪೮
ಖವ—ಪೂತಿಪ್ರಾದುರ್ಭಾವೇ, ೨೫೧
ಖಾದೃ—ಭಕ್ಷಣೇ, ೭
ಖ್ಯಾ—ಪ್ರಕಥನೇ, ೧೬೭
ಖಿಕಿ—ಗತೌ, ೯೦
ಖಿಟ—ಉತ್ರಾಸನೇ, ೧೬
ಖಿದ—ದೈನ್ಯೇ, ೨೦೧
ಖಿದ—ಪರಿಘಾತೇ, ೨೧೪
ಖಿದಿ—ದೈನ್ಯೇ, ೨೩೭
ಖುಙ್—ಶಬ್ದೇ, ೧೨೫
ಖುಚು—ಸ್ತೇಯಕರಣೇ, ೧೧
ಖುಣ—ಶಬ್ದೇ, ೩೩
ಖುಣ—ಗ್ರಹಣೇ, ೧೦೭
ಖುರ್ದ—ಕ್ರೀಡಾಯಾಂ, ೮೪
ಖುರ—ಛೇದನೇ, ೨೨೪
ಖೃ—ಗತೌ, ೯೦
ಖೃಣಿ—ಅಪನಯನೇ, ೩೬
ಖೇಟ—ಭಕ್ಷಣೇ, ೨೮೪
ಖೇಣೃ—ಗತಿಪ್ರೇಷಣಶ್ಲೇಷಣೇಷು, ೩೭
ಖೇಲೃ—ಗತೌ, ೪೬
ಖ್ವೇಲೃ—ಗತೌ, ೪೬
ಖೇವೃ—ಸೇಚನೇ, ೧೧೫
ಖೈ—ಖಾದನೇ, ೭೦
ಖೈಲೃ—ಗತೌ, ೪೬
ಖೋಟೃ—ಕ್ಷೇಪೇ, ೨೮೪
ಖೋಲೃ—ಗತಿಪ್ರತಿಘಾತೇ, ೫೧
ಖೌಲೃ—ಗತೌ, ೪೬

ಗ

ಗಗ್ಘ—ಹಸನೇ, ೮
ಗಜ—ಶಬ್ದೇ, ೧೫
ಗರ್ಜ—ಶಬ್ದೇ, ೧೫
ಗರ್ಜ—ಕಲಕಲಧ್ವನೌ, ೨೬೬
ಗಜಿ—ಶಬ್ದೇ, ೧೫
ಗಡ—ಸೇಚನೇ, ೧೩೭
ಗಡ್ವ—ವದನೈಕದೇಶೇ, ೨೩
ಗಡಿ—ವದನೈಕದೇಶೇ, ೨೬
ಗಣ—ಶಬ್ದೇ, ೩೩
ಗಣ—ಸಂಖ್ಯಾನೇ, ೨೮೨
ಗಥ—ವಿಲೋಡನೇ, ೧೪೮
ಗದ—ವ್ಯಕ್ತಾಯಾಂವಾಚಿ, ೭
ಗದ—ದೇವಶಬ್ದೇ, ೨೮೨
ಗರ್ದ—ಶಬ್ದೇ, ೭
ಗರ್ದ—ಕುತ್ಸಿತೇ ಶಬ್ದೇ, ೮೫
ಗರ್ಧ—ಅಭಿಕಾಂಕ್ಷಾಯಾಂ, ೨೬೯
ಗರ್ಬ—ದರ್ಪೇ. ೫೪
ಗಮ್ಲೃ—ಗತೌ, ೭೫
ಗಲ—ಗತೌ, ೪೬
ಗಲ್ಲ—ಗತೌ, ೪೬
ಗಲ್ಭ—ಆಧಾರ್ಷ್ಟ್ಯೇ, ೧೦೬
ಗರ್ವ—ಗತೌ, ೩೦
ಗರ್ವ—ಮಾನೇ, ೨೮೭
ಗವೇಷ—ಮಾರ್ಗಣೇ, ೨೮೫
ಗಹ—ಹಿಂಸಾಗತ್ಯೋಃ, ೬೬
ಗರ್ಹ—ಕುತ್ಸನೇ, ೧೨೩
ಗರ್ಹ—ನಿಂದಾಯಾಂ, ೨೯೭
ಗಹ್ಲ—ಕುತ್ಸನೇ, ೧೨೩
ಗಹಿ—ಹಿಂಸಾಗತ್ಯೋಃ, ೬೬
ಗ್ರಥಿ—ಕೌಟಿಲ್ಯೇ, ೮೬
ಗ್ರಸ—ಗ್ರಹಣೇ, ೨೭೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಸೃ—ಅದನೇ, ೧೨೨
ಗ್ರಹ—ಉಪಾದಾನೇ, ೨೪೪
ಗ್ರಂಥ—ಸಂದರ್ಭೇ, ೨೪೮
ಗ್ರಂಥ—ಸಂದರ್ಭೇ, ೨೯೬
ಗಂಧ—ಅರ್ದನೇ, ೨೭೦
ಗ್ಲಸೃ—ಅದನೇ, ೧೨೨
ಗಾಙ್—ಗತೌ, ೧೨೬
ಗಾಢ—ಶೀವ್ರಗತೌ, ೨೭
ಗಾಥೃ—ಪ್ರತಿಷ್ಠಾಲಿಪ್ಸಾರ್ಥಯೋಃ ಗ್ರಂಥೇಚ, ೮೧
ಗಾಧೃ—ಪ್ರತಿಷ್ಠಾಲಿಪ್ಸಾರ್ಥಯೋಃ ಗ್ರಂಥೇಚ, ೮೧
ಗಾಹೃ—ವಿಲೋಡನೇ, ೧೨೪
ಗಿಡಿ—ಜನ್ಮನಿ, ೨೭
ಗಿಣ—ಶಬ್ದೇ, ೩೩
ಗಿಲ—ಅದನೇ, ೪೯
ಗಿಲ್ಲ—ಅದನೇ, ೪೯
ಗೀಲ—ಅರ್ದನೇ, ೪೯
ಗುಙ್—ಶಬ್ದೇ, ೧೨೫
ಗುಜ—ಶಬ್ದೇ, ೧೫
ಗುಜ—ಶಬ್ದೇ. ೨೨೮
ಗುಜು—ಸ್ತೇಯಕರಣೇ, ೧೧
ಗುಜಿ—ಶಬ್ದೇ, ೧೫
ಗ್ರುಚಿ—ಗತೌ, ೧೧
ಗ್ರುಚು—ಸ್ತೇಯಕರಣೇ, ೧೧
ಗ್ಲುಚಿ—ಗತೌ, ೧೧
ಗ್ಲುಚು—ಸ್ತೇಯಕರಣೇ, ೧೧
ಗುಟ—ಗತೌ, ೧೮
ಗುಠಿ—ಆಲಸ್ಯೇಚ, ೨೨
ಗುಡ—ಮಾಧುರ್ಯೇ, ೨೩
ಗುಡ—ರಕ್ಷಾಯಾಂ, ೨೨೮
ಗುಡಿ—ಹಿಂಸಾಗತ್ಯೋಃ, ೨೬
ಗುಡಿ—ವೇಷ್ಟನೇ, ೨೭೯
ಗುಣ—ಶಬ್ದೇ, ೩೩
ಗುಣ—ಆಮಂತ್ರಣೇ, ೨೮೬
ಗುರ್ದ—ಕ್ರೀಡಾಯಾಂ, ೮೪
ಗುಧ—ರೋಷೇ, ೨೪೯
ಗುಧ—ಪರಿವೇಷ್ಟನೇ, ೧೮೩
ಗುಪ—ಗೋಪನಕುತ್ಸನಯೋಃ, ೧೨೯
ಗುಪ—ವ್ಯಾಕುಲತ್ವೇ, ೧೯೬
ಗುಪ—ಭಾಷಾರ್ಥೇ, ೨೭೯
ಗುಪೂ—ರಕ್ಷಣೇ, ೨೮
ಗುಫ—ಗ್ರಂಥೇ, ೨೧೯
ಗುಂಫ—ಗ್ರಂಥೇ, ೨೧೯
ಗುರೀ—ಉದ್ಯಮೇ, ೨೩೧
ಗುರೀ—ಉದ್ಯಮೇ, ೨೭೨
ಗುಲ—ಅದನೇ, ೪೯
ಗುಲ್ಲ—ಅದನೇ, ೪೯
ಗುಲ್ಫ—ಗತೌ, ೩೦
ಗುರ್ವಿ—ಉದ್ಯಮೇ, ೫೩
ಗುಹ—ಹಿಂಸಾಗತ್ಯೋಃ, ೬೬
ಗುಹೂ—ಸಂವರಣೇ, ೧೫೬
ಗೂ—ಪುರೀಷೋತ್ಸರ್ಗೇ, ೨೩೧
ಗೂಡ—ನಿವಾಸೇ, ೨೭
ಗೂರೀ—ಹಿಂಸಾಯಾಂ, ೨೦೦
ಗೂಲ—ಅದನೇ, ೪೯
ಗೂಹ—ಹಿಂಸಾಗತ್ಯೋಃ, ೬೬
ಗೃ—ಸೇಚನೇ, ೭೪
ಗೃಜ—ಶಬ್ದೇ, ೧೫
ಗೃಜಿ—ಶಬ್ದೇ, ೧೫
ಗೃಧು—ಅಭಿಕಾಂಕ್ಷಾಯಾಂ, ೧೯೭
ಗೃಹ—ಗ್ರಹಣೇ, ೨೮೬
ಗೄ—ನಿಗರಣೇ, ೨೧೬
ಗೄ—ಶಬ್ದೇ, ೨೪೬
ಗೄ—ವಿಜ್ಞಾನೇ, ೨೭೩
ಗೇಷೃ—ಗತಿಪ್ರೇಷಣಶ್ಲೇಷಣೇಷು, ೩೭
ಗೇಪೃ—ಗತೌಚ, ೧೦೪
ಗೇವೃ—ಸೇಚನೇ, ೧೧೫
ಗ್ರೇವೃ—ಸೇಚನೇ, ೧೧೫
ಗ್ಲೇಪೃ—ಗತೌಚ, ೧೦೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ಲೇವೃ—ಸೇಚನೇ, ೧೧೫
ಗ್ಲೇಷ—ಅನ್ವಿಚ್ಛಾಯಾಂ, ೧೨೦
ಗ್ಲೈ—ಶಬ್ದೇ, ೬೯
ಗ್ಲೈ—ಹರ್ಷಕ್ಷಯೇ, ೬೮
ಗ್ಲೈಪೃ—ದೈನ್ಯೇ, ೧೦೩
ಗೋಡೃ—ಬಂಧನೇ, ೨೩
ಗೋಙೃ—ಗತಿಪ್ರೇಷಣಶ್ಲೇಷಣೇಷು, ೩೭
ಗೋಮ—ಉಪಲೇಪೇ, ೨೮೪
ಗ್ಲಾ—ಹರ್ಷೇ, ೬೮

ಘ

ಘಜ್—ಶಬ್ದೇ, ೧೨೫
ಘಟ—ಚೇಷ್ಟಾಯಾಂ, ೧೩೫
ಘಟ—ಸಂಘಾತೇ, ೨೭೫
ಘಟ—ಭಾಷಾರ್ಥೇ, ೨೭೯
ಘಟ್ಟ—ಖಂಡನೇ, ೧೯
ಘಟ್ಟ—ಚಲನೇ, ೨೫೬
ಘಟಿ—ನಿರ್ಣಯೇ, ೧೮
ಘಟಿ—ಭಾಷಾರ್ಥೇ, ೨೭೯
ಘಣ—ಶಬ್ದೇ, ೩೩
ಘಣು—ಘಂಟಾನಾದೇ, ೨೪೦
ಘರ್ಬ—ದರ್ಪೇ, ೫೪
ಘರಟ್ಟ—ಹಿಂಸಾಯಾಂ, ೧೯
ಘಷ—ಭಾಷಾರ್ಥೇ, ೨೭೯
ಘ್ರಾ—ಗಂಧೋಪಾದಾನೇ, ೭೧
ಘಿಣಿ—ಗ್ರಹಣೇ, ೧೦೭
ಘಿಣು—ಘಿಂಗಧ್ವನೌ, ೨೪೦
ಘುಜ್—ಶಬ್ದೇ, ೧೨೫
ಘುಜು—ಸ್ತೇಯಕರಣೇ, ೧೧
ಘುಟ—ಪರಿವರ್ತನೇ, ೧೩೧
ಘುಟ—ಪ್ರತಿಘಾತೇ, ೨೩೦
ಘುಟ್ಟ—ಚಲನೇ, ೯೭
ಘುಣ—ಗ್ರಹಣೇ, ೧೦೭
ಘುಣ—ಭ್ರಮಣೇ, ೨೨೧
ಘುಣಿ—ಗ್ರಹಣೇ, ೧೦೭

ಘುರ್ದ—ಕ್ರೀಡಾಯಾಂ, ೮೪
ಘುರ—ಭೀಮಾರ್ಥಶಬ್ದಯೋಃ, ೨೨೪
ಘುರ್ವೀ—ಹಿಂಸಾಯಾಂ, ೫೨
ಘುಷ—ಉತ್ಸರ್ಗೇ, ೨೭೦
ಘುಷಿರ್—ಶಬ್ದೇ, ೫೫
ಘುಷಿರ್—ಕಾಂತಿಕರಣೇ, ೧೨೪
ಘುಷಿರ್—ವಿಶಬ್ದೇ, ೨೬೧
ಘುಷಿರ್—ವಿಶಬ್ದೇ, ೨೭೬
ಘೂರ್ಣ—ಭ್ರಮಣೇ, ೧೦೭
ಘೂರ್ಣ—ಭ್ರಮಣೇ, ೨೨೧
ಘೂರೀ—ಹಿಂಸಾಯಾಂ, ೨೦೦
ಘೃ—ಸೇಚನೇ, ೭೪
ಘೃ—ಕ್ಷರಣದೀಪ್ತ್ಯೋಃ, ೧೭೬
ಘೃಣ—ಶಬ್ದೇ, ೩೩
ಘೃಣ—ದೀಪ್ತೌ, ೨೩೯
ಘೃಣಿ—ಗ್ರಹಣೇ, ೧೦೭
ಘೃಷು—ಸಂಘರ್ಷೇ, ೬೧
ಘೇಙೃ—ಗತಿಪ್ರೇಷಣಶ್ಲೇಷಣೇಷು, ೩೭
ಘೇವೃ—ಸೇಚನೇ, ೧೧೫
ಘೋಙೃ—ಗತಿಪ್ರೇಷಣಶ್ಲೇಷಣೇಷು, ೩೭

ಙ

ಙಾತೃಷಾ—ಪಿಪಾಸಾಯಾಂ, ೧೯೪
ಙಾಕ್ಷ್ವಿದಾ—ಗಾತ್ರಪ್ರಕ್ಷರಣೇ, ೧೮೭
ಙುಙ್—ಶಬ್ದೇ, ೧೨೫

ಚ

ಚಕ—ತೃಪ್ತೌ ಪ್ರತಿಘಾತೇ ಚ, ೮೯
ಚಕ—ತೃಪ್ತೌ, ೧೩೮
ಚಕ್ಕ—ತೃಪ್ತೌ ಪ್ರತಿಘಾತೇ ಚ, ೮೯
ಚರ್ಕ—ತೃಪ್ತೌ ಪ್ರತಿಘಾತೇ ಚ, ೮೯
ಚಕಾಸೃ—ದೀಪ್ತೌ, ೧೬೯
ಚರ್ಚ—ಪರಿಭಾಷಣತರ್ಜನಯೋಃ, ೬೨
ಚರ್ಚ—ದೀಪ್ತೌ, ೯೬
ಚರ್ಚ—ಅಧ್ಯಯನೇ, ೨೭೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚರ್ಚ—ಪರಿಭಾಷಣತರ್ಜನಯೋಃ ೨೧೬
ಚಚಿ—ಗತೌ, ೧೧
ಚಟ—ಪ್ರೈಷ್ಯೇ ಮಾನೇಚ, ೧೮
ಚಟ—ಭೇದೇ, ೨೭೫
ಚಡಿ—ತೈಕ್ಷ್ಣ್ಯೇ, ೨೫
ಚಡಿ—ಕೋಪೇ, ೧೦೦
ಚಣ—ಶಬ್ದೇ, ೩೩
ಚಣ—ದಾನೇ, ೧೩೯
ಚತೆ—ಯಾಚನೇಚ, ೧೫೨
ಚದಿ—ಆಹ್ಲಾದನೇ ದೀಪ್ತೌಚ, ೮
ಚದೆ—ಯಾಚನೇಚ, ೧೫೨
ಚನ—ಶಬ್ದೇ, ೩೩
ಚನ—ಸಂಭಕ್ತೌ, ೩೮
ಚನ್ನ—ಸಂಭಕ್ತೌ, ೩೮
ಚನು—ಸ್ಮರಣೇ, ೧೪೦
ಚಪ—ಸಾಂತ್ವನೇ, ೨೮
ಚಪ—ಕಲ್ಕನೇ, ೨೬೪
ಚಪಿ—ಕ್ಷಾಂತೌ, ೨೫೮
ಚಬ—ಮರ್ದನೇ, ೩೧
ಚಬಿ—ಮರ್ದನೇ, ೩೧
ಚಮು—ಅದನೇ, ೩೯
ಚಯ—ಗತೌ, ೧೦೯
ಚರ—ಅಸಂಶಯೇ, ೨೭೮
ಚರ—ಪ್ರತಿಯತ್ನೇ, ೨೮೩
ಚಲ—ಕಂಪನೇ, ೧೪೬
ಚಲ—ವಿಲಸನೇ, ೨೨೬
ಚವ—ಗತೌ, ೫೨
ಚರ್ವ—ಗತೌ, ೩೦
ಚರ್ವ—ಅದನೇ, ೫೩
ಚಷ—ಭಕ್ಷಣೇ, ೧೫೬
ಚಷ್ಕ—ವ್ಯಥನೇ, ೨೫೯
ಚಕ್ಷಿಙ್—ವ್ಯಕ್ತಾಯಾಂವಾಚಿ, ೧೭೦
ಚಹ—ಪರಿಕಲ್ಕನೇ, ೬೫
ಚಹ—ಪರಿಕಲ್ಕನೇ, ೨೮೩
ಚರ್ಹ—ಪ್ರಯತ್ನೇ, ೧೨೩
ಚ್ಯವ—ಹಸನೇ, ೨೭೮
ಚ್ವನ—ಸಂಭಕ್ತೌ, ೩೮
ಚಾಕಶೃ—ದೀಪ್ತೌ, ೧೬೯
ಚಾಯೃ—ಪೂಜಾನಿಶಾಮನಯೋಃ, ೧೫೫
ಚಿಕೃ—ಗತೌ, ೯೦
ಚಿಞ್—ಚಯನೇ, ೨೦೭
ಚಿಟ—ಪ್ರೈಷ್ಯೇ ಮಾನೇಚ, ೧೮
ಚಿಣು—ಶಬ್ದೇ, ೨೩೯
ಚಿತ—ಸಂದೇಹೇ, ೨೭೧
ಚಿತ್ರ—ವಿಚಿತ್ರದರ್ಶನಯೋಃ, ೨೮೮
ಚಿತಿ—ಸಂಜ್ಞಾನೇ, ೫
ಚಿತಿ—ಸ್ಮೃತ್ಯಾಂ, ೨೫೨
ಚಿರ್ಬ—ರುಜಾಯಾಂ, ೫೪
ಚಿರ—ವಿಯೋಜನಸಂಪರ್ಚನಯೋಃ, ೨೯೫
ಚಿಲ—ಶೈಥಿಲ್ಯೇ, ೪೫
ಚಿಲ—ಅದನೇ, ೪೯
ಚಿಲ—ಜಿಘಾಂಸಾಯಾಂ, ೨೦೯
ಚಿಲ—ವೇಷ್ಟನೇ, ೨೨೬
ಚಿಲ್ಲ—ಶೈಥಿಲ್ಯೇ, ೪೫
ಚಿಲ್ಲ—ಅದನೇ, ೪೯
ಚೀಕ—ಆಮರ್ಷಣೇ, ೨೯೬
ಚೀಭೃ—ಕತ್ಥನೇ, ೧೦೫
ಚೀಲ—ಅದನೇ, ೪೯
ಚೀಲೃ—ಗತೌ, ೪೬
ಚೀವೃ—ಸಂವರಣಾದಾನಯೋಃ, ೧೫೯
ಚೀವೃ—ಭಾಷಾರ್ಥೇ, ೨೭೯
ಚುಜ—ಗತೌ, ೧೨೬
ಚ್ಯುಜ—ಗತೌ, ೧೨೬
ಚುಚಿ—ಅಭಿಷವೇ, ೪೨
ಚುಟ—ಪ್ರೈಷ್ಯೇ ಮಾನೇಚ, ೧೮
ಚುಟ—ಛೇದನೇ, ೨೫೫
ಚುಟ್ಟ—ಅಲ್ಪೀಭಾವೇ, ೧೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚುಟ್ಟ—ಅಲ್ಪೀಭಾವೇ, ೨೫೬
ಚುಟಿ—ಛೇದನೇ, ೨೬೮
ಚುಡ್ಡ—ಹಾವಕರಣೇ, ೨೩
ಚುಡಿ—ಹಿಂಸಾಗತ್ಯೋಃ, ೨೬
ಚುಣ—ಸಂಕೋಚೇ, ೨೬೫
ಚ್ಯುತಿರ್—ಆಸೇಚನೇ, ೫
ಚುದ—ಸಂಚೋದನೇ, ೨೬೩
ಚುದಿರ್—ನಿಶಾಮನೇ, ೧೫೪
ಚುಪ—ಕುಂಠಾಯಾಂ ಗತೌ, ೨೯
ಚುಬ—ಮರ್ದನೇ, ೩೧
ಚುಬಿ—ಮರ್ದನೇ, ೩೧
ಚುರ—ಸ್ತೇಯೇ, ೨೫೨
ಚುಲ—ದ್ರಾವಕರಣೇ, ೪೫
ಚುಲ್ಲ—ದ್ರಾವಕರಣೇ, ೪೫
ಚುಷ—ಪಾನೇ, ೫೬
ಚುಷ್ಕ—ವ್ಯಥನೇ, ೨೫೯
ಚುಹ—ಪರಿಕಲ್ಕನೇ, ೬೫
ಚೂಚೀ—ಅಭಿಷವೇ, ೪೨
ಚೂರ್ಣ—ಪ್ರೇರಣೇ, ೨೬೬
ಚೂರೀ—ದಾಹೇ, ೨೦೦
ಚೇಷ್ಟ—ಚೇಷ್ಟಾಯಾಂ, ೯೮
ಚೇಲೃ—ಗತೌ, ೪೬

ಛ

ಛರ್ಚ್ಛ—ಪರಿಭಾಷಣತರ್ಜನಯೋಃ, ೨೧೬
ಛರ್ಛ—ಪರಿಭಾಷಣತರ್ಜನಯೋಃ, ೬೨
ಛದ—ಸಂವರಣೇ, ೨೫೬
ಛದ—ಅಪವಾರಣೇ, ೨೯೫
ಛರ್ದ—ವಮನೇ, ೨೬೮
ಛದೀ—ಸಂದೀಪೇ, ೨೯೭
ಛನ್ನ—ಸಂಛಕ್ತೌ, ೩೮
ಛಪಿ—ಗತೌ, ೨೫೭
ಛಮು—ಅದನೇ, ೩೯
ಛಷ—ಹಿಂಸಾಯಾಂ, ೧೫೬
ಛಿಣು—ವೀಣಾರವೇ, ೨೪೦
ಛಿದ್ರ—ಕರ್ಣಭೇದೇ, ೨೮೯
ಛಿದಿರ್—ದ್ವಿಧಾಕರಣೇ, ೨೩೩
ಛಿಲ—ಅದನೇ, ೪೯
ಛಿಲ್ಲ—ಅದನೇ, ೪೯
ಛೀಲ—ಅದನೇ, ೪೯
ಛುಜ—ಗತೌ, ೧೨೬
ಛುಟ—ಛೇದನೇ, ೨೨೮
ಛುಟ—ಛೇದನೇ, ೨೫೫
ಛುಟ್ಟ—ಚಲನೇ, ೨೫೬
ಛುಪ—ಸಂಸ್ಪರ್ಶೇ, ೨೨೨
ಛುರ—ಛೇದನೇ, ೨೨೮
ಛೇದ—ದ್ವೈಧೀಕರಣೇ, ೨೯೦
ಛೇಲೃ—ಗತೌ, ೪೬
ಛೋ—ಛೇದನೇ, ೧೮೫

ಜ

ಜಗ—ಆದಾನೇ, ೮೮
ಜಘಿ—ಗತೌ, ೩೦
ಜರ್ಚ—ಪರಿಭಾಷಣತರ್ಜನಯೋಃ, ೬೨
ಜಜ—ಯುದ್ಧೇ, ೧೪
ಜರ್ಜ್ಝ—ಪರಿಭಾಷಣತರ್ಜನಯೋಃ, ೨೧೬
ಜಜಿ—ಯುದ್ಧೇ, ೧೪
ಜಟ—ಸಂಘಾತೇ, ೧೬
ಜಠ—ಧಾರಣೇ, ೨೧
ಜಣ—ಶಬ್ದೇ, ೩೩
ಜತ್ರಿ—ಸೂಚನೇ, ೨೫೨
ಜನ—ಜನನೇ, ೧೭೮
ಜನೀ—ಪ್ರಾದುರ್ಭಾವೇ, ೧೯೯
ಜಪ—ಮಾನಸೇಚ, ೨೮
ಜುಪ—ಕುಂಠಾಯಾಂ ಗತೌ, ೨೯
ಜಘ—ಮೈಥುನೇ, ೭೬
ಜಭಿ—ಗರ್ವೇ, ೭೭
ಜಭಿ—ಗಾತ್ರವಿನಾಮೇ, ೧೦೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಭಿ—ನಾಶೇ, ೨೭೫
ಜಮು—ಅದನೇ, ೩೯
ಜಲ—ಚಲನೇ, ೪೮
ಜಲ—ಧಾನ್ಯೇ, ೧೪೬
ಜಲ—ಅಪವಾರಣೇ, ೨೫೪
ಜಲ—ಪ್ರಕಾಶನೇ, ೨೮೮
ಜಲ್ಪ—ವ್ಯಕ್ತಾಯಾಂ ವಾಚಿ, ೨೮
ಜಲ್ಲ—ಚಲನೇ, ೪೮
ಜಷ—ಹಿಂಸಾಯಾಂ, ೫೮
ಜಕ್ಷ—ಭಕ್ಷಣ ಹಸನಯೋಃ, ೧೬೯
ಜಸ—ಹಿಂಸಾಯಾಂ, ೨೭೦
ಜಸ—ತಾಡನೇ, ೨೭೫
ಜಸಿ—ರಕ್ಷಣೇ, ೨೬೩
ಜಸು—ಮೋಕ್ಷಣೇ, ೧೯೨
ಜ್ಞಪ—ಜ್ಞೀಯೇ, ೨೬೪
ಜ್ವರ—ರೋಗೇ, ೧೩೭
ಜ್ವಲ—ದೀಪ್ತೌ, ೧೪೧
ಜ್ವಲ—ದೀಪ್ತೌ, ೧೪೫
ಜಾಗೃ—ನಿದ್ರಾಕ್ಷಯೇ, ೧೬೯
ಜಾಪ—ಆಲಸ್ಯೇ, ೨೯
ಜಾಕ್ಷಿ—ಘೋರವಾಸಿತೇಚ, ೫೬
ಜ್ಞಾ—ಅವಬೋಧನೇ, ೧೪೨
ಜ್ಞಾ—ಅವಬೋಧನೇ, ೨೪೮
ಜ್ಞಾ—ನಿಯೋಜನೇ, ೨೭೭
ಜ್ಯಾ—ವಯೋಹಾನೌ, ೨೪೬
ಜಿ—ಅಭಿಭವೇ, ೭೮
ಜಿಜಿ—ಹಿಂಸಾಗತ್ಯೋಃ, ೬೫
ಜಿನ—ಸಂಭಕ್ತೌ, ೩೮
ಜಿನ್ನ—ಸಂಭಕ್ತೌ, ೩೮
ಜಿಮು—ಅದನೇ, ೩೯
ಜಿರಿ—ಜಿಘಾಂಸಾಯಾಂ, ೨೦೯
ಜಿಲ—ಅದನೇ, ೪೯
ಜಿಲ್ಲ—ಅದನೇ, ೪೯
ಜಿವಿ—ಪ್ರೀಣನೇ, ೫೪
ಜಿಷು—ಸೇಚನೇ, ೫೯
ಜ್ವಿದಾ—ಅವ್ಯಕ್ತೇ ಶಬ್ದೇ, ೭೬
ಜೀ—ಜಯೇ, ೫೨
ಜೀಲ—ಅದನೇ, ೪೯
ಜೀವ—ಪ್ರಾಣಧಾರಣೇ, ೫೨
ಜ್ಞೀಸ—ವಿವೇಕೇ, ೨೬೪
ಜುಜ—ಗತೌ, ೧೨೬
ಜುಡ—ಗತೌ, ೨೨೦
ಜುಡ—ಬಂಧನೇ, ೨೨೯
ಜುಡ—ವ್ಯಭಿಚಾರೇ, ೨೬೬
ಜುತೃ—ಭಾಷಣೇ, ೮೫
ಜುನ—ಸಂಭಕ್ತೌ, ೩೮
ಜುನ್ನ—ಸಂಭಕ್ತೌ, ೩೮
ಜುಲ—ರಕ್ಷಣೇ, ೨೬೬
ಜುಷ—ಹಿಂಸಾಯಾಂ, ೫೮
ಜುಷ—ಪರಿತರ್ಕೇ, ೨೯೬
ಜುಷೀ—ಪ್ರೀತಿಸೇವನಯೋಃ, ೨೩೨
ಜೂಪ—ಆಲಸ್ಯೇ, ೨೯
ಜೂರೀ—ಜೀರ್ಣೇ, ೧೯೯
ಜೂಷ—ಹಿಂಸಾಯಾಂ, ೫೮
ಜೂಹ—ಹಿಂಸಾಗತ್ಯೋಃ, ೬೬
ಜೃಬಿ—ಮರ್ದನೇ, ೩೧
ಜೃಭಿ—ಗರ್ವೇ, ೭೭
ಜೃಭಿ—ಗಾತ್ರವಿನಾಮೇ, ೧೦೬
ಜ್ರಾ—ವಯೋಹಾನೌ, ೨೯೫
ಜ್ರಾಷ್—ವಯೋಹಾನೌ, ೧೮೫
ಜೀಷ—ಗತೌ, ೧೨೦
ಜೀಹೃ—ಪ್ರಯತ್ನೇ, ೧೨೩
ಜೈ—ಕ್ಷಯೇ, ೭೦

ಝ

ಝರ್ಝ—ಪರಿಭಾಷಣತರ್ಜನಯೋಃ, ೬೨
ಝರ್ಝ್ಝ—ಪರಿಭಾಷಣ ತರ್ಜನಯೋಃ, ೨೧೬
ಝುಣ—ಶಬ್ದೇ, ೩೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚುಟ್ಟ—ಅಲ್ಪೀಭಾವೇ, ೨೫೬
ಚುಟಿ—ಛೇದನೇ, ೨೬೮
ಚುಡ್ಡ—ಹಾವಕರಣೇ, ೨೩
ಚುಡಿ—ಹಿಂಸಾಗತ್ಯೋಃ, ೨೬
ಚುಣ—ಸಂಕೋಚೇ, ೨೬೫
ಚ್ಯುತಿರ್—ಆಸೇಚನೇ, ೫
ಚುದ—ಸಂಚೋದನೇ, ೨೬೩
ಚುದಿರ್—ನಿಶಾಮನೇ, ೧೫೪
ಚುಪ—ಕುಂಠಾಯಾಂ ಗತೌ, ೨೯
ಚುಬ—ಮರ್ದನೇ, ೩೧
ಚುಬಿ—ಮರ್ದನೇ, ೩೧
ಚುರ—ಸ್ತೇಯೇ, ೨೫೨
ಚುಲ—ದ್ರಾವಕರಣೇ, ೪೫
ಚುಲ್ಲ—ದ್ರಾವಕರಣೇ, ೪೫
ಚುಷ—ಪಾನೇ, ೫೬
ಚುಷ್ಕ—ವ್ಯಥನೇ, ೨೫೯
ಚುಹ—ಪರಿಕಲ್ಕನೇ, ೬೫
ಚೂಚೀ—ಅಭಿಷವೇ, ೪೨
ಚೂರ್ಣ—ಪ್ರೇರಣೇ, ೨೬೬
ಚೂರೀ—ದಾಹೇ, ೨೦೦
ಚೇಷ್ಟ—ಚೇಷ್ಟಾಯಾಂ, ೯೮
ಚೇಲೃ—ಗತೌ, ೪೬

ಛ

ಛರ್ಚ್ಛ—ಪರಿಭಾಷಣತರ್ಜನಯೋಃ, ೨೧೬
ಛರ್ಛ—ಪರಿಭಾಷಣತರ್ಜನಯೋಃ, ೬೨
ಛದ—ಸಂವರಣೇ, ೨೫೬
